ಸಂಪುಟ: 05 ಸಂಚಿಕೆ: 344 ಪುಟಗಳು: 08 ಗುರುವಾರ 26 ಫೆಬ್ರವರಿ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5


**ಮುಂಜಾನೆ ಮಾತು**

ಬಡವರು, ಅಶಕ್ತರು, ರೋಗಿಗಳಲ್ಲಿ ಯಾರು ಶಿವನನ್ನು ಕಾಣುತ್ತಾರೋ ಅವರೇ ನಿಜವಾದ ಶಿವಭಕ್ತರು..

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ


## ವಿನ್ಯಾಸಗಾರರು ಬೇಕಾಗಿದ್ದಾರೆ



ಪೇಜ್ ಮೇಕರ್, ಇನ್ ಡಿಸೈನರ್, ಕನ್ನಡ ಟೈಪ್ ಮಾಡಬಲ್ಲವರು. ಬೆಂಗಳೂರಿನಲ್ಲಿ ವಾಸವಿರುವ ಬೆಂಗಳೂರು ಕಚೇರಿಯಲ್ಲಿ ಕೆಲಸ ಮಾಡಲು ಇಚ್ಛಿಸುವ (4 ಮಂದಿ) ಪತ್ರಿಕೋದ್ಯಮದಲ್ಲಿ ತೀವ್ರ ಆಸಕ್ತಿ, ಕನ್ನಡ ಭಾಷೆಯ ಮೇಲೆ ಹಿಡಿತ, ಸಾಮಾನ್ಯ ಜ್ಞಾನ, ಓದುವ ಹವ್ಯಾಸ ಹಾಗೂ ಉತ್ಸಾಹ ಕಾತುರವಿರುವ ಆಸಕ್ತರಿಗೆ ನಿರ್ದಿಷ್ಟ ಪದವಿಯ ಅಗತ್ಯವಿಲ್ಲ. ವಯೋಮಿತಿ ಗರಿಷ್ಠ 25 ವರ್ಷ.
ಆಸಕ್ತರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣ ವಿವರಗಳುಳ್ಳ ಅರ್ಜಿ ಸಲ್ಲಿಸಿ ಅಥವಾ ಮುಖತಃ ಭೇಟಿ ನೀಡಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
**9448225696**

**ಉದಯ ವಾಹಿನಿ**

#: 1230 'JAYAMAHAL 13th cross, 2nd phase, Girinagar, Bangalore-560085. (Near to bangalore one park, opposite mandya medical)
udayavahininews@gmail.com


## ಸಿದ್ದರಾಮಯ್ಯ ಹಾಗೂ ಡಿಕೆಶಿ ಸುಳ್ಳಾಟ, ಕಳ್ಳಾಟವನ್ನು ನಿಲ್ಲಿಸಲಿ

### ಸರ್ಕಾರಿ ಹುದ್ದೆ ಭರ್ತಿ ವಿಚಾರದಲ್ಲಿ ರಾಜ್ಯ ಸರ್ಕಾರದ ಇಚ್ಛಾಶಕ್ತಿ ಕೊರತೆ

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳು ಈ ಸುಳ್ಳಾಟ, ಕಳ್ಳಾಟವನ್ನು ನಿಲ್ಲಿಸಬೇಕು. 16 ಬಜೆಟ್ ಮಂಡಿಸಿ ದೇವರಾಜ ಅರಸು ಅವರ ದಾಖಲೆಯನ್ನು ಮುರಿದ ಅನುಭವಿ ಮುಖ್ಯಮಂತ್ರಿಗಳು ನಾಡಿನ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಕೊಡಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ಆಗ್ರಹಿಸಿದ್ದಾರೆ.

ಅವರು ಬುಧವಾರ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಸುಳ್ಳು ಹೇಳುವುದು ಬಿಟ್ಟರೆ ಬೇರೇನನ್ನೂ ಮಾಡಲು ಇವರಿಗೆ ಸಾಧ್ಯವಾಗಿಲ್ಲ. ಕಾಂಗ್ರೆಸ್ ಸರಕಾರದ ಮನೆದೇವರೇ ಸುಳ್ಳು ಎಂದು ದೂರಿದರು. ಏನೇ ಸಮಸ್ಯೆಗಳು ಬಂದರೂ ಹಿಂದಿನ ಬಿಜೆಪಿ ಸರಕಾರವನ್ನು ದೂರುತ್ತಾರೆ. ಕೇಂದ್ರ ಸರಕಾರದ ಮೇಲೆ ಜವಾಬ್ದಾರಿ ಹಾಕುವಂಥದ್ದು ಮತ್ತು ತನ್ನ ಜವಾಬ್ದಾರಿಯ ಸ್ಥಾನದಿಂದ ನುಣುಚಿಕೊಳ್ಳುವ ಷಡ್ಯಂತ್ರ, ಕುತಂತ್ರವನ್ನು ಸಿದ್ದರಾಮಯ್ಯರ ನೇತೃತ್ವದ ಕಾಂಗ್ರೆಸ್ ಸರಕಾರ ಕಳೆದ 3 ವರ್ಷಗಳಿಂದ ನಿರಂತರವಾಗಿ ಮಾಡಿಕೊಂಡು ಬರುತ್ತಿದೆ ಎಂದು ತಿಳಿಸಿದರು. ರಾಜ್ಯ ಕಾಂಗ್ರೆಸ್ ಸರಕಾರದ ನಿರ್ಲಕ್ಷ್ಯ ಧೋರಣೆಯೇ ಎಲ್ಲಾ ಸಮಸ್ಯೆಗಳಿಗೆ ಕಾರಣ ಎಂದು ಟೀಕಿಸಿದರು. ಇದು ನಾಡಿನ ಪ್ರತಿಯೊಬ್ಬರನ್ನೂ ಚಿಂತೆಗೀಡು ಮಾಡಿದೆ ಎಂದು ತಿಳಿಸಿದರು. ರಾಜ್ಯದ ಆರೋಗ್ಯ ಇಲಾಖೆ ಪರಿಸ್ಥಿತಿ ಕುರಿತು ಮಾತನಾಡಿದ ಅವರು, 108 ಆಂಬುಲೆನ್ಸ್ ಸಿಬ್ಬಂದಿ ಮತ್ತು ವೈದ್ಯರು ಬೀದಿಗಿಳಿದು ಹೋರಾಡುವ ಪರಿಸ್ಥಿತಿಯನ್ನು ಸರಕಾರ ತಂದಿಟ್ಟಿದೆ. ಕಾಂಗ್ರೆಸ್ಸಿನವರು ಸಾವಿರ ದಿನಗಳ ಸಾಧನಾ ಸಮಾವೇಶ ಮಾಡುತ್ತಾರೆ. ಸಮಸ್ಯೆಗಳನ್ನು ಪರಿಹರಿಸುತ್ತಿಲ್ಲ ಎಂದು ಟೀಕಿಸಿದರು. ಇವರ ಬೇಜವಾಬ್ದಾರಿಯಿಂದ ರಾಜ್ಯದ ಆರೋಗ್ಯ ಇಲಾಖೆಯೇ ಐ.ಸಿ.ಯುನಲ್ಲಿದೆ. ಔಷಧಿ ಕೊರತೆ ಕಾಡುತ್ತಿದೆ ಎಂದು ಆಕ್ಷೇಪಿಸಿದರು.

ಇವರ ಬೇಜವಾಬ್ದಾರಿ ವರ್ತನೆಯಿಂದ ರಾಜ್ಯದ ಆರೋಗ್ಯ ಇಲಾಖೆಯ ಆಸ್ಪತ್ರೆಗಳಲ್ಲಿ ಔಷಧಿ ಕೊರತೆ ಕಾಡುತ್ತಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿಜೀ ಅವರ ಜನಪ್ರಿಯತೆಯನ್ನು ಸಹಿಸಲಾಗದೇ, ಸರಕಾರಿ ಆಸ್ಪತ್ರೆಗಳ ಆವರಣದಲ್ಲಿದ್ದ ಜನೌಷಧಿ ಕೇಂದ್ರಗಳನ್ನು ಮುಚ್ಚಿ ಹಾಕುವ ಷಡ್ಯಂತ್ರ ಮಾಡಿದ್ದೇ ಇವರ ಘನಂದಾರಿ ಕೆಲಸ ಎಂದು ವಾಗ್ದಾಳಿ ನಡೆಸಿದರು.



ಬಡವರೇ ಅತಿ ಹೆಚ್ಚು ಸಂಖ್ಯೆಯಲ್ಲಿ ಹೋಗುವ ಸರಕಾರಿ ಆಸ್ಪತ್ರೆಗಳಲ್ಲಿ ಔಷಧಿ ಸಿಗದೇ ಕಳೆದೆರಡು ತಿಂಗಳಿನಿಂದ ಬಡವರು ಪರದಾಡುತ್ತಿದ್ದಾರೆ. ಖಾಸಗಿ ಫಾರ್ಮಸಿಯಿಂದ ಔಷಧಿ ಖರೀದಿಸಲು ಸರಕಾರಿ ವೈದ್ಯರೇ ತಿಳಿಸುವಂತಾಗಿದೆ ಎಂದು ಆಕ್ಷೇಪಿಸಿದರು.

ಸಿ.ಟಿ.ಸ್ಕ್ಯಾನ್, ಎಂಆರ್‌ಐ ಸೇವೆ ನೀಡುವ ಸಂಸ್ಥೆಗೆ 143 ಕೋಟಿಯನ್ನು ಸರಕಾರ ಬಾಕಿ ಉಳಿಸಿಕೊಂಡಿದೆ. ಇದರಿಂದ ಬಡವರು ಸಿ.ಟಿ.ಸ್ಕ್ಯಾನ್, ಎಂಆರ್‌ಐ ಸೇವೆ ಇಲ್ಲದೇ ಪರದಾಡಬೇಕಾಗಿದೆ. ಗರ್ಭಿಣಿಯರಿಗೂ ಅನಾನುಕೂಲ ಆಗುತ್ತಿದೆ. ವೈದ್ಯರು ಬೀದಿಗಿಳಿದು ಹೋರಾಟ ಮಾಡುವ ಪರಿಸ್ಥಿತಿ ನಿರ್ಮಾಣ ಮಾಡಿದ್ದಾರೆ ಎಂದರೆ ಈ ರಾಜ್ಯ ಸರಕಾರಕ್ಕೆ ಮಾನ ಮರ್ಯಾದೆ ಇದೆಯೇ ಎಂದು ರಾಜ್ಯದ ಜನರು ಕೇಳುತ್ತಿದ್ದಾರೆ ಎಂದರು.


**ದಲ್ಲಾಳಿಗಳನ್ನು ಸಾಕುವ ಸರ್ಕಾರ**

ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳು ಸಾವಿರ ದಿನಗಳ ಸಾಧನಾ ಸಮಾವೇಶ ಮಾಡುತ್ತ ಕುಳಿತಿದ್ದಾರೆ. ಆರೋಗ್ಯ ಕ್ಷೇತ್ರದಲ್ಲಿ ಬಡವರು ಅನುಭವಿಸುವ ಸಂಕಷ್ಟದ ಸಂಬಂಧ ರಾಜ್ಯ ಸರಕಾರಕ್ಕೆ ಕಿಂಚಿತ್ತಾದರೂ ಕಾಳಜಿ ಇದೆಯೇ ಎಂದು ಕೇಳಿದರು. ನನ್ನ ಪ್ರಕಾರ ಈ ಕಾಂಗ್ರೆಸ್ ನುಡಿದಂತೆ ನಡೆಯುವ ಸರಕಾರ ಅಲ್ಲ. ಇದು ಬಡವರ ಪರ ಸರಕಾರ ಅಲ್ಲ. ಇದು ದಲ್ಲಾಳಿಗಳಿಗೋಸ್ಕರ ಇರುವ ಸರಕಾರ. ದಲ್ಲಾಳಿಗಳನ್ನು ಸಾಕುವ ಸರಕಾರ ಎಂದು ಜನರು ಇವತ್ತು ಮಾತನಾಡುತ್ತಿದ್ದಾರೆ ಎಂದು ಆರೋಪಿಸಿದರು.

## ನ್ಯಾಯಾಂಗದಲ್ಲಿ ಭ್ರಷ್ಟಾಚಾರ ಸುಪ್ರೀಂ ಶಿಷ್ಟಾಚಾರ

### NCERT ನ್ಯಾಯಾಂಗ ಭ್ರಷ್ಟಾಚಾರ

**ನ್ಯಾಯಾಂಗಕ್ಕೆ ಕಳಂಕ ತರಲು ಬಿಡಲ್ಲ**




**ಸುಪ್ರೀಂಕೋರ್ಟ್ ಸಿಜೆಐ ಆಕ್ರೋಶ**

**ಅಧ್ಯಾಯದ ಬಗ್ಗೆ ಸುಪ್ರೀಂ ಗರಂ**

**8ನೇ ತರಗತಿಯ NCERT ಪರಿಷ್ಕೃತ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ 'ನ್ಯಾಯಾಂಗದಲ್ಲಿನ ಭ್ರಷ್ಟಾಚಾರ' ಎಂಬ ವಿಭಾಗ ಸೇರ್ಪಡೆ ವಿಚಾರದ ಕುರಿತಂತೆ ಸುಪ್ರೀಂಕೋರ್ಟ್ ಬುಧವಾರ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ಕೈಗೆತ್ತಿಕೊಂಡಿದೆ. ಯಾವುದೇ ಸಂಸ್ಥೆಯನ್ನು ದೂಷಿಸಲು ಅವಕಾಶ ನೀಡುವುದಿಲ್ಲ ಎಂದು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಹೇಳಿದ್ದಾರೆ. ಬುಧವಾರ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿಗಳಾದ ಜೋಯ್ಮಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಾಂಚೋಲಿ ಅವರನ್ನೊಳಗೊಂಡ ಪೀಠದ ಮುಂದೆ ವಿಚಾರ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್, 8ನೇ ತರಗತಿಯ ಮಕ್ಕಳಿಗೆ ನ್ಯಾಯಾಂಗದಲ್ಲಿನ ಭ್ರಷ್ಟಾಚಾರದ ಬಗ್ಗೆ ಕಲಿಸಲಾಗುತ್ತದೆ. ಇದು ಗಂಭೀರ ಕಳವಳಕಾರಿ ವಿಷಯ ಎಂದು ಪ್ರಸ್ತಾಪಿಸಿದರು.**

1. 8ನೇ ತರಗತಿ ಪಠ್ಯಪುಸ್ತಕದಲ್ಲಿ ಇರುವ ನ್ಯಾಯಾಂಗದ ಉಲ್ಲೇಖ
2. ನ್ಯಾಯಾಂಗದಲ್ಲಿ ಭ್ರಷ್ಟಾಚಾರ ಶೀರ್ಷಿಕೆಯ ಉಲ್ಲೇಖಕ್ಕೆ ತೀವ್ರ ಆಕ್ರೋಶ
3. ನ್ಯಾಯಾಂಗದ ಮೇಲಿನ ದಾಳಿಗೆ ಅವಕಾಶ ಕೊಡಲ್ಲ ಎಂದ ಸಿಜೆಐ
4. ನ್ಯಾಯಾಂಗಕ್ಕೆ ಅಪಖ್ಯಾತಿ ತರಲು ಅವಕಾಶ ಕೊಡಲ್ಲ ಎಂದ ಸಿಜೆಐ

• ಉದಯವಾಹಿನಿ, ನವದೆಹಲಿ

ಆಗ ಪರಿಷ್ಕೃತ ಪುಸ್ತಕದಲ್ಲಿನ ಕೆಲ ವಿಭಾಗಗಳ ಬಗ್ಗೆ ಸಿಜೆಐ ಗಂಭೀರ ಆಕ್ಷೇಪಣೆ ವ್ಯಕ್ತಪಡಿಸಿ, ಈ ವಿಷಯದ ಬಗ್ಗೆ ತಮಗೆ ತಿಳಿದಿದೆ. ಸಂಸ್ಥೆಯನ್ನು ದೂಷಿಸಲು ನಾನು ಯಾರಿಗೂ ಅವಕಾಶ ನೀಡುವುದಿಲ್ಲ. ಅದನ್ನು ಹೇಗೆ ಎದುರಿಸಬೇಕು ಎಂದು ನಮಗೆ ತಿಳಿದಿದೆ ಎಂದು ಹೇಳಿದರು.

ಬಳಿಕ ಈ ವಿಷಯದ ಬಗ್ಗೆ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸುವಂತೆ ಸಿಬಲ್ ಸಿಜೆಐಗೆ ವಿನಂತಿಸಿದರು. ಇದು ಉದ್ದೇಶಪೂರ್ವಕ ಮತ್ತು ಲೆಕ್ಕಾಚಾರದ ಕ್ರಮ ಎಂದು ತೋರುತ್ತದೆ ಎಂದು ಸಿಜೆಐ ಹೇಳಿದರು. ನಾನು ಹೆಚ್ಚೇನು ಹೇಳಲು ಬಯಸುವುದಿಲ್ಲ ಎಂದ ಅವರು, ಈ ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದಕ್ಕೆ ಶ್ಲಾಘನೆ ವ್ಯಕ್ತಪಡಿಸಿದರು. ಇದೇ ವೇಳೆ, ಪುಸ್ತಕವು ಸಂವಿಧಾನದ ಮೂಲ ರಚನೆಗೆ ವಿರುದ್ಧವಾಗಿದೆ ಎಂದು ನ್ಯಾಯಮೂರ್ತಿ ಬಾಗ್ಚಿ ಅವರು ಹೇಳಿದರು. ದಯವಿಟ್ಟು ಕೆಲ ದಿನಗಳ ಕಾಲ ಕಾಯಿರಿ. ಇದರಿಂದ ಎಲ್ಲಾ ಹೈಕೋರ್ಟ್ ನ್ಯಾಯಾಧೀಶರು, ಬಾರ್ ಮತ್ತು ಬೆಂಚ್‌ನವರೂ ಗೊಂದಲಕ್ಕೊಳಗಾಗಿದ್ದಾರೆ. ನಾನು ಈ ವಿಷಯವನ್ನು ಸ್ವಯಂಪ್ರೇರಿತವಾಗಿ ಕೈಗೆತ್ತಿಕೊಳ್ಳುತ್ತೇನೆ. ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಸಿಜೆಐ ಹೇಳಿದರು. ನ್ಯಾಯಮೂರ್ತಿ ಕಾಂತ್ ಅವರು, ಸುಪ್ರೀಂಕೋರ್ಟ್ ಈ ವಿಷಯವನ್ನು ಸ್ವಯಂ ಪ್ರೇರಿತವಾಗಿ ಪರಿಗಣಿಸಿದೆ ಎಂದು ತಿಳಿಸಿದರು.

8ನೇ ತರಗತಿಯ ಹೊಸ ಸಮಾಜ ವಿಜ್ಞಾನ NCERT ಪಠ್ಯಪುಸ್ತಕದಲ್ಲಿ ಎಕ್ಸ್‌ಪ್ಲೋರಿಂಗ್ ಸೊಸೈಟಿ ಇಂಡಿಯಾ ಅಂಡ್ ಬಿಯಾಂಡ್ ಎಂಬ ಪರಿಷ್ಕೃತ ಪಠ್ಯಪುಸ್ತಕದಲ್ಲಿ ನಮ್ಮ ಸಮಾಜದಲ್ಲಿ ನ್ಯಾಯಾಂಗದ ಪಾತ್ರ ಎಂಬ ಪರಿಷ್ಕೃತ ಅಧ್ಯಾಯವಿದೆ. ನ್ಯಾಯ ವಿಳಂಬವಾದರೆ ನ್ಯಾಯ ನಿರಾಕರಿಸಿದಂತೆ ಮತ್ತು ನ್ಯಾಯಾಂಗದಲ್ಲಿ ಭ್ರಷ್ಟಾಚಾರ ಎಂಬ ಶೀರ್ಷಿಕೆಯ ಅಧ್ಯಾಯದಲ್ಲಿನ ಎರಡು ವಿಭಾಗಗಳಲ್ಲಿ ನ್ಯಾಯಾಂಗ ವ್ಯವಸ್ಥೆ, ಭ್ರಷ್ಟಾಚಾರ, ನ್ಯಾಯಾಧೀಶರ ಕೊರತೆ ಮತ್ತು ಹೆಚ್ಚಿನ ಪ್ರಕರಣಗಳ ಬಾಕಿ ಸೇರಿದಂತೆ ನ್ಯಾಯಾಂಗ ವ್ಯವಸ್ಥೆ ಎದುರಿಸುತ್ತಿರುವ ಸವಾಲುಗಳ ಬಗ್ಗೆ ವಿವರಿಸಲಾಗಿದೆ. ಹೊಸ ಪುಸ್ತಕದಲ್ಲಿರುವ ನ್ಯಾಯಾಂಗದಲ್ಲಿ ಭ್ರಷ್ಟಾಚಾರ ಎಂಬ ವಿಭಾಗದಲ್ಲಿ ನ್ಯಾಯಾಧೀಶರು ನ್ಯಾಯಾಲಯದಲ್ಲಿ ತೋರುವ ನಡವಳಿಕೆ ಮಾತ್ರವಲ್ಲದೇ, ಹೊರಗಡೆಯೂ ಕೂಡ ಅವರು ನಿಯಂತ್ರಿತ ನೀತಿ ಸಂಹಿತೆಗೆ ಬದ್ಧರಾಗಿ ಹೇಗೆ ವರ್ತಿಸುತ್ತಾರೆ ಎಂಬುದರ ಕುರಿತು ಹೇಳಲಾಗಿದೆ.

**ಪರಿಷ್ಕೃತ ಪಠ್ಯದಲ್ಲಿ ಏನಿದೆ?:** ಎನ್‌ಸಿಇಆರ್‌ಟಿಯು 8ನೇ ತರಗತಿಯ ಸಮಾಜ ವಿಜ್ಞಾನ ಪಠ್ಯದಲ್ಲಿ 'ನ್ಯಾಯಾಂಗದಲ್ಲಿ ಭ್ರಷ್ಟಾಚಾರ', 'ಸಾಕಷ್ಟು ಪ್ರಕರಣಗಳು ಬಾಕಿ' ವಿಷಯಗಳನ್ನು ಸೇರಿಸಿವೆ.

'ಸಮಾಜದಲ್ಲಿ ನ್ಯಾಯಾಂಗ ಪಾತ್ರ' ಶೀರ್ಷಿಕೆಯ ಅಧ್ಯಾಯದಲ್ಲಿ ಈ ವಿಚಾರಗಳು ಇವೆ. 'ನ್ಯಾಯದಾನ ವಿಳಂಬವಾದರೆ ನ್ಯಾಯ ನಿರಾಕರಿಸಿದಂತೆ' ಹಾಗೂ 'ನ್ಯಾಯಾಂಗದಲ್ಲಿ ಭ್ರಷ್ಟಾಚಾರ' ಎಂಬ ಭಾಗಗಳಲ್ಲಿ ಭ್ರಷ್ಟಾಚಾರ ಹಾಗೂ ಪ್ರಕರಣಗಳ ಬಾಕಿ ಸೇರಿದಂತೆ ನ್ಯಾಯಾಂಗ ಎದುರಿಸುತ್ತಿರುವ ಸವಾಲುಗಳನ್ನು ವಿವರಿಸಲಾಗಿದೆ.

**ನ್ಯಾಯಾಂಗ ವಲಯದಲ್ಲಿ ಆತಂಕ**

ಬಾರ್ ಅಸೋಸಿಯೇಷನ್, ಬೆಂಚ್ ಮತ್ತು ಹೈಕೋರ್ಟ್ ಎಲ್ಲಾ ನ್ಯಾಯಾಧೀಶರು ಈ ಬೆಳವಣಿಗೆಯಿಂದ ಆತಂಕಕ್ಕೊಳಗಾಗಿದ್ದಾರೆ. ದಯವಿಟ್ಟು ಕೆಲವು ದಿನ ಕಾಯಿರಿ, ನಾವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಕಾನೂನು ಕ್ರಮ ಜರುಗಿಸುತ್ತೇವೆ, ಎಂದು ಸಿಜೆಐ ಭರವಸೆ ನೀಡಿದರು.

**ಹೆಚ್ಚುವರಿ ನ್ಯಾಯಾಧೀಶರ ನಿಯೋಜನೆ**

ರಾಜ್ಯದಲ್ಲಿ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಮತದಾರರ ಪಟ್ಟಿಯಲ್ಲಿ 80 ಲಕ್ಷ ಮತದಾರರ ಪಟ್ಟಿ ಅಳಿಸುವಿಕೆಯಿಂದ ಎದುರಿಸುತ್ತಿರುವ ಆಕ್ಷೇಪಣೆಗಳನ್ನು ಸಂಗ್ರಹಿಸಲು ಮಂಗಳವಾರ ಪಶ್ಚಿಮ ಬಂಗಾಳದ 250 ಮಂದಿ ನ್ಯಾಯಾಧೀಶರ ನಿಯೋಜನೆ ಜೊತೆಗೆ ಜಾರ್ಖಂಡ್ ಹಾಗೂ ಒಡಿಶಾದ ನ್ಯಾಯಾಧೀಶರನ್ನು ಹೆಚ್ಚುವರಿಯಾಗಿ ನಿಯೋಜಿಸಲು ಸುಪ್ರೀಂಕೋರ್ಟ್ ಸಮ್ಮತಿ ನೀಡಿದೆ.



**ನ್ಯಾಯಾಂಗ ಮತ್ತು ಸರ್ಕಾರದ ನಡುವೆ ಹೊಸ ಫ್ಲ್ಯಾಶ್ ಪಾಯಿಂಟ್**

NCERT ವಿಷಯವು ಕಾರ್ಯಾಂಗ ಮತ್ತು ನ್ಯಾಯಾಂಗದ ನಡುವಿನ ಇತ್ತೀಚಿನ ಜ್ವಾಲೆಯಾಗಿದೆ. ಇತ್ತೀಚಿನ ದಿನಗಳಲ್ಲಿ ಮತ್ತೊಂದು ವಿವಾದದ ಅಂಶವೆಂದರೆ ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ಗಳಲ್ಲಿನ ನ್ಯಾಯಾಂಗ ನೇಮಕಾತಿಗಳ ಕುರಿತು ಸರ್ಕಾರದ ನಿಲುವು. 2015ರಲ್ಲಿ, ಸುಪ್ರೀಂಕೋರ್ಟ್ ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗ ಕಾಯ್ದೆಯನ್ನು ರದ್ದುಗೊಳಿಸಿತು. ಇದನ್ನು ಕೊಲಿಜಿಯಂ ವ್ಯವಸ್ಥೆಯನ್ನು ಬದಲಿಸಲು ಸಂಸತ್ತು ಅಂಗೀಕರಿಸಿತ್ತು. ಈ ವಿಷಯವನ್ನು ಇತ್ತೀಚೆಗೆ ಮಾಜಿ ಕಾನೂನು ಸಚಿವ ಕಿರಣ್ ರಿಜಿಜು ಮತ್ತು ರಾಜ್ಯಸಭೆಯ ಮಾಜಿ ಅಧ್ಯಕ್ಷ ಜಗದೀಪ್ ಧಂಖರ್ ಎತ್ತಿದ್ದಾರೆ, ಇಬ್ಬರೂ ನೇಮಕಾತಿಗಳಲ್ಲಿ ನ್ಯಾಯಾಂಗದ ಮಾತುಗಳು ಅಂತಿಮವಾಗಿರಬಾರದು ಎಂದು ವಾದಿಸಿದ್ದಾರೆ. ಕಾನೂನು ಸಚಿವರಾಗಿದ್ದ ಅವಧಿಯಲ್ಲಿ, ಕೊಲಿಜಿಯಂ ವ್ಯವಸ್ಥೆಯು ನ್ಯಾಯಾಧೀಶರ ಮೇಲೆ ಹೆಚ್ಚಿನ ಹೊರೆ ಬೀರುತ್ತದೆ, ಅವರು ತಮ್ಮ ಬಾಕಿ ಇರುವ ಪ್ರಕರಣಗಳನ್ನು ನಿರ್ವಹಿಸುವಾಗ ಇತರ ನ್ಯಾಯಾಧೀಶರನ್ನು ನೇಮಿಸಬೇಕು ಎಂದು ರಿಜಿಜು ಹೇಳಿದ್ದರು. ಮುಂಬೈನಲ್ಲಿ NJAC ಅನ್ನು ರದ್ದುಗೊಳಿಸುವ ಸುಪ್ರೀಂ ಕೋರ್ಟ್ ನಿರ್ಧಾರವನ್ನು ರಿಜಿಜು ಟೀಕಿಸಿದರು.

## ನಾಡೋಜ ಪ್ರಶಸ್ತಿ ಬಂದರೂ ಸ್ವೀಕರಿಸದ ಜಿ ರಾಮಕೃಷ್ಣ

• ಉದಯವಾಹಿನಿ, ಬೆಂಗಳೂರು

ಸಿಪಿಐ ಪಕ್ಷದ ಸದಸ್ಯ, ಸಾಹಿತಿ, ಸಂಶೋಧಕರಾದ ಜಿ ರಾಮಕೃಷ್ಣ ಅವರ ಹೆಸರು ಇದೀಗ ಚರ್ಚೆಯಲ್ಲಿದೆ. ಕಾರಣ, ಹಂಪಿ ಕನ್ನಡ ವಿಶ್ವವಿದ್ಯಾಲಯ ನೀಡಿರುವ ನಾಡೋಜ ಪ್ರಶಸ್ತಿಯನ್ನು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್ ಅವರಿಂದ ಪಡೆದುಕೊಳ್ಳಲು ನಿರಾಕರಿಸಿದ್ದಾರೆ. ರಾಮಕೃಷ್ಣ ಅವರ ಈ ನಡೆ ಪರ ಹಾಗೂ ವಿರೋಧ ಚರ್ಚೆಗೆ ಗ್ರಾಸವಾಗಿದೆ. ಸಾಮಾಜಿಕ ಜಾಲತಾಣಗಳಲ್ಲೂ ಸಾಕಷ್ಟು ಮಂದಿ ಈ ಬಗ್ಗೆ ಪ್ರತಿಕ್ರಿಯೆ ನೀಡಿದ್ದು, ಜಿ ರಾಮಕೃಷ್ಣ ಅವರ ನಿರ್ಧಾರ ಸರಿಯಾಗಿದೆ ಎಂದರೆ ಮತ್ತೆ ಕೆಲವರು ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಜಿ ರಾಮಕೃಷ್ಣ ಅವರು ಭಾರತೀಯ ಕಮ್ಯುನಿಸ್ಟ್ ಪಕ್ಷದಲ್ಲಿ (ಸಿಪಿಐ) ಗುರುತಿಸಿಕೊಂಡಿದ್ದಾರೆ.

ರಾಜ್ಯದಲ್ಲಿ ನಡೆದ ಹಲವು ಹೋರಾಟ, ಚಳುವಳಿಗಳಲ್ಲಿ ಭಾಗಿಯಾಗಿದ್ದಾರೆ. ಸಂಶೋಧಕರಾಗಿ, ಲೇಖಕರಾಗಿ, ಸಾಹಿತಿಯಾಗಿ ಗುರುತಿಸಿಕೊಂಡಿದ್ದಾರೆ. ಎಡಪಂಥೀಯ ವಿಚಾರಧಾರೆಯುಳ್ಳ ಪುಸ್ತಕಗಳನ್ನು ಬರೆದಿದ್ದಾರೆ. ವೈಚಾರಿಕತೆಯ ಪರ, ಕೋಮುವಾದದ ವಿರುದ್ಧದ ಹೋರಾಟದಲ್ಲೂ ಜಿ ರಾಮಕೃಷ್ಣ ಅವರ ಹೆಸರು ಮುಂಚೂಣಿಯಲ್ಲಿತ್ತು. ಹೀಗಾಗಿ ಅವರ ಸಾಧನೆಗಳನ್ನು ಗುರುತಿಸಿ ಕನ್ನಡ ವಿ ವಿ, ಹಂಪಿ 'ನಾಡೋಜ' ಗೌರವ ನೀಡಿದೆ. ಆದರೆ, ಅದನ್ನು ಸ್ವೀಕರಿಸಲು ಜಿ ರಾಮಕೃಷ್ಣ ಅವರು ಹಿಂದೇಟು ಹಾಕಿದ್ದು ದೊಡ್ಡ ಮಟ್ಟದಲ್ಲಿ ಚರ್ಚೆಗೆ ಗ್ರಾಸವಾಗಿತ್ತು.

## ರಾಜ್ಯ ಸರ್ಕಾರಕ್ಕೆ ತಲೆನೋವಾದ ಉದ್ಯೋಗದ ಹೋರಾಟ

• ಉದಯವಾಹಿನಿ, ಬೆಂಗಳೂರು

ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಉದ್ಯೋಗಗಳನ್ನು ಕೂಡಲೇ ಭರ್ತಿ ಮಾಡಬೇಕು ಎಂದು ಆಗ್ರಹಿಸಿ ಧಾರವಾಡದಲ್ಲಿ ನಡೆಯುತ್ತಿರುವ ಯುವಕರ ಹೋರಾಟದ ಬಿಸಿ ಸರ್ಕಾರಕ್ಕೆ ತಟ್ಟುತ್ತಿದೆ. ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘಟನೆ (ಅಕ್ರಾ) ನೇತೃತ್ವದಲ್ಲಿ ಹೋರಾಟ ನಡೆಯುತ್ತಿದ್ದು, ಸಹಸ್ರಾರು ಸಂಖ್ಯೆಯಲ್ಲಿ ಯುವಕರು ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಇದನ್ನು ಗಂಭೀರವಾಗಿ ಪರಿಗಣಿಸಿದೆ. ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಕ್ಯಾಬಿನೆಟ್ ಮೀಟಿಂಗ್ ನಡೆಯಲಿದ್ದು, ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ನೇಮಕಾತಿ ವಿಚಾರಕ್ಕೆ ಚರ್ಚೆ ಆಗುವ ಸಾಧ್ಯತೆ ಇದೆ. ನೇಮಕಾತಿ ಸಮಸ್ಯೆಗಳ ಬಗ್ಗೆ ಸುದೀರ್ಘ ಚರ್ಚೆ ನಡೆದು ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ ಎಂಬ ಮಾಹಿತಿ ಕೇಳಿಬರುತ್ತಿದೆ. ನೇಮಕಾತಿ ವಿಳಂಬಕ್ಕೆ ಆಗುತ್ತಿರುವ ಕಾನೂನು ತೊಡಕುಗಳ ಬಗ್ಗೆ ಚರ್ಚೆ ನಡೆಯಲಿದೆ. ಒಳ ಮೀಸಲಾತಿ ಅನುಷ್ಠಾನದಲ್ಲಿ ಗೊಂದಲಗಳಾಗಿರುವ ಬಗ್ಗೆ ಚರ್ಚೆ ನಡೆಯಲಿದೆ. ಒಳ ಮೀಸಲಾತಿ ಅನುಷ್ಠಾನಕ್ಕೆ ಗೊಂದಲ ಆಗಿರುವುದರಿಂದ ಇದರ ಪರಿಣಾಮವಾಗಿ ನೇಮಕಾತಿಗೆ ಅಡ್ಡಿ ಉಂಟಾಗುತ್ತಿದೆ. ಈ ನಡುವೆ ಉದ್ಯೋಗಕ್ಕಾಗಿ ಯುವಕರ ಆಕ್ರೋಶ ರಾಜ್ಯ ಸರ್ಕಾರಕ್ಕೆ ತಲೆನೋವು ಉಂಟು ಮಾಡಿದೆ. ಯುವಕರ ಪ್ರತಿಭಟನೆ ಹಿನ್ನೆಲೆಯಲ್ಲಿ ಕ್ಯಾಬಿನೆಟ್‌ನಲ್ಲಿ ಸುದೀರ್ಘ ಚರ್ಚೆ ನಡೆಯುವ ಸಾಧ್ಯತೆ ಇದೆ. ಯುವ ಜನರ ಹೋರಾಟದ ಹಿನ್ನೆಲೆಯಲ್ಲಿ ಸರ್ಕಾರದ ವಿರುದ್ಧ ವಿಪಕ್ಷ ನಾಯಕ ಆರ್ ಅಶೋಕ್ ವಾಗ್ದಾಳಿ ನಡೆಸಿದ್ದಾರೆ.

## ರಾಜ್ಯದಲ್ಲಿ ಅಪರೂಪದ ಖಾಯಿಲೆಗಳಿಂದ ಬಳಲುತ್ತಿರುವವರ ಜತೆ ನಿಲ್ಲಲಿದೆ ಸರ್ಕಾರ

### • ಕುಸುಮ ಸಂಜೀವಿನಿ ಕಾರ್ಯಕ್ರಮದ ಉದ್ಘಾಟಿಸಿದ ಡಿಸಿಎಂ • ಮಕ್ಕಳ ಪ್ರತಿಭೆಗೆ ಪ್ರೋತ್ಸಾಹದಾಯಕ

• ಉದಯವಾಹಿನಿ, ಬೆಂಗಳೂರು

ಹಿಮೋಫಿಲಿಯಾ ಹಾಗೂ ಇತರೇ ಅಪರೂಪದ ಖಾಯಿಲೆಗಳಿಂದ ಬಳಲುತ್ತಿರುವ ರೋಗಿಗಳ ಜೊತೆ ಕಾಂಗ್ರೆಸ್ ಸರ್ಕಾರ ನಿಲ್ಲುತ್ತದೆ. ಹಣದ ಬಗ್ಗೆ ಚಿಂತೆ ಮಾಡಬೇಡಿ. ಆದರೆ ಯಾರೂ ಸಹ ತಮ್ಮ ಆತ್ಮವಿಶ್ವಾಸ ಕಳೆದುಕೊಳ್ಳಬೇಡಿ'' ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಧೈರ್ಯ ತುಂಬಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಬೆಂಗಳೂರಿನ ನೆಹರೂ ತಾರಾಲಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕುಸುಮ ಸಂಜೀವಿನಿ' ಹಿಮೋಫಿಲಿಯ ರೋಗಿಗಳಿಗೆ ರೋಗ ನಿರೋಧಕ ಚಿಕಿತ್ಸೆ ಹಾಗೂ 108 ಆಂಬುಲೆನ್ಸ್ ಸೇವೆಗಳನ್ನು ಡಿಸಿಎಂ ಶಿವಕುಮಾರ್ ಅವರು ಉದ್ಘಾಟಿಸಿ ಮಾತನಾಡಿದರು.

''ಒಬ್ಬ ರೋಗಿಗೆ ಚುಚ್ಚುಮದ್ದು ನೀಡಲು ವರ್ಷಕ್ಕೆ ಐದು ಲಕ್ಷ ಖರ್ಚಾಗಲಿದೆ. ಹಿಮೋಫಿಲಿಯಾದಂತಹ ಅಪರೂಪದ ಖಾಯಿಲೆಯಿಂದ ಬಳಲುತ್ತಿರುವ ರೋಗಿಗಳ ಬದುಕಿನಲ್ಲಿ ಭರವಸೆ ಮೂಡಿಸಬೇಕು, ಅವರ ಬದುಕಿಗೆ ಶಕ್ತಿ ತುಂಬಬೇಕು ಎಂದು ನಮ್ಮ ಸರ್ಕಾರ ಹೊರಟಿದೆ. ಇಡೀ ದೇಶದಲ್ಲಿ ನಾವು ಮೊದಲ ಬಾರಿಗೆ ಸಹಾಯಹಸ್ತ ಚಾಚಿದೆ'' ಎಂದರು.



ಈ ರೋಗ ಬಂದ ತಕ್ಷಣ ಭವಿಷ್ಯವೇ ಇಲ್ಲ ಎಂದು ಭರವಸೆ ಕಳೆದುಕೊಳ್ಳಬಾರದು. ಮಕ್ಕಳು, ತಂದೆತಾಯಂದಿರ ಜೊತೆ ನಾವಿದ್ದೇವೆ. ಇಷ್ಟೊಂದು ಹಣ ಹೊಂದಿಸಲು ಎಲ್ಲರಿಗೂ ಸಾಧ್ಯವಿಲ್ಲ. ಆದ ಕಾರಣ ನಾವು ನಿಮ್ಮಜೊತೆಯಾಗಿದ್ದೇವೆ. ಯಾವುದೇ ರೋಗ ಆಗಿರಬಹುದು ಬಯಸಿ ಬರುವಂತಹದ್ದಲ್ಲ. ಮುಗ್ದ ಮಕ್ಕಳು ಇದರಿಂದ ಬಳಲುತ್ತಿದ್ದಾರೆ. ಪ್ರಕೃತಿ ನಿಯಮ ಎಂದೂ ಹೇಳಬಹುದು. ಇಲ್ಲಿ ತಂದೆ ತಾಯಿ, ಮಕ್ಕಳದ್ದು ಸೇರಿದಂತೆ ಯಾರದ್ದೂ ತಪ್ಪಿಲ್ಲ. ಇದನ್ನ ನಾವು ಸ್ವೀಕರಿಸಲೇ ಬೇಕು'' ಎಂದರು.

''ನಮ್ಮ ಆರೋಗ್ಯ ಇಲಾಖೆ ಇಡೀ ದೇಶದಲ್ಲಿಯೇ ಕ್ರಾಂತಿ ಮಾಡುತ್ತಿದೆ. ದಿನೇಶ್ ಅವರು ಅತ್ಯಂತ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಜನರು ಎದ್ದುನಿಂತು ಚಪ್ಪಾಳೆ ಹೊಡೆಯಬೇಡಿ ಬದಲಾಗಿ. ಮತ್ತೆ ಇದೇ ಸರ್ಕಾರ ಅಧಿಕಾರಕ್ಕೆ ಬರಲಿ ಎಂದು ಆಶೀರ್ವದಿಸಿ. ಆಗ ಇನ್ನೂ ಹೆಚ್ಚಿನ ಸೇವೆ ಮಾಡುತ್ತೇವೆ. ಸರ್ಕಾರವೇ ರೋಗಿಗಳ ನೋವಿಗೆ ಜೊತೆಯಾಗಬೇಕು ಎಂದು ದಿನೇಶ್ ಗುಂಡುರಾವ್ ಅವರು ಸಂಪುಟದಲ್ಲಿ ಈ ವಿಚಾರ ಮಂಡಿಸಿ ಸಹಾಯಕ್ಕೆ ನಿಂತಿದ್ದಾರೆ. ಇದಕ್ಕೆ ಬೆನ್ನೆಲುಬಾಗಿ ವೈದ್ಯಕೀಯ ಶಿಕ್ಷಣ ಸಚಿವರಾದ ಶರಣ ಪ್ರಕಾಶ್ ಪಾಟೀಲ್ ಅವರು ಜೊತೆಯಾಗಿದ್ದಾರೆ'' ಎಂದರು.

''ಮಾನವನ ಸೇವೆ ಮಾಡುವುದು ನಮ್ಮ ಸರ್ಕಾರದ ಬದ್ಧತೆ. ಆರೋಗ್ಯ ಕ್ಷೇತ್ರದ ಬೇಡಿಕೆಗೆ ನಮ್ಮ ಸರ್ಕಾರ ಎಂದಿಗೂ ಹಿಂದೇಟು ಹಾಕಿಲ್ಲ. ಇಂತಹ ಅಪರೂಪದ ಖಾಯಿಲೆಯಿಂದ ಬಳಲುವ ಮಕ್ಕಳಿಗೆ ಆತ್ಮವಿಶ್ವಾಸ ತುಂಬಬೇಕು. ಮಕ್ಕಳು ಡಿ.ಕೆ.ಶಿವಕುಮಾರ್, ದಿನೇಶ್ ಗುಂಡುರಾವ್ ಆಗುವಂತೆ ಬೆಳೆಯಬೇಕು. ಯಾವುದೂ ಅಸಾಧ್ಯವಲ್ಲ. ದೇವರು ಅವಕಾಶ ನೀಡುತ್ತಾನೆ. ಸಿಕ್ಕಿರುವ ಅವಕಾಶವನ್ನು ಸರಿಯಾಗಿ ಬಳಸಿಕೊಳ್ಳಬೇಕು'' ಎಂದು ಹೇಳಿದರು.

''ಪ್ರಪಂಚದ ಯಾವುದೇ ದೇಶಕ್ಕೆ ಹೋದರು ನಮ್ಮ ಕರ್ನಾಟಕದ ವೈದ್ಯರು ಅತ್ಯುತ್ತಮ ಸೇವೆ ಸಲ್ಲಿಸುತ್ತಿದ್ದಾರೆ. ಆಯಾ ದೇಶದ ಜನರು ಆಡಳಿತ ನಡೆಸುತ್ತಿರಬಹುದು ಆದರೆ ಬುದ್ದಿವಂತಿಕೆ, ಸೇವೆ ಸೇರಿದಂತೆ ಇತರೇ ವಿಭಾಗದಲ್ಲಿ ನಮ್ಮ ವೈದ್ಯರು ಸಾಧನೆ ಮಾಡಿದ್ದಾರೆ'' ಎಂದರು.

''ನಾವು ಪ್ರತಿದಿನ ದೀಪ ಬೆಳಗಿಸುವಾಗ ಶುಭವಾಗಲಿ ಆರೋಗ್ಯ ದೊರಕಲಿ ಎಂದು ಬೇಡಿ ಕೊಳ್ಳುತ್ತೇವೆ. ಅದೇ ರೀತಿ ಎಲ್ಲರ ಬಾಳಲ್ಲೂ ಶುಭವಾಗಲಿ. ಈ ನಿಮ್ಮ ಕಾಂಗ್ರೆಸ್ ಸರ್ಕಾರ ಸದಾ ನೊಂದವರ ಜೊತೆಯಲ್ಲಿ ಇರುತ್ತದೆ. ಎಲ್ಲಾ ವರ್ಗದ ಜನರಿಗೂ ಸ್ಪಂದಿಸುತ್ತದೆ'' ಎಂದು ಹೇಳಿದರು.

**ಕರ್ನಾಟಕದಿಂದ ಪ್ರತಿವರ್ಷ 13,940 ವೈದ್ಯರು ಹೊರಬರುತ್ತಿದ್ದಾರೆ**

''ನಮ್ಮ ಕರ್ನಾಟಕ ರಾಜ್ಯದಿಂದ ಪ್ರತಿವರ್ಷ 13,940 ವೈದ್ಯರು ತಯಾರಾಗುತ್ತಿದ್ದಾರೆ. ಸುಮಾರು 3 ಸಾವಿರ ವೈದ್ಯರು ಎಂಡಿ ಪದವಿ ಪಡೆಯುತ್ತಿದ್ದಾರೆ. 70 ಮೆಡಿಕಲ್ ಕಾಲೇಜು ಹೊಂದಿದ್ದೇವೆ. ಪ್ರತಿ ಜಿಲ್ಲೆಯಲ್ಲೂ ಒಂದೊಂದು ಮೆಡಿಕಲ್ ಕಾಲೇಜುಗಳಿವೆ. ಸುಮಾರು 1 ಲಕ್ಷ ಪ್ಯಾರಾ ಮೆಡಿಕಲ್ ವಿದ್ಯಾರ್ಥಿಗಳು ಪ್ರತಿವರ್ಷ ಸೇವೆಗೆ ಸಜ್ಜಾಗುತ್ತಿದ್ದಾರೆ. ಎಸ್.ಎಂ. ಕೃಷ್ಣ ಅವರ ಕಾಲದಲ್ಲಿ ನರ್ಸಿಂಗ್ ಕಾಲೇಜುಗಳಿಗೆ ಅನುಮತಿ ನೀಡುವ ಉಪಸಮಿತಿಯ ಅಧ್ಯಕ್ಷನಾಗಿದ್ದೆ. ಆಗ ಕೇಳಿದ ಎಲ್ಲರಿಗೂ ಅನುಮತಿ ನೀಡಲಾಯಿತು. ಅಂದು ಮಾಡಿದ ತೀರ್ಮಾನ ಇಂದು ಫಲ ಕಾಣುತ್ತಿದೆ. ಅಸ್ಸಾಂ, ಕೇರಳ ಸೇರಿದಂತೆ ದೇಶದ ಅನೇಕ ಭಾಗಗಳ ವಿದ್ಯಾರ್ಥಿಗಳು ಇಲ್ಲಿ ತರಬೇತಿ ಪಡೆದು ವಿದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ''

**ಈ ದಿನದ ದರ** ಪೆಟ್ರೋಲ್: 102.98 ₹/L | ಡೀಸೆಲ್ : 91.42 ₹/L | ಬಂಗಾರ: ₹16,189/Gram24ct ₹14,840/Gram22ct | ಬೆಳ್ಳಿ: ₹285.00/Gram

# ಆರು ತಿಂಗಳ ಕಂದಮ್ಮನ ಕೈಬೆರಳನ್ನೇ ಕಟ್ ಮಾಡಿದ ನರ್ಸ್

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನ ಇಂದಿರಾನಗರದಲ್ಲಿ ಜ್ವರವೆಂದು 6 ತಿಂಗಳ ಹಸುಗೂಸನ್ನು ಖಾಸಗಿ ಆಸ್ಪತ್ರೆಗೆ ಪೋಷಕರು ಕರೆತಂದಿದ್ದು, ನರ್ಸ್ ಮಾಡಿದ ಸಣ್ಣ ಎಡವಟ್ಟು ಆ ಮಗುವಿನ ಬೆರಳನ್ನು ತುಂಡಾಗುವಂತೆ ಮಾಡಿದ ಘಟನೆ ನಡೆದಿದೆ. ಘಟನೆಗೆ ವೈದ್ಯರ ನಿರ್ಲಕ್ಷ್ಯವೇ ಕಾರಣವೆಂದು ಪೋಷಕರು ಆರೋಪಿಸಿದ್ದು, ಕೇಸ್ ದಾಖಲಿಸದ್ದಾರೆ.

**ಜ್ವರವೆಂದು ಆಸ್ಪತ್ರೆಗೆ ದಾಖಲಾದ 6 ತಿಂಗಳ ಕಂದಮ್ಮ:** ಬೆಂಗಳೂರಿನ ವಿಜಯ್ ಎಂಬವರು ತಮ್ಮ 6 ತಿಂಗಳು ಕಂದಮ್ಮನ ಹುಷಾರು ತಪ್ಪಿದೆ ಎಂದು ಇಂದಿರಾನಗರದ ಚಿನ್ಮಯ್ ಮಿಷನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಈ ವೇಳೆ, ಮಗುವಿಗೆ ಜ್ವರ ಹಾಗೂ ಕಫ ಹೆಚ್ಚಿರುವ ಹಿನ್ನಲೆಯಲ್ಲಿ ಅಲ್ಲಿಯೇ ದಾಖಲು ಮಾಡಿಕೊಂಡು ಚಿಕಿತ್ಸೆ ನೀಡಲಾಗಿದೆ. ಆದರೆ, ಫೆ.24ರಂದು ಮಗು ಚೇತರಿಸಿಕೊಂಡಿದ್ದು, ಆಸ್ಪತ್ರೆಯಿಂದ



ಡಿಸ್ಚಾರ್ಜ್ ಮಾಡಬಹುದು ಎಂದು ಡಾಕ್ಟರ್ ಗಳು ಸೂಚಿಸಿದ್ದಾರೆ.

**IV ಡ್ರಿಪ್ಸ್ ತೆಗೆಯುವಾಗ ನರ್ಸ್ ನಿರ್ಲಕ್ಷ್ಯಕ್ಕೆ ಮಗುವಿನ ಕೈಬೆರಳು ಕಟ್:** ಈ ಸಮಯದಲ್ಲಿ ಮಗುವಿಗೆ ಕೈಗೆ ಹಾಕಲಾಗಿದ್ದ ಡ್ರಿಪ್ಸ್ ತೆಗೆಯಲು ನರ್ಸ್ ಮುಂದಾಗಿದ್ದಾರೆ. ಆಗ ಮಗುವಿನ ಕೈಗೆ ಡ್ರಿಪ್ಸ್ ನೊಂದಿಗೆ ಹಾಕಿದ್ದ ಡ್ರೆಸ್ಸಿಂಗ್ ಪಟ್ಟಿಯನ್ನು ತೆಗೆಯುವ ವೇಳೆ ನರ್ಸ್ ಕತ್ತರಿಯನ್ನು ಬಳಸುವ ಸಮಯದಲ್ಲಿ ನಿರ್ಲಕ್ಷ್ಯ ವಹಿಸಿದ್ದು, ಇದರಿಂದಾಗಿ ಕತ್ತರಿ ಡ್ರೆಸಿಂಗ್ ನ ಬದಲಿಗೆ ಮಗುವಿನ ಎಡಗೈ ಕಿರುಬೆರಳಿನ ಮೇಲೆ ಬಿದ್ದಿದ್ದು, ಇದರಿಂದಾಗಿ ಮಗುವಿನ ಅರ್ಧ ಕಿರುಬೆರಳು ತುಂಡಾಗಿದೆ. ನಂತರ ಈ ಡ್ರೆಸಿಂಗ್ ತೆಗೆದ ಸಮಯದಲ್ಲಿ ಈ ಬಗ್ಗೆ ಗೊತ್ತಾಗಿದ್ದು, ಈ ಬಗ್ಗೆ ಮಗುವಿನ ಚೀರಾಟ ಅದರ ನೋವನ್ನು ನೋಡಲು ಸಾಧ್ಯವಾಗಲಿಲ್ಲ. ನನ್ನ ಕಣ್ಣೆದುರೇ ನನ್ನ ಮಗುವಿನ ಕೈಬೆರಳು ಕಟ್ ಆಗಿದೆ. ಇದಾದ ಬಳಿಕ ಕೂಡಲೇ ಮಗುವನ್ನು ತುರ್ತು ಚಿಕಿತ್ಸಾ ಘಟಕಕ್ಕೆ ರವಾನೆ ಮಾಡಿ ಚಿಕಿತ್ಸೆಗೆ ವೈದ್ಯರು ಮುಂದಾಗಿದ್ದು, ಗಾಯ ಗಂಭೀರವಾಗಿರುವುದರಿಂದ ಅದನ್ನು ಸಂಪೂರ್ಣವಾಗಿ ಕಟ್ ಮಾಡಲಾಗಿದೆ ಎಂದು ವೈದ್ಯರು ತಿಳಿಸಿರುವುದಾಗಿ ತಂದೆ ವಿಜಯ್ ನೋವನ್ನು ಹೊರಹಾಕಿದ್ದಾರೆ. ಅಲ್ಲದೆ, ಈ ವಿಚಾರವನ್ನು ಮರೆಮಾಚಲು ಗಾಯದೊಡ್ಡದಾಗಿ ಏನೂ ಆಗಿಲ್ಲ. ಕೆಲ ತಿಂಗಳಿನಲ್ಲಿ ಸರಿಹೋಗುತ್ತೆ ಎಂದು ವೈದ್ಯರು ತಿಳಿಸಿದ್ದಾರೆ. ಆದರೆ, ಘಟನೆಗೆ ಆಸ್ಪತ್ರೆ ಆಡಳಿತ ಮಂಡಳಿ ಹಾಗೂ ಹಾಗೂ ವೈದ್ಯರೇ ನೇರ ಕಾರಣ ಎಂದು ಪೋಷಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸದ್ಯ ಈ ಘಟನೆಗೆ ಸಂಬಂಧಿಸಿದಂತೆ ಇಂದಿರಾನಗರ ಪೊಲೀಸ್ ಠಾಣೆಯಲ್ಲಿ ಆಸ್ಪತ್ರೆಯ ವಿರುದ್ಧ ಎಫ್ಐಆರ್ ದಾಖಲಾಗಿದ್ದು, ಮಗುವಿನ ಪೋಷಕರು ವೈದ್ಯರು ಹಾಗೂ ಆಸ್ಪತ್ರೆ ಆಡಳಿತ ಮಂಡಳಿಗೆ ತಕ್ಕ ಶಿಕ್ಷೆಯಾಗಬೇಕು ಎಂದು ಒತ್ತಾಯಿಸಿದ್ದಾರೆ.

## ಸರ್ಕಾರಿ ಭೂಮಿಯನ್ನು ಸಾರ್ವಜನಿಕರ ಉಪಯೋಗಕ್ಕೆ ಮೀಸಲಿಡಬೇಕು




ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೆ.ಆರ್.ಪುರ

ಅಪಾರ್ಟ್ಮೆಂಟ್‌ಗೆ ಸರ್ಕಾರಿ ಜಾಗದಲ್ಲಿ ರಸ್ತೆ ಸಂಪರ್ಕ ಕಲ್ಪಿಸಲು ಜಿಲ್ಲಾಧಿಕಾರಿಗಳು ಮಾಡಿರುವ ಆದೇಶವನ್ನು ರದ್ದುಗೊಳಿಸಿ ಸರ್ಕಾರಿ ಭೂಮಿಯನ್ನು ಸಾರ್ವಜನಿಕರ ಉಪಯೋಗಕ್ಕೆ ಮೀಸಲಿಡಬೇಕು ಎಂದು ದೊಡ್ಡಗುಬ್ಬಿ ಗ್ರಾಮಸ್ಥರು ಒತ್ತಾಯಿಸಿದರು. ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ ದೊಡ್ಡಗುಬ್ಬಿ ಗ್ರಾಮದ ಸರ್ವೇ ನಂಬರ್ 14ರಲ್ಲಿ 7 ಗುಂಟೆ ಸರ್ಕಾರಿ ಜಮೀನು ಇದ್ದು, ಈ ಜಮೀನಿಗೆ ಹೊಂದಿಕೊಂಡಿರುವ ಸರ್ವೆ ನಂಬರ್ 12/10, 12/11ರಲ್ಲಿ ಅಪಾರ್ಟ್ಮೆಂಟ್ ನಿರ್ಮಿಸಲು ಉದ್ದೇಶಿಸಿದ್ದು 2021ರಲ್ಲಿ ಭೂ ಪರಿವರ್ತನೆ ಕೂಡ ಮಾಡಲಾಗಿದೆ. ಇಂತಹ ಜಮೀನಿಗೆ ರಸ್ತೆ ಉದ್ದೇಶಕ್ಕಾಗಿ ಸರ್ಕಾರಿ ಜಾಗವನ್ನು ಮೀಸಲಿಟ್ಟಿರುವುದು ಕಾನೂನು ಬಾಹಿರ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಧಿಕಾರಿಗಳು ಸೂಕ್ತ ರೀತಿಯಲ್ಲಿ ಜಾಗ ಪರಿಶೀಲನೆ ಮಾಡದೇ ಸರ್ಕಾರಕ್ಕೆ ಕೃಷಿ ಭೂಮಿ ಎಂದು ತಪ್ಪು ಮಾಹಿತಿ ನೀಡಿ ರಸ್ತೆ ಉದ್ದೇಶಕ್ಕಾಗಿ ಆದೇಶ ಮಾಡಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ ಎಂದು ದೊಡ್ಡಗುಬ್ಬಿ ಗ್ರಾಮಸ್ಥ ಎನ್.ಚಂದ್ರಶೇಖರ್ ದೂರಿದರು. ಸರ್ಕಾರಿ ಜಾಗವನ್ನು ಸಂರಕ್ಷಣೆ ಮಾಡಬೇಕಾದ ಅಧಿಕಾರಿಗಳು ಭೂ ಮಾಫಿಯಾದವರೊಂದಿಗೆ ಶಾಮಿಲಾಗಿ 2021-22 ರಲ್ಲಿ ಭೂ ಪರಿವರ್ತನೆಯಾದ ಜಮೀನಿಗೆ ಕೃಷಿ ಭೂಮಿ ಎಂದು ಅಧಿಕಾರಿಗಳು ಸರ್ಕಾರಕ್ಕೆ ತಪ್ಪು ವರದಿ ನೀಡಿ ಸರ್ಕಾರಕ್ಕೆ ಹಾದಿ ತಪ್ಪಿಸಿರುವ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಜರುಗಿಸಬೇಕು . ಈ ಸಂಬಂಧ ಆದೇಶವನ್ನು ರದ್ದುಗೊಳಿಸಿ ಮುಂದೆ ಯಾರು ಒತ್ತುವರಿ ಆಗದಂತೆ ಸುತ್ತಲೂ ತಡೆಗೋಡೆ ನಿರ್ಮಿಸಿ ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿಡಬೇಕು ಎಂದು ದೊಡ್ಡಗುಬ್ಬಿ ನಿವಾಸಿ ಜಗದೀಶ್ ಆಗ್ರಹಿಸಿದರು.

## ಶ್ರೀ ರಾಘವೇಂದ್ರ ಸ್ವಾಮಿಗಳ 431ನೇ ಜನ್ಮದಿನೋತ್ಸವ; ಲಕ್ಷ ಪುಷ್ಪಾರ್ಚನೆ

• ಉದಯವಾಹಿನಿ, ಬೆಂಗಳೂರು



ಶೇಷಾದ್ರಿಪುರ ಪ್ಲಾಟ್ ಫಾರ್ಮ್ ರಸ್ತೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶದಂತೆ ಬೆಳಗ್ಗೆ ಶ್ರೀರಾಘವೇಂದ್ರ ಸ್ವಾಮಿಗಳ 431ನೇ ಜನ್ಮದಿನದ ಸಮಾರಂಭವು ವೈಭವಯುತವಾಗಿ ಆಚರಿಸಲಾಯಿತು, ಈ ಸಂದರ್ಭದಲ್ಲಿ ರಾಯರಿಗೆ ವಿಶೇಷ ಫಲಪಂಚಾಮೃತ ಅಭಿಷೇಕ, ವಿಶೇಷ ಹೂವಿನ ಅಲಂಕಾರ, ಲಕ್ಷ ಪುಷ್ಪಾರ್ಚನೆ ನಡೆಯಿತು. ಸಂಜೆಯ ಕಾರ್ಯಕ್ರಮದಲ್ಲಿ ಮತ್ತಿಕೆರೆಯ ಶ್ರೀ ಲಕ್ಷ್ಮೀ ವೆಂಕಟೇಶ್ವರ ಭಜನಾ ಮಂಡಳಿಯ ಸದಸ್ಯರಿಂದ ಭಜನೆ, ರಥೋತ್ಸವ, ಮಹಾಮಂಗಳಾರತಿ ಕಾರ್ಯಕ್ರಮಗಳು ಜರುಗಿದವು. ಈ ಸಂದರ್ಭದಲ್ಲಿ ಸಾವಿರಾರು ಭಕ್ತರು ಆಗಮಿಸಿ ರಾಯರ ದರ್ಶನ ಪಡೆದು ತೀರ್ಥ ಪ್ರಸಾದ ಸ್ವೀಕರಿಸಿದರು ಎಂದು ಶ್ರೀಮಠದ ವಿಚಾರಣಾಕರ್ತರಾದ ಶ್ರೀ ಸುಬ್ಬು ನರಸಿಂಹ ಅವರು ತಿಳಿಸಿದರು.

## ಜಿಬಿಎ ವ್ಯಾಪ್ತಿಯ ಅಂತಿಮ ಮತದಾರರ ಪಟ್ಟಿ ಪ್ರಕಟ ದಿನಾಂಕ ಮುಂದೂಡಿಕೆ

• ಉದಯವಾಹಿನಿ, ಬೆಂಗಳೂರು

ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳ ಅಂತಿಮ ವಾರ್ಡ್‌ವಾರು ಮತದಾರರ ಪಟ್ಟಿ ಪ್ರಕಟ ದಿನಾಂಕವನ್ನು ರಾಜ್ಯ ಚುನಾವಣಾ ಆಯೋಗ ಮುಂದೂಡಿದೆ. ತತ್ಕಾಲದಲ್ಲಿ ಜಾರಿಯಲ್ಲಿರುವ ವಿಧಾನಸಭಾ ಮತದಾರರ ಪಟ್ಟಿಯನ್ನು ಅಳವಡಿಸಿಕೊಂಡು ವಾರ್ಡುವಾರು ಕರಡು ಮತದಾರರ ಪಟ್ಟಿಯನ್ನು ಜ.19 ರಂದು ಪ್ರಕಟಿಸಲಾಗಿತ್ತು. ಕರಡು ಮತದಾರರ ಪಟ್ಟಿಯ ಕುರಿತು ರಾಜಕೀಯ ಪಕ್ಷಗಳು ಹಾಗೂ ಸಾರ್ವಜನಿಕರಿಂದ ಹಲವಾರು ದೂರುಗಳು ಸ್ವೀಕೃತಗೊಂಡ ಹಿನ್ನೆಲೆಯಲ್ಲಿ ಗ್ರೇಟರ್ ಬೆಂಗಳೂರು ಆಡಳಿತ ನಿಯಮಗಳು, 2025ರ ನಿಯಮ 30 ರನ್ವಯ ತತ್ಕಾಲದಲ್ಲಿ ಜಾರಿಯಲ್ಲಿರುವ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯನ್ನು ಅಳವಡಿಸಿಕೊಂಡು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ನಗರ ಪಾಲಿಕೆಗಳಿಗೆ ವಾರ್ಡುವಾರು ಮತದಾರರ ಪಟ್ಟಿಯನ್ನು ತಯಾರಿಸುವುದು ಸೂಕ್ತವೆಂದು ಅಭಿಪ್ರಾಯಿಸಿ ಆಯೋಗ ಹೊಸ ದಿನಾಂಕವನ್ನು ಘೋಷಣೆ ಮಾಡಿದೆ. ಕರಡು ಮತದಾರರ ಪಟ್ಟಿಯನುಸಾರ ವಾರ್ಡುವಾರು ವಿಂಗಡಣೆಗೊಂಡಿರುವ ವಿಧಾನಸಭಾ ಕ್ಷೇತ್ರದ ಮತಗಟ್ಟೆಗಳ ಪ್ರದೇಶ ಮತ್ತು ಮತದಾರರನ್ನು ಭೌತಿಕವಾಗಿ ಪರಿಶೀಲನೆ ಮಾಡಿದಾಗ ಕೆಲವು ಪ್ರದೇಶಗಳಲ್ಲಿ ಮತದಾರರ ವಿವರಗಳು ಅದಲು-ಬದಲು ಆಗಿದ್ದು, ಭೌಗೋಳಿಕವಾಗಿ ಒಂದು ವಾರ್ಡಿನಲ್ಲಿ ವಾಸವಾಗಿರುವ ಮತದಾರರು ಮತ್ತೊಂದು ವಾರ್ಡಿನ ವ್ಯಾಪ್ತಿಯ ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಂಡಿರುವುದು, ಮತಗಟ್ಟೆಗಳ ಕೊಠಡಿ ಸಂಖ್ಯೆಗಳು ನಮೂದಿಸುವಲ್ಲಿ ತಪ್ಪುಗಳಾಗಿದ್ದು, ಸದರಿ ಲೋಪದೋಷಗಳನ್ನು ಸರಿಪಡಿಸಲು ಅವಕಾಶವಿದ್ದು,ಈ ಕೆಳಕಂಡಂತೆ ಪರಿಷ್ಕೃತ ಕಾರ್ಯಕ್ರಮ ಪಟ್ಟಿಯನ್ನು ರೂಪಿಸಲಾಗಿದೆ. ಈ ಎಲ್ಲಾ ಕಾರ್ಯಗಳನ್ನು ಪೂರ್ಣಗೊಳಿಸಿ ಮಾ.28 ರಿಂದ ಏ.4 ರ ವೇಳೆಗೆ ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗುವುದು ಎಂದು ಚುನಾವಣಾ ಆಯೋಗ ಪ್ರಕಟಣೆಯಲ್ಲಿ ತಿಳಿಸಿದೆ.

## ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ 2.8 ಕೋಟಿ ರೂ. ಮೌಲ್ಯದ ಡ್ರಗ್ಸ್‌ವಶ

• ಉದಯವಾಹಿನಿ, ಬೆಂಗಳೂರು

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬ್ಯಾಂಕಾಕ್‌ನಿಂದ ಬಂದ ಪ್ರಯಾಣಿಕನನ್ನು ತಡೆದು ಲಗೇಜ್ ಪರಿಶೀಲನೆ ವೇಳೆ ಸುಮಾರು 2.8 ಕೋಟಿ ರೂ ಮೌಲ್ಯ 8 ಕೆಜಿ ಹೈಡ್ರೋ ಪೋನಿಕ್ ಗಾಂಜಾ ಪತ್ತೆಯಾಗಿದೆ. ಇನ್ನೊಂದು ಪ್ರಕರಣದಲ್ಲಿ ಹಾಂಕಾಂಗ್‌ನಿಂದ ಬಂದಿದ್ದ ಮತ್ತೊಬ್ಬ ಪ್ರಯಾಣಿಕನ ಬಳಿಯಿಂದ 900 ಗ್ರಾಂ ಗಾಂಜಾ ಪತ್ತೆಯಾಗಿದ್ದು, ಇದರ ಮೌಲ್ಯ ಸುಮಾರು 31.5 ಲಕ್ಷ ರೂ. ಎಂದು ಅಂದಾಜಿಸಲಾಗಿದೆ ಎಂದು ಕಸ್ಟಮ್ ಇಲಾಖೆ ತಿಳಿಸಿದೆ.

ವಿಮಾನ ನಿಲ್ದಾಣದ ಭದ್ರತಾ ಸಿಬ್ಬಂದಿ ಮತ್ತು ಕಸ್ಟಮ್ಸ್ ಅಧಿಕಾರಿಗಳ ಜಂಟಿ ಕಾರ್ಯಾಚರಣೆಯಿಂದ ಈ ಮಾದಕ ಕಳ್ಳಸಾಗಣೆ ಪತ್ತೆಯಾಗಿದೆ. ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ತಿಳಿಸಲಾಗಿದೆ. ಇವರು ಮಾದಕ ಕಳ್ಳಸಾಗಣೆ ಜಾಲದಲ್ಲಿ ಕಾರ್ಯನಿರ್ವಹಿಸುತ್ತಿದ್ದರು ಎಂಬ ಶಂಕೆ ಇದೆ. ಪ್ರಸ್ತುತ ಪ್ರಕರಣ ದಾಖಲಿಸಿ ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಹೇಳಿದೆ.

### ಕಾಂಗ್ರೆಸ್ ಪಕ್ಷಕ್ಕೆ ಹೊಸ ರಕ್ತ, ಹೊಸ ಚಿಂತನೆ ಬೇಕು, ನಾನು ಬೆಂಬಲಿಸುತ್ತೇನೆ: ಡಿಕೆಶಿ

## ಹೊಸಬರಿಗೆ ಅವಕಾಶ ಕೊಡುವುದನ್ನು ಬೆಂಬಲಿಸುತ್ತೇನೆ

• ಉದಯವಾಹಿನಿ, ಬೆಂಗಳೂರು

ಕಾಂಗ್ರೆಸ್ ಪಕ್ಷಕ್ಕೆ ಹೊಸ ರಕ್ತ, ಹೊಸ ಚಿಂತನೆ ಬೇಕು. ನಾನು ಹೊಸ ರಕ್ತವನ್ನು ಬೆಂಬಲಿಸುತ್ತೇನೆ ಎಂದು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಹೇಳಿದರು. ನವ ಪೀಳಿಗೆಯ ಬದಲಾವಣೆಯ ಅಗತ್ಯವನ್ನು ಒತ್ತಿ ಹೇಳಿದರು.

**ಹೊಸ ಪೀಳಿಗೆ ಬೇಕು**

ರಾಜ್ಯದಲ್ಲಿ ಸಿಎಂ ಬದಲಾಗುತ್ತಾರೆ ಎಂಬ ಮಾಹಿತಿ ಸಚಿವ ಎಚ್.ಸಿ.ಮಹದೇವಪ್ಪ ಅವರಿಗೆ ಸಿಕ್ಕಿರಬಹುದು. ಆ ಕಾರಣಕ್ಕೇ ಅವರು ದಲಿತ ಸಿಎಂ ವಿಚಾರ ಪ್ರಸ್ತಾಪ ಮಾಡುತ್ತಿದ್ದಾರೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಟಾಂಗ್‌ಕೊಟ್ಟಿದ್ದಾರೆ. ಸರಕಾರದಲ್ಲಿ ಗೊಂದಲ ಸೃಷ್ಟಿಸುವ, ಶಾಸಕರ ನಿಯಂತ್ರಿಸುವುದು ಮುಖ್ಯಮಂತ್ರಿಯವರ ಜವಾಬ್ದಾರಿಯಾಗಿದೆ. ಈ ಕುರಿತು ದಿಲ್ಲಿ ಹೈಕಮಾಂಡ್ ನಾಯಕರಿಗೆ ಮಾಹಿತಿ ನೀಡುವ ಹೊಣೆಗಾರಿಕೆಯನ್ನು ಪಕ್ಷದ ಅಧ್ಯಕ್ಷನಾಗಿ ಮಾಡುತ್ತಿದ್ದೇನೆ, ಎಂದೂ ಡಿಸಿಎಂ ಹೇಳಿದ್ದಾರೆ.

ಡಿ.ಕೆ.ಶಿವಕುಮಾರ್ ನೇರವಾಗಿಯೇ ತಮ್ಮ ವಿರೋಧಿ ಬಣದ ವಿರುದ್ಧ ಹೀಗೆ ಮಾತನಾಡಿರುವುದು ಗಮನ ಸೆಳೆದಿದೆ. ಮೊದಲ ಬಾರಿಗೆ ಚುನಾಯಿತರಾಗಿರುವ ಪಕ್ಷದ 31 ಶಾಸಕರು ಸಚಿವ ಸಂಪುಟ ಪುನಾರಚನೆ ಹಕ್ಕೊತ್ತಾಯದೊಂದಿಗೆ



> ತಮ್ಮ ಕ್ಯಾಬಿನೆಟ್‌ಗೆ ಹೊಸ ಶಾಸಕರು ಸೇರ್ಪಡೆಯಾಗಲಿದ್ದಾರಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ನಾನು ಸಚಿವ ಸಂಪುಟ ರಚನೆ ಮಾಡುತ್ತೇನೆ ಎಂದು ಹೇಳಿಲ್ಲ. ಸಚಿವ ಸಂಪುಟ ವಿಸ್ತರಣೆ ಮಾಡುತ್ತೇನೆ ಎಂದು ಮುಖ್ಯಮಂತ್ರಿ ಅವರು, ಹಾಗಾಗಿ ವಿಸ್ತರಣೆ ವೇಳೆ ನಮಗೆ ಅವಕಾಶ ಬೇಕು ಎಂದು ಹೊಸ ಶಾಸಕರು ಪತ್ರ ಬರೆದಿದ್ದಾರೆ. ಈ ಬೇಡಿಕೆಗಾಗಿ ಅವರು ದಿಲ್ಲಿಗೂ ಹೋಗಬಹುದು. ಬೇರೆಡೆಗೂ ತೆರಳಬಹುದು. ಅವರಿಗೂ ಆಸೆ, ನಿರೀಕ್ಷೆಗಳು ಇರುತ್ತವೆ.
>
> -ಡಿಕೆ ಶಿವಕುಮಾರ್, ಉಪ ಮುಖ್ಯಮಂತ್ರಿ

ಹೈಕಮಾಂಡ್‌ಗೆ ಪತ್ರ ಬರೆದಿರುವುದನ್ನು ಬೆಂಬಲಿಸಿದರು.

**ಹೊಸ ಪೀಳಿಗೆ, ವಿಭಿನ್ನ ಆಲೋಚನೆ ಮುಖ್ಯ:** ಕನಿಷ್ಠ ಐವರು ಹೊಸ ಶಾಸಕರಿಗೆ ಕ್ಯಾಬಿನೆಟ್‌ನಲ್ಲಿ ಅವಕಾಶ ನೀಡಬೇಕು ಎಂದು ಪಕ್ಷದ ವರಿಷ್ಠರಿಗೆ ಪತ್ರ ಬರೆದಿರುವುದು ಗಮನಕ್ಕೆ ಬಂದಿದೆ. ಇದರಲ್ಲಿ ತಪ್ಪಿಲ್ಲ. ನಾವುಗಳೇ ಎಷ್ಟು ದಿನ ಅಧಿಕಾರದಲ್ಲಿ ಗೂಟ ಹೊಡೆದುಕೊಂಡು ಕೂತಿರಬೇಕು? ನಾನು ಸಚಿವನಾಗಿ 36 ವರ್ಷ ಕಳೆದಿದೆ.

### ಸಮಾನ ಮನಸ್ಕರು ನಾವು

ನಾಯಕತ್ವ ಗೊಂದಲವನ್ನು ಶೀಘ್ರ ಬಗೆಹರಿಸುವುದಾಗಿ ಎಐಸಿಸಿ ನಾಯಕರು ಹೇಳಿದ್ದಾರೆ ಎಂಬ ಸತೀಶ್ ಜಾರಕಿಹೊಳಿ ಹೇಳಿಕೆಯನ್ನು ಗಮನಿಸಿದ್ದೇನೆ. ಈ ಕುರಿತು ಹೆಚ್ಚಿನ ಮಾಹಿತಿಯಿಲ್ಲ. ಜಾರಕಿಹೊಳಿ ಮತ್ತು ನಾನು ಸಮಾನ ಮನಸ್ಕರು. ಪಕ್ಷದ ವಿಚಾರವಾಗಿ ವಾರಕ್ಕೊಮ್ಮೆ ಭೇಟಿಯಾಗಿ ಚರ್ಚಿಸುತ್ತೇವೆ. ರಾಜ್ಯದಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ಒಟ್ಟಾಗಿ ಯೋಜನೆ ತಯಾರು ಮಾಡುತ್ತಿದ್ದೇವೆ ಎಂದು ಹೇಳಿದರು.


ವಿಭಿನ್ನ ಆಲೋಚನೆಯೊಂದಿಗೆ ಹೊಸ ಪೀಳಿಗೆ ಸಂಪುಟಕ್ಕೆ ಬರಬೇಕು ಎಂಬುದನ್ನು ಬೆಂಬಲಿಸುವವರಲ್ಲಿ ನಾನೂ ಒಬ್ಬನಾಗಿದ್ದೇನೆ ಎಂದು ಡಿಸಿಎಂ ಡಿಕೆಶಿ ಹೇಳಿದರು.

ಮೋದಿ ಶಾಸಕರಾಗದೆಯೇ ಮುಖ್ಯಮಂತ್ರಿಯಾದರು. ಮೊದಲ ಬಾರಿಗೆ ಶಾಸಕನಾಗಿ ಸಚಿವ ಸ್ಥಾನ ಪಡೆದವರಲ್ಲಿ ನಾನೂ ಒಬ್ಬ. ಹೊಸ ನಾಯಕತ್ವ ಬೆಳೆಸಬೇಕು, ಅದಕ್ಕಾಗಿ ಹೊಸಬರನ್ನು ಸಚಿವರಾಗಿ ಮಾಡುವುದರಲ್ಲಿ ತಪ್ಪಿಲ್ಲ. ಈ ಬಗ್ಗೆ ಪಕ್ಷ ತೀರ್ಮಾನ ಮಾಡುತ್ತದೆ, ಎಂದು ಸ್ಪಷ್ಟಪಡಿಸಿದರು.

## 'ಅರಾಜಕತೆ' ಕಾಂಗ್ರೆಸ್ ಸರ್ಕಾರದ ಆರನೇ ಗ್ಯಾರೆಂಟಿ : ಆರ್.ಅಶೋಕ್

• ಉದಯವಾಹಿನಿ, ಬೆಂಗಳೂರು

ಕಾಂಗ್ರೆಸ್ ಸರ್ಕಾರದ ಆರನೇ ಗ್ಯಾರೆಂಟಿ ಅರಾಜಕತೆ ಗ್ಯಾರೆಂಟಿ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ತಿಳಿಸಿದ್ದಾರೆ. ಈ ಕುರಿತು ಎಕ್ಸ್‌ನಲ್ಲಿ ಟ್ವೀಟ್ ಮಾಡಿರುವ ಅವರು, ಕಾಂಗ್ರೆಸ್ ಅಧಿಕಾರದಲ್ಲಿದೆ, ಜನರು ಬೀದಿಗಿಳಿದಿದ್ದಾರೆ. ಕಾಂಗ್ರೆಸ್ ಸರ್ಕಾರದ ಕೆಟ್ಟ ಕೊಳಕು ಆಡಳಿತದಿಂದ ಸಮಾಜದ ಪ್ರತಿ ವರ್ಗ ಬೀದಿಗಿಳಿದು ಹೋರಾಟ ನಡೆಸುತ್ತಿದೆ ಎಂದು ಹೇಳಿದ್ದಾರೆ. ಧಾರವಾಡದಲ್ಲಿ ಸರ್ಕಾರಿ ಉದ್ಯೋಗಾಕಾಂಕ್ಷಿಗಳಿಂದ ನೇಮಕಾತಿಗೆ ಒತ್ತಾಯಿಸಿ ಪ್ರತಿಭಟನೆ, ಖಾಲಿ ಹುದ್ದೆ ಭರ್ತಿ ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರಾಜ್ಯ ಸರ್ಕಾರಿ ವೈದ್ಯರಿಂದ ಮಾರ್ಚ್ 11 ರಿಂದ ಒಪಿಡಿ ಬಂದ್. 37,000 ಕೋಟಿ ರೂ. ಬಾಕಿಗೆ ಆಗ್ರಹಿಸಿ ಗುತ್ತಿಗೆದಾರರಿಂದ ಮಾರ್ಚ್ 6 ರಂದು ಕಾಮಗಾರಿ ಸ್ಥಗಿತಗೊಳಿಸಿ ಪ್ರತಿಭಟನೆ ಕೈಗೊಂಡಿದ್ದಾರೆ. ಪರಿಶಿಷ್ಟ ಜಾತಿಗಳ ಒಳಮೀಸಲಾತಿ ವರ್ಗೀಕರಣದಲ್ಲಿ ಆಗಿರುವ ಅನ್ಯಾಯ ಸರಿಪಡಿಸುವಂತೆ ಬಂಜಾರ, ಭೋವಿ, ಕೊರಮ, ಕೊರಚ ಮತ್ತು ಅಲೆಮಾರಿ ಸಮುದಾಯಗಳ ಪ್ರತಿಭಟನೆ, ಒಳಮೀಸಲಾತಿಯಿಂದ ಆಗಿರುವ ಅನ್ಯಾಯ ವಿರುದ್ಧ ಎಸ್ಸಿ ಬಲಗೈ ಸಮುದಾಯದ ಪ್ರತಿಭಟನೆ, ಬಿಡದಿ ಟೌನ್‌ಶಿಪ್ ಯೋಜನೆ, ಸೆಣಬು ಸಬ್ಸಿಡಿ ಬಂದ್. ಕಬ್ಬು ಬಿಲ್ ಬಾಕಿ ವಿರುದ್ಧ ರೈತರಿಂದ ಬೀದಿಳಿಗಿದು ಪ್ರತಿಭಟನೆ, ವೇತನ ಹೆಚ್ಚಳ ಸೇರಿ ವಿವಿಧ ಬೇಡಿಕೆಗೆ ಒತ್ತಾಯಿಸಿ ಫೆಬ್ರವರಿ 27 ರಿಂದ ಆಶಾ ಕಾರ್ಯಕರ್ತೆಯರಿಂದ ಪ್ರತಿಭಟನೆ, 38 ತಿಂಗಳ ಹಿಂಬಾಕಿಗಾಗಿ ಸಾರಿಗೆ ನೌಕರರಿಂದ ಮುಷ್ಕರ ಹಮಿಕೊಂಡಿದ್ದಾರೆ. ಅರಾಜಕ ಮುಖ್ಯಮಂತ್ರಿಸಿದ್ದರಾಮಯ್ಯನವರೇ, ನಿಮ್ಮ ಭ್ರಷ್ಟ ಆಡಳಿತದಲ್ಲಿ ಒಬ್ಬರಾದರೂ ನೆಮದಿಯಿಂದ ಇದ್ದಾರಾ? ಸರ್ಕಾರದ ಖಜಾನೆ ಖಾಲಿಯಾಗಿರುವುದಕ್ಕೆ ಈ ಹೋರಾಟಗಳಿಗಿಂತ ಬೇರೆ ಸಾಕ್ಷಿ ಬೇಕೆ? ಇಡೀ ಕರ್ನಾಟಕ ಇಂದು ಅರಾಜಕತೆಯಲ್ಲಿದೆ ಎಂದು ಅಶೋಕ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.



## ಕಾವೇರಿ 6ನೇ ಹಂತದ ಯೋಜನೆಗೆ ಜಲಮಂಡಳಿ ಸಿದ್ಧತೆ

• ಉದಯವಾಹಿನಿ, ಬೆಂಗಳೂರು



ಕಾವೇರಿ 6ನೇ ಹಂತದ ಯೋಜನೆ ಜಾರಿಗೆ ಜಲಮಂಡಳಿ ಸಿದ್ದತೆ ನಡೆಸಿದೆ.ಕಾವೇರಿ ನೀರು ಸರಬರಾಜು ಯೋಜನೆಯ 5ನೇ ಹಂತ ಬಹುತೇಕ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ 6ನೇ ಹಂತದ ಯೋಜನೆ ಅನುಷ್ಠಾನಕ್ಕೆ ತೀರ್ಮಾನಿಸಲಾಗಿದೆ ಎಂದು ಜಲ ಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ. ಆರನೇ ಹಂತದ ಯೋಜನೆ ಜಾರಿಗೆ ಸಿದ್ದಪಡಿಸಿರುವ ಡಿಪಿಆರ್‌ಗೆ ಗುರುವಾರ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ದೊರೆಯುವ ಸಾಧ್ಯತೆ ಇದೆ ಎಂದು ಅವರು ತಿಳಿಸಿದ್ದಾರೆ.

ಈಗಾಗಲೇ 5ನೇ ಹಂತದ ಮೂಲಕ ನಗರಕ್ಕೆ ಒಟ್ಟು 2225 ಎಂಎಲ್‌ಡಿ ನೀರು ಪೂರೈಕೆ ಆಗುತ್ತಿದೆ. ಸುಮಾರು 1.50 ಕೋಟಿ ಜನರಿಗೆ ಕಾವೇರಿ ನೀರು ಸರಬರಾಜು ಮಾಡಲಾಗುತ್ತಿದೆ, ಬಿಬಿಎಂಪಿಗೆ ಸೇರ್ಪಡೆಯಾದ ಹೊಸ ಪ್ರದೇಶಗಳ ಕುಡಿಯುವ ನೀರಿನ ಅಗತ್ಯವನ್ನು ಗಮನದಲ್ಲಿಟ್ಟು 6ನೇ ಹಂತ ರೂಪಿಸಲಾಗಿದೆ. ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಬೇಡಿಕೆಯಂತೆ ನೀರು ಹಂಚಿಕೆ ಮಾಡಲಾಗುತ್ತದೆ.

ಕಟ್ಟೇರಿ ಗ್ರಾಮದ ಸಮೀಪ ನೀರು ಸಂಸ್ಕರಣಾ ಘಟಕದಲ್ಲಿ ಅಗತ್ಯ ನೀರು ಶೇಖರಣೆ ಗುರುತ್ವಾಕರ್ಷಣಾ ಬಲದಿಂದ ರಾಮನಗರದ ದೇವರ ಹೊಸಹಳ್ಳಿಗೆ ಹರಿವು ಬಳಿಕ ಕೆಂಗೇರಿ ಶೇಖರಣಾ ಸಂಗ್ರಹಗಾರಕ್ಕೆ ಪಂಪಿಂಗ್ ಮೂಲಕ ನೀರು ಶೇಖರಣೆ ಮಾಡಲಾಗುವುದು.ಅಲ್ಲಿಂದ ವಿವಿಧ ಬಡಾವಣೆಗಳಿಗೆ ಪೂರೈಕೆ ಮಾಡಲಾಗುತ್ತದೆ.

ಬೆಂಗಳೂರು ನಗರ ಹೊರಭಾಗದಲ್ಲಿನ ನೀರಿನ ಸಮಸ್ಯೆ ನೀಗಿಸಲು ಕಾವೇರಿ 6ನೇ ಹಂತದ ಯೋಜನೆ ರೂಪಿಸಲಾಗಿದ್ದು, ಸಚಿವ ಸಂಪುಟದ ಅನುಮೋದನೆ ದೊರೆತ ತಕ್ಷಣವೇ ಆರ್ಥಿಕ ನೆರವು ಹಾಗೂ ಭೂಸ್ವಾಧೀನ ಪ್ರಕ್ರಿಯೆಗಳು ಆರಂಭವಾಗುವ ಸಾಧ್ಯತೆ ಇದೆ ರಾಮ್ ಪ್ರಸಾತ್ ಮನೋಹರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

## ದೇಶವಿರೋಧಿ ಚಟುವಟಿಕೆ ವಿರೋಧಿಸಿ ಎಬಿವಿಪಿ ಪ್ರತಿಭಟನೆ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ನಗರದ ಸರ್ಜಾಪುರ ರಸ್ತೆಯಲ್ಲಿರುವ ಪ್ರತಿಷ್ಠಿತ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಆವರಣದಲ್ಲಿ ದೇಶವಿರೋಧಿ ಚಟುವಟಿಕೆಗಳು ನಡೆಯುತ್ತಿವೆ ಎಂದು ಆರೋಪಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಬೃಹತ್ ಪ್ರತಿಭಟನೆ ನಡೆಸಿದ್ದು, ಶಿಕ್ಷಣ ಸಂಸ್ಥೆಯ ಮಾನ್ಯತೆಯನ್ನು ರದ್ದುಗೊಳಿಸುವಂತೆ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದೆ. ವಿಶ್ವವಿದ್ಯಾಲಯದಲ್ಲಿ ಸಕ್ರಿಯವಾಗಿರುವ ಸ್ಟಾರ್ಕ್ ಆಲ್ ಇಂಡಿಯಾ ಸ್ಟೂಡೆಂಟ್ಸ್ ಅಸೋಸಿಯೇಷನ್ ಸಂಘಟನೆಗಳು ಭಾರತೀಯ ಸೈನಿಕರನ್ನು ಅವಮಾನಿಸುವಂತಹ, ಕಾಶ್ಮೀರದ ಪ್ರತ್ಯೇಕತಾವಾದವನ್ನು ಬೆಂಬಲಿಸುವಂತಹ ಕಾರ್ಯಕ್ರಮಗಳನ್ನು ಆಯೋಜಿಸಿವೆ.

ರಾಷ್ಟ್ರದ ಏಕತೆ, ಸಾರ್ವಭೌಮತ್ವಕ್ಕೆ ಧಕ್ಕೆ ತರುವಂತಹ ವಿಷಯಗಳನ್ನು ಚರ್ಚೆಯ ಹೆಸರಿನಲ್ಲಿ ಪ್ರಚೋದಿಸಲಾಗುತ್ತಿದೆ ಎಂಬುದು ಪ್ರತಿಭಟನಾಕಾರರ ಮುಖ್ಯ ದೂರಾಗಿದೆ. ಪ್ರತಿಭಟನೆ ಕೇವಲ ಘೋಷಣೆಗಳಿಗೆ ಸೀಮಿತವಾಗದೆ, ಎಬಿವಿಪಿ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದಿದೆ.

**ಮಾನ್ಯತೆ ರದ್ದು:** ದೇಶವಿರೋಧಿ ಮನಸ್ಥಿತಿಗೆ ವೇದಿಕೆ ಮಾಡಿಕೊಡುತ್ತಿರುವ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಮಾನ್ಯತೆಯನ್ನು ತಕ್ಷಣ ರದ್ದುಗೊಳಿಸಬೇಕು. ಸಂಘಟನೆಗಳ ನಿಷೇಧ ಸೈನಿಕರ ವಿರುದ್ಧ ದ್ವೇಷ ಹರಡುತ್ತಿರುವ ಸ್ಟಾರ್ಕ್ ಸಂಘಟನೆಯನ್ನು ನಿಷೇಧಿಸಬೇಕು.

**ವಿವಿಯಿಂದ ಕ್ಷಮೆಯಾಚನೆ:** ರಾಷ್ಟ್ರವಿರೋಧಿ ಕೃತ್ಯಗಳಿಗೆ ಅವಕಾಶ ನೀಡಿದ್ದಕ್ಕಾಗಿ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಬಹಿರಂಗವಾಗಿ ಕ್ಷಮೆಯಾಚಿಸಬೇಕು.ಈ ಗಂಭೀರ ಆರೋಪಗಳನ್ನು ವಿಶ್ವವಿದ್ಯಾಲಯದ ಅಧಿಕಾರಿಗಳು, ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ಕಟುವಾಗಿ ನಿರಾಕರಿಸಿದ್ದಾರೆ. ಇದು ಕೇವಲ ಶೈಕ್ಷಣಿಕ ಚರ್ಚೆಯಾಗಿತ್ತು ಮತ್ತು ಯಾವುದೇ ಕಾನೂನು ಬಾಹಿರ ಚಟುವಟಿಕೆ ನಡೆದಿಲ್ಲ ಎಂದು ಅವರು ಸಮರ್ಥಿಸಿಕೊಂಡಿದ್ದಾರೆ.


**ಕಠಿಣ ಕ್ರಮಕ್ಕೆ ಆಗ್ರಹ:** ಅದನ್ನ ವಿರೋಧಿಸಿ ಸಂಘಟನೆ ಪ್ರತಿಭಟನೆ ನಡೆಸಿದೆ. ಆದ್ರೆ ಕಾಲೇಜಿನವರು ಸೆಕ್ಯೂರಿಟಿ, ವಿದ್ಯಾರ್ಥಿಗಳನ್ನ ಬಳಸಿಕೊಂಡು ನಮ್ಮ ಮೇಲೆ ಹಲ್ಲೆ ಮಾಡಲು ಯತ್ನಿಸಿದ್ರು. ನಾವು ಭಾರತ ಬಾವುಟ ಹಿಡಿದು ಪ್ರತಿಭಟನೆ ಮಾಡಿದಾಗ ವಿದ್ಯಾರ್ಥಿಗಳು ಅಶ್ಲೀಲ ಸನ್ನೆ ಮಾಡಿದ್ದಾರೆ ಎಂದು ಎಬಿವಿಪಿ ಕಾರ್ಯಕರ್ತರು ಆರೋಪ ಮಾಡಿದ್ದಾರೆ. ದೇಶ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವವರ ವಿರುದ್ಧ ಕಠಿಣ ಕ್ರಮವಾಗಲಿ ಎಂದು ಆಗ್ರಹಿಸಿದ್ದಾರೆ.

## ಗ್ಯಾರಂಟಿ ಸರ್ಕಾರಕ್ಕೆ ಸಾಲುಸಾಲು ಮುಷ್ಕರದ ತಲೆ ಬಿಸಿ

• ಉದಯವಾಹಿನಿ, ಬೆಂಗಳೂರು

ಸಾರಿಗೆ ನೌಕರರು, ಸರ್ಕಾರಿ ವೈದ್ಯರು, ರಾಜ್ಯ ಗುತ್ತಿಗೆದಾರರ ಸಂಘದವರು, ತಮ್ಮ ಬಹುದಿನಗಳ ಬೇಡಿಕೆಯನ್ನು ಈಡೇರಿಸಬೇಕೆಂದು ಒತ್ತಾಯಿಸಿ, ಮಾರ್ಚ್ ತಿಂಗಳಲ್ಲಿ ಬೀದಿಗಿಳಿದು ಹೋರಾಟ ನಡೆಸಲು ಮುಂದಾಗಿದ್ದು, ಆಡಳಿತಾರೂಢ ಕಾಂಗ್ರೆಸ್ ಸರ್ಕಾರಕ್ಕೆ ಸಾಲುಸಾಲು ಮುಷ್ಕರದ ಬಿಸಿ ತಟ್ಟಲಿದೆ. ಸಂಪೂರ್ಣ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸಾರಿಗೆ ಇಲಾಖೆ ನೌಕರರು, ವೈದ್ಯರು, ಗುತ್ತಿಗೆದಾರರು, ಸರ್ಕಾರಿ ಆಸ್ಪತ್ರೆಗಳ ವೈದ್ಯರು ಬೃಹತ್ ಪ್ರತಿಭಟನೆ ನಡೆಸಲು ಮುಂದಾಗಿರುವುದರಿಂದ ಇದು ರಾಜ್ಯ ಸರ್ಕಾರಕ್ಕೆ ಸವಾಲಾಗಿ ಪರಿಣಮಿಸಲಿದೆ. ರಾಜ್ಯ ಗುತ್ತಿಗೆದಾರರ ಸಂಘವು ವಿವಿಧ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸುಮಾರು 37,000 ಕೋಟಿ ರೂ. ಬಾಕಿ ಬಿಲ್ ಪಾವತಿಗೆ ಆಗ್ರಹಿಸಿದರೆ, ಸರ್ಕಾರಿ ಆಸ್ಪತ್ರೆಗಳ ವೈದ್ಯರು ತಮ ಬೇಡಿಕೆಗಳ ಪಟ್ಟಿಯನ್ನೇ ಸರ್ಕಾರದ ಮುಂದಿಟ್ಟಿದ್ದಾರೆ.

ಸಾರಿಗೆ ಸಂಘಟನೆಗಳು ಮಾರ್ಚ್ 2ರಂದು ಬಸ್ ಸಂಚಾರ ಸ್ಥಗಿತಗೊಳಿಸಿ ಮುಷ್ಕರ ನಡೆಸ ಮುಂದಾಗಿದ್ದು, ವೈದ್ಯರು ಒಪಿಡಿ ಬಂದ್ ಮಾಡಿ ಹೋರಾಟಕ್ಕೆ ಇಳಿಯುತ್ತಿದ್ದಾರೆ. 38 ತಿಂಗಳ ಹಿಂಬಾಕಿ, ವೇತನ ಹೆಚ್ಚಳಕ್ಕೆ ಸಂಬಂಧಿಸಿದಂತೆ ಮತ್ತೆ ಸಾರಿಗೆ ನೌಕರರು ಮುಷ್ಕರಕ್ಕೆ ಮುಂದಾಗಿದ್ದಾರೆ. ಮಾರ್ಚ್ 2ರಂದು 4 ನಿಗಮಗಳ ಸಾರಿಗೆ ನೌಕರರು ಪ್ರತಿಭಟನೆ ನಡೆಸಲಿದ್ದು, ಬಸ್ ಸಂಚಾರ ಬಂದ್ ಮಾಡುವ ಎಚ್ಚರಿಕೆ ನೀಡಿದ್ದಾರೆ.



**ಮಾ.11ರಿಂದ ವೈದ್ಯರ ಮುಷ್ಕರ:** ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘವು ಸರ್ಕಾರದ ವಿರುದ್ಧ ಸೆಡ್ಡು ಹೊಡೆದು ಮಾರ್ಚ್ 11ರಿಂದ ಮುಷ್ಕರ ಮಾಡುವುದಾಗಿ ಘೋಷಿಸಿದೆ. ಸರ್ಕಾರದ ಜೊತೆ ನಡೆದ ಹಲವು ಸುತ್ತಿನ ಮಾತುಕತೆಗಳು ವಿಫಲವಾದ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸಂಘದ ಪದಾಧಿಕಾರಿಗಳು ತಿಳಿಸಿದ್ದಾರೆ. ಮುಷ್ಕರವನ್ನು ಎರಡು ಹಂತಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ. ಮೊದಲ ಹಂತವಾಗಿ ಮಾರ್ಚ್ 11ರಿಂದ 15ರವರೆಗೆ ರಾಜ್ಯದ ಎಲ್ಲಾ ಜಿಲ್ಲಾಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಡಿಸ್ಪೆನ್ಸರಿಗಳಲ್ಲಿ ಕಪ್ಪು ಪಟ್ಟಿಧರಿಸಿ ಹೊರರೋಗಿ ಸೇವೆಯನ್ನು ಸ್ಥಗಿತಗೊಳಿಸಲಾಗುತ್ತದೆ.

ಎರಡನೇ ಹಂತವಾಗಿ ಮಾರ್ಚ್ 16ರಿಂದ ಅನಿರ್ದಿಷ್ಟಾವಧಿ ವರೆಗೆ ಕರ್ತವ್ಯಕ್ಕೆ ಗೈರಾಗುವ ಮೂಲಕ ಮುಷ್ಕರ ತೀವ್ರಗೊಳಿಸುವುದಾಗಿ ಎಚ್ಚರಿಕೆ ನೀಡಲಾಗಿದೆ.

**ಗುತ್ತಿಗೆದಾರರಿಂದ ಸರ್ಕಾರಕ್ಕೆ ಗಡುವು:** ಕಳೆದ ಮೂರು ವರ್ಷಗಳಿಂದ ಬಾಕಿ ಉಳಿದಿರುವ 37,000 ಕೋಟಿ ರೂಪಾಯಿ ಬಿಲ್ ಬಿಡುಗಡೆಗೆ ಗುತ್ತಿಗೆದಾರರು ಆಗ್ರಹಿಸಿದ್ದಾರೆ. ಈ ಹಣ ಲೋಕೋಪಯೋಗಿ, ಜಲಸಂಪನ್ಮೂಲ, ಆರ್ ಡಿಪಿಆರ್ ಸೇರಿದಂತೆ ವಿವಿಧ ಇಲಾಖೆಗಳಿಗೆ ಸೇರಿದೆ. ಬಾಕಿ ಪಾವತಿಸದಿದ್ದಲ್ಲಿ ಫೆಬ್ರವರಿ ಅಂತ್ಯಕ್ಕೆ ಕಾಮಗಾರಿ ಸ್ಥಗಿತಗೊಳಿಸಿ ಮಾರ್ಚ್ 6ರಂದು ಬೃಹತ್ ಪ್ರತಿಭಟನೆ ನಡೆಸುವುದಾಗಿ ಕರ್ನಾಟಕ ಗುತ್ತಿಗೆದಾರರ ಸಂಘದ ಎಚ್ಚರಿಕೆ ನೀಡಿದೆ. ಹಿಂದಿನ ಬಿಜೆಪಿ, ಹಾಲಿ ಕಾಂಗ್ರೆಸ್ ಸರಕಾರದಿಂದ ಬಾಕಿ ಉಳಿದಿರುವ 37 ಸಾವಿರ ಕೋಟಿ ರೂ. ಬಿಲ್ ಬಾಕಿ ಬಿಡುಗಡೆಗೆ ಒತ್ತಾಯಿಸಿ ಮಾಚ್ 6 ರಂದು ಕಾಮಗಾರಿ ಸ್ಥಗಿತಗೊಳಿಸಿ ಸಾಂಕೇತಿಕ ಧರಣಿ ನಡೆಸುತ್ತೇವೆ. ಇದಕ್ಕೆ ಸ್ಪಂದಿಸದಿದ್ದಲ್ಲಿ ಏಪ್ರಿಲ್ ತಿಂಗಳಲ್ಲಿ ಅನಿರ್ದಿಷ್ಟಾವಧಿ ಕೆಲಸ ಬಂದ್ ಮಾಡಿ ಸತ್ಯಾಗ್ರಹ ಆರಂಭಿಸುತ್ತೇವೆ ಎಂದು ಎಚ್ಚರಿಕೆ ಕೊಟ್ಟಿದೆ. 100, 200 ಕೋಟಿ ರೂ.ಗಳ ಪ್ಯಾಕೇಜ್ ಮಾಡಿ ಹೊರರಾಜ್ಯದ ಗುತ್ತಿಗೆದಾರರಿಗೆ ಕೆಲಸ ಕೊಡಲಾಗುತ್ತಿದೆ. ಇದನ್ನು ಕೈ ಬಿಡುವಂತೆ ಕೋರಲಾಗಿದೆ. ಬಾಕಿ ಹಣ ಬಿಡುಗಡೆ ಪ್ರಕ್ರಿಯೆಯಲ್ಲಿ ಉದ್ದೇಶಪೂರ್ವಕ ವಿಳಂಬ ಆಗುತ್ತಿರುವುದಕ್ಕೆ ಇದೂ ಒಂದು ಕಾರಣ ಎಂಬುದು ಸಂಘದ ಆರೋಪವಾಗಿದೆ.

## ಜಿ.ಪಂ., ತಾ.ಪಂ. ಚುನಾವಣೆಗೆ ಬಿಜೆಪಿ ಜೆಡಿಎಸ್ ಮೈತ್ರಿ : ದೇವೇಗೌಡರು

• ಉದಯವಾಹಿನಿ, ಬೆಂಗಳೂರು

ನಗರ ಸ್ಥಳೀಯ ಸಂಸ್ಥೆಗಳ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿಗಳ ಚುನಾವಣೆಗಳಲ್ಲಿ ಎನ್‌ಡಿಎ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳಬೇಕು ಎಂಬ ಅಭಿಲಾಷೆ ಇದೆ ಎಂದು ಮಾಜಿ ಪ್ರಧಾನಿ ಎಚ್. ಡಿ.ದೇವೇಗೌಡರು ತಿಳಿಸಿದರು. ಜೆ.ಪಿ.ಭವನದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮದು ಪ್ರಾದೇಶಿಕ ಪಕ್ಷ. ಬಿಜೆಪಿ ರಾಷ್ಟ್ರೀಯ ಪಕ್ಷ. ಅವರು ಚುನಾವಣಾ ಪೂರ್ವ ಹೊಂದಾಣಿಕೆ ಕುರಿತಂತೆ ಯಾವ ತೀರ್ಮಾನ ಮಾಡಿದ್ದಾರೆ ಎಂದು ಕಾದುನೋಡೋಣ ಎಂದರು. ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ವಿಚಾರದಲ್ಲಿ ಎಲ್ಲರೂ ಸೇರಿ ಚರ್ಚೆ ಮಾಡುತ್ತೇವೆ. ಬಿಜೆಪಿಯ ಕೇಂದ್ರದ ನಾಯಕರೊಂದಿಗೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿಯವರು ಚರ್ಚೆ ಮಾಡುತ್ತಾರೆ ಎಂದ ಅವರು, ಸಿದ್ದರಾಮಯ್ಯ ಅವರು ಮಾಡಿರುವ ಆರೋಪಕ್ಕೆ ಪ್ರತಿಕ್ರಿಯೆ ಕೊಡುವ ಅಗತ್ಯವಿಲ್ಲ ಎಂದು ಹೇಳಿದರು. ಜೆಡಿಎಸ್‌ನಲ್ಲಿ ಕುಟುಂಬದವರನ್ನು ಹೊರತುಪಡಿಸಿ ಬೇರೆಯವರಿಗೆ ಹುದ್ದೆ ಕೊಡುವುದಿಲ್ಲ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ನನಗೆ ಪ್ರತಿಯೊಂದು ನೆನಪಿನ ಶಕ್ತಿ ಇದೆ. ಪ್ರತಿಯೊಂದಕ್ಕೂ ಸಮಯ ಬಂದಾಗ ಪ್ರತಿಕ್ರಿಯಿಸುತ್ತೇನೆ ಎಂದರು. ವಿಜಯಪುರದಲ್ಲಿ ಫೆ.27 ರಂದು ಜೆಡಿಎಸ್ ಸಮಾವೇಶ ನಡೆಸಲಾಗುತ್ತದೆ. ಈಗಾಗಲೇ ಅದರ ಪೂರ್ವ ಸಿದ್ಧತೆಗಳು ಪ್ರಾರಂಭವಾಗಿವೆ. ಆ ಸಮಾವೇಶದಲ್ಲಿ ಪಾಲ್ಗೊಳ್ಳಲು ನನಗೂ ಆಹ್ವಾನ ನೀಡಿದ್ದಾರೆ. ರಾಜ್ಯಸಭೆಯಲ್ಲಿ ರಾಜ್ಯದ ನೀರಾವರಿ ವಿಚಾರ ಸೇರಿದಂತೆ ಏನು ಪ್ರಸ್ತಾಪ ಮಾಡಬೇಕೊ ಅದನ್ನು ಮಾಡುತ್ತೇನೆ. ನನ್ನ ರಾಜ್ಯಸಭಾ ಅವಧಿ ಮುಗಿದರೂ ಮಾಧ್ಯಮದವರನ್ನು ಭೇಟಿಯಾಗುತ್ತೇನೆ ಎಂದು ಅವರು ಹೇಳಿದರು. ಬೆಂಗಳೂರನ್ನು ಐದು ಭಾಗವಾಗಿ ವಿಂಗಡಿಸಲಾಗಿದೆ. ಇದರ ಬಗ್ಗೆ ಕುಮಾರಸ್ವಾಮಿ ಹಾಗೂ ನಿಖಿಲ್ ಕುಮಾರಸ್ವಾಮಿ ಸೇರಿದಂತೆ ಎಲ್ಲರೂ ಸೇರಿ ಚರ್ಚೆ ಮಾಡಿ ಸೂಕ್ತ ತೀರ್ಮಾನ ಮಾಡುತ್ತೇವೆ ಎಂದರು.



# ರಾಜ್ಯ ಸರ್ಕಾರದಲ್ಲಿ 2.84 ಲಕ್ಷ ಹುದ್ದೆಗಳು ಖಾಲಿ ಖಾಲಿ

### ಯಾವ ಇಲಾಖೆಗೆ ಬೇಕಿದೆ ಎಷ್ಟು ನೇಮಕಾತಿ?, ಹುದ್ದೆ ಭರ್ತಿ ಮಾಡಲು ರಾಜ್ಯ ಸರ್ಕಾರದ ಕ್ರಮಗಳೇನು?

• ಉದಯವಾಹಿನಿ, ಬೆಂಗಳೂರು

ಧಾರವಾಡದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಉದ್ಯೋಗ ಆಕಾಂಕ್ಷಿಗಳು ಬೀದಿಗಿಳಿದು ಹೋರಾಟ ನಡೆಸುತ್ತಿದ್ದಾರೆ. ಸರ್ಕಾರರ ವಿವಿಧ ಇಲಾಖೆಗಳಲ್ಲಿ ಲಕ್ಷ ಲಕ್ಷ ನೇಮಕಾತಿ ಬಾಕಿ ಇದ್ದು, ಇದನ್ನು ಭರ್ತಿ ಮಾಡಲು ಯಾವುದೇ ಕ್ರಮ ಆಗುತ್ತಿಲ್ಲ. ರಾಜ್ಯ ಸರ್ಕಾರವೇ ನೀಡಿರುವ ಅಧಿಕೃತ ಮಾಹಿತಿಗಳ ಪ್ರಕಾರ ವಿವಿಧ ಇಲಾಖೆಗಳಲ್ಲಿ 2.84 ಹುದ್ದೆಗಳು ಖಾಲಿ ಇವೆ. ಇದನ್ನು ಭರ್ತಿ ಮಾಡಲು ಸರ್ಕಾರ ಮುಂದಾಗುತ್ತಿಲ್ಲ. ಈ ನಡುವೆ ಧಾರವಾಡದಲ್ಲಿ ಉದ್ಯೋಗಾಕಾಂಕ್ಷಿಗಳು ಬೃಹತ್ ಹೋರಾಟ ಹಮ್ಮಿಕೊಂಡಿದ್ದಾರೆ.

**ಯಾವುದೇ ಕ್ರಮ ಆಗುತ್ತಿಲ್ಲ**

ಯುವ ಜನರು ಬೀದಿಗಿಳಿದು ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕುತ್ತಿದ್ದಾರೆ. ಧಾರವಾಡದ ಜುಬಿಲಿ ಸರ್ಕಲ್‌ನಲ್ಲಿ ಪ್ರತಿಭಟನೆ ನಡೆಯುತ್ತಿದ್ದು, ಇದು ಮತ್ತಷ್ಟು ತೀವ್ರ ಸ್ವರೂಪ ಪಡೆದುಕೊಳ್ಳುವ ಸಾಧ್ಯತೆ ಇದೆ. ಪ್ರತಿಭಟನೆ ಹಿನ್ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ, ಪ್ರತಿಪಕ್ಷದ ನಾಯಕ ಆರ್ ಅಶೋಕ್, ಗೃಹ ಸಚಿವ ಡಾ. ಜಿ ಪರಮೇಶ್ವರ್, ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಅವರು ಪ್ರತಿಕ್ರಿಯೆ ನೀಡಿದ್ದಾರೆ. ಪ್ರತಿಭಟನೆ, ಹೋರಾಟದ ವಿಚಾರವಾಗಿ ಸಿಎಂ ಸಿದ್ದರಾಮಯ್ಯ ಅವರು, ವಿರೋಧ ಪಕ್ಷಗಳ ವಿರುದ್ಧನೂ ಆಕ್ರೋಶ ಹೊರಹಾಕಿದ್ದಾರೆ. ಈ ಎಲ್ಲಾ ಆರೋಪ ಪ್ರತ್ಯಾರೋಪಗಳ ನಡುವೆಯೂ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿ ಇರುವುದು ವಾಸ್ತವವಾಗಿದೆ. ಕೃಷಿ, ಶಿಕ್ಷಣ, ಆರೋಗ್ಯ, ಕಂದಾಯ ಇಲಾಖೆ ಸೇರಿದಂತೆ ಪ್ರಮುಖ ಇಲಾಖೆಗಳಲ್ಲೇ ನೇಮಕಾತಿ ನಡೆದಿಲ್ಲ. ಇದನ್ನು ಭರ್ತಿ ಮಾಡಲು ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ? ಎಂಬುವುದು ಕುತೂಹಲಕ್ಕೆ ಕಾರಣವಾಗಿದೆ.



**ಒಳಮೀಸಲಾತಿ ನೆಪ:** ಉದ್ಯೋಗ ನೇಮಕಾತಿಗೆ ಸರ್ಕಾರ ಒಳ ಮೀಸಲಾತಿ ನೆಪ ನೀಡುತ್ತಿದೆ.

### ಯಾವ ಇಲಾಖೆಯಲ್ಲಿ ಎಷ್ಟು ಹುದ್ದೆ ?

- ಪಶುಸಂಗೋಪನೆ ಇಲಾಖೆ- 11,020
- ಕಂದಾಯ ಇಲಾಖೆ - 10,867
- ಕೃಷಿ ಇಲಾಖೆ- 6,876
- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ -8,525
- ಸಿಬ್ಬಂದಿ, ಆಡಳಿತ ಸುಧಾರಣೆ ಇಲಾಖೆ- 6,190
- ಆರ್ಥಿಕ ಇಲಾಖೆ - 7,668
- ಆಹಾರ, ನಾಗರೀಕ ಪೂರೈಕೆ ಇಲಾಖೆ - 1,442
- ಮೀನುಗಾರಿಕೆ ಇಲಾಖೆ - 838
- ಆರೋಗ್ಯ, ವೈದ್ಯಕೀಯ ಶಿಕ್ಷಣ ಇಲಾಖೆ - 37,572
- ಉನ್ನತ ಶಿಕ್ಷಣ ಇಲಾಖೆ - 13,599
- ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ- 4,972
- ಒಳಾಡಳಿತ ಇಲಾಖೆ - 28,188
- ಕಾನೂನು ಇಲಾಖೆ - 7,659
- ಅರಣ್ಯ ಇಲಾಖೆ - 6.478
- ಶಿಕ್ಷಣ ಇಲಾಖೆ - 79,694
- ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಇಲಾಖೆ - 10,504
- ಮಹಿಳಾ, ಮಕ್ಕಳ ಅಭಿವೃದ್ಧಿ ಇಲಾಖೆ - 3,391
- ಪರಿಶಿಷ್ಟ ಜಾತಿ ಕಲ್ಯಾಣ ಇಲಾಖೆ- 9,646

ಒಳಮೀಸಲಾತಿ ವಿಚಾರವಾಗಿ ಯಾವುದೇ ನಿರ್ಧಾರ ಆಗಿಲ್ಲ. ಈ ಬಗ್ಗೆ ಗೊಂದಲ ಇದೆ.

ಹೀಗಾಗಿ ನೇಮಕಾತಿ ಪ್ರಕ್ರಿಯೆಗೆ ತಡೆ ನೀಡಲಾಗಿದೆ ಎಂಬುವುದು ಸರ್ಕಾರದ ವಾದವಾಗಿದೆ. ಈ ಹಿನ್ನೆಲೆಯಲ್ಲಿ ಗುರುವಾರ ಸಚಿವ ಸಂಪುಟ ಸಭೆ ನಡೆಯಲಿದೆ. ಸಂಪುಟ ಸಭೆಯಲ್ಲಿ ಈ ಕುರಿತಾಗಿ ಮಹತ್ವದ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ.


ಅಂತರಾಳದಿಂದ... EDITORIAL

# ತಾತ್ಕಾಲಿಕ ಬೋಧಕ ಸಿಬ್ಬಂದಿ ವ್ಯವಸ್ಥೆಯ ಲೋಪದ ದ್ಯೋತಕ

ವಿಶ್ವವಿದ್ಯಾಲಯಗಳು ಎದುರಿಸುತ್ತಿರುವ ಸಿಬ್ಬಂದಿ ಕೊರತೆಯ ಬಗ್ಗೆ ರಾಜ್ಯಪಾಲ, ರಾಜ್ಯದ ವಿಶ್ವವಿದ್ಯಾಲಯಗಳ ಕುಲಾಧಿಪತಿಯೂ ಆಗಿರುವ ಥಾವರಚಂದ್ ಗೆಹ್ಲೋಟ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನ ಸೆಳೆಯುವ ಕೆಲಸ ಮಾಡಿದ್ದಾರೆ. ಅಲ್ಲದೆ, ಕುಲಪತಿಗಳ ಸಭೆಯಲ್ಲಿ ಗೆಹ್ಲೋಟ್ ಅವರು ಹೆಚ್ಚುವರಿ ಅನುದಾನವನ್ನು ಕೋರಿದ್ದಾರೆ. ಸಿಬ್ಬಂದಿ ಕೊರತೆಯ ಬಗ್ಗೆ ಪ್ರಸ್ತಾಪ ಮಾಡುವ ಮೂಲಕ ಅವರು 'ಬಹಳ ಸಹಜ' ಎಂದು ಪರಿಗಣಿಸಲಾಗಿರುವ ಬಿಕ್ಕಟ್ಟೊಂದರ ಕಡೆ ಗಮನ ಸೆಳೆಯುವ ಕೆಲಸ ಮಾಡಿದ್ದಾರೆ. ಆದರೆ ನಂತರದಲ್ಲಿ ಆಗಿರುವ ಬೆಳವಣಿಗೆಗಳು, ಸಮಸ್ಯೆಯನ್ನು ಎದುರಿಸುವ ಬದಲು ಸಮಸ್ಯೆಯನ್ನು ಮರುವ್ಯಾಖ್ಯಾನಕ್ಕೆ ಒಳಪಡಿಸುವ ಪ್ರಯತ್ನದಂತೆ ಕಾಣುತ್ತವೆ. ಹಲವು ವಿಶ್ವವಿದ್ಯಾಲಯಗಳಲ್ಲಿ ಬೋಧಕ ಸಿಬ್ಬಂದಿಯ ಕೊರತೆ ಶೇ 60ರಷ್ಟಿದೆ ಎಂದು ಸಿದ್ದರಾಮಯ್ಯ ಅವರೇ ಒಪ್ಪಿಕೊಂಡಿದ್ದಾರೆ. ಆದರೆ, ವಿಶ್ವದ ಅತ್ಯುನ್ನತ ವಿಶ್ವವಿದ್ಯಾಲಯಗಳಲ್ಲಿಯೂ ಅತಿಥಿ ಉಪನ್ಯಾಸಕರನ್ನು ನೆಚ್ಚಿಕೊಳ್ಳಲಾಗಿದೆ ಎಂದು ಅವರು ಸಮರ್ಥನೆ ನೀಡುತ್ತಿರುವುದು ಸರಿಯಲ್ಲ. ಕರ್ನಾಟಕದಲ್ಲಿ ಕೆಲಸ ಮಾಡುತ್ತಿರುವ 'ಅತಿಥಿ ಉಪನ್ಯಾಸಕರು' ಬಹಳ ವಿಶೇಷವಾದ ವಿಷಯವನ್ನು ಬೋಧಿಸುವ ತಜ್ಞರೇನೂ ಅಲ್ಲ. ಅವರು ಇಲ್ಲಿ ತಾತ್ಕಾಲಿಕ ಅವಧಿಗೆ ಅಥವಾ ಗುತ್ತಿಗೆ ಆಧಾರದಲ್ಲಿ ನೇಮಕ ಆಗಿರುವವರು. ಮಂಜೂರಾಗಿರುವ ಹುದ್ದೆಗಳು ಖಾಲಿ ಇದ್ದಾಗ, ಆ ಜಾಗಕ್ಕೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ. ಅವರು ದಿನವೊಂದರಲ್ಲಿ ಪೂರ್ತಿ ಅವಧಿಗೆ ಕೆಲಸ ಮಾಡುತ್ತಾರೆ, ಇತರ ಬೋಧಕರಿಗಿಂತ ಕಡಿಮೆ ಸಂಭಾವನೆ ಪಡೆಯುತ್ತಾರೆ; ಅವರಿಗೆ ಕನಿಷ್ಠ ಉದ್ಯೋಗ ಭದ್ರತೆಯೂ ಇರುವುದಿಲ್ಲ. ಹೀಗಿರುವಾಗ, ರಾಜ್ಯದಲ್ಲಿನ ಅತಿಥಿ ಉಪನ್ಯಾಸಕರ ನೇಮಕ ವ್ಯವಸ್ಥೆಯನ್ನು ಜಾಗತಿಕ ಮಟ್ಟದ ವಿಶ್ವವಿದ್ಯಾಲಯಗಳಲ್ಲಿನ ವ್ಯವಸ್ಥೆಯ ಜೊತೆ ಹೋಲಿಕೆ ಮಾಡುವುದು ತಪ್ಪುದಾರಿಗೆ ಎಳೆಯುವ ಕೆಲಸ. ಅಂತರರಾಷ್ಟ್ರೀಯ ಮಟ್ಟದ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಿಸುವ ಅತಿಥಿ ಉಪನ್ಯಾಸಕರು ಬಹಳ ವಿಶಿಷ್ಟವಾದ ಅಕಡೆಮಿಕ್ ಸಾಧನೆ ಮಾಡಿದವರಾಗಿರುತ್ತಾರೆ: ಅವರಲ್ಲಿ ಉದ್ಯಮ ವಲಯದ ಪ್ರಮುಖರು ಹಾಗೂ ನೀತಿ ನಿರೂಪಣಾ ಕ್ಷೇತ್ರದ ಹಿರಿಯರೂ ಇರುತ್ತಾರೆ. ಅವರು ಅತ್ಯುತ್ತಮ ಗುಣಮಟ್ಟದ ಬೋಧಕ ಸಿಬ್ಬಂದಿ ಸಮೂಹಕ್ಕೆ ಪೂರಕವಾಗಿ ಕೆಲಸ ಮಾಡುತ್ತಾರೆ, ಖಾಲಿ ಇರುವ ಬೋಧಕ ಹುದ್ದೆಗೆ ಪರ್ಯಾಯವಾಗಿ ಅವರ ನೇಮಕ ಆಗಿರುವುದಿಲ್ಲ. ಅಂತಹ ತಜ್ಞರನ್ನು ನಮ್ಮ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಕಾಲಕಾಲಕ್ಕೆ ಬೋಧನೆಗೆ ಆಹ್ವಾನಿಸಲಾಗುತ್ತದೆ ಎಂದು ಸರ್ಕಾರ ಹೇಳಿಕೊಳ್ಳುತ್ತದೆಯೇ? ಕ್ಷೇತ್ರ ತಜ್ಞರನ್ನು ಬೋಧನೆಗೆ ಆಹ್ವಾನಿಸುವ ಉದ್ದೇಶ ಇದೆ ಎಂದಿದ್ದರೂ, ಅದಕ್ಕೆ ಅಗತ್ಯವಿರುವ ಅನುದಾನ ಎಲ್ಲಿದೆ? ದೋಷಪೂರಿತವಾದ ವಿಸ್ತರಣಾ ಕಾರ್ಯಕ್ರಮಗಳು ಸಮಸ್ಯೆಯನ್ನು ತೀವ್ರವಾಗಿಸಿವೆ. 'ಒಂದು ಜಿಲ್ಲೆ, ಒಂದು ವಿಶ್ವವಿದ್ಯಾಲಯ' ಕ್ರಮವು ವಿಶ್ವವಿದ್ಯಾಲಯಗಳ ಅಸ್ತಿತ್ವವನ್ನು ಹೆಚ್ಚಿಸಿದ್ದರೂ, ಅದಕ್ಕೆ ಅಗತ್ಯವಿರುವ ಪ್ರಮಾಣದಲ್ಲಿ ಮೂಲಸೌಕರ್ಯ ಸೃಷ್ಟಿಯಾಗಿಲ್ಲ, ಬೋಧಕರ ನೇಮಕ ಆಗಿಲ್ಲ. ಸುಸ್ಥಿರವಾದ ಅಕಡೆಮಿಕ್ ನೀಲನಕ್ಷೆ ಅಥವಾ ಹಣಕಾಸಿನ ಯೋಜನೆ ಇಲ್ಲದೆ ರಚಿಸಲಾಗಿರುವ ಸಂಗೀತ, ಜಾನಪದದಂತಹ ವಿಷಯವಾರು ವಿಶ್ವವಿದ್ಯಾಲಯಗಳು ಸೀಮಿತ ಸಂಪನ್ಮೂಲವನ್ನೇ ಬಳಸಲು ಯತ್ನಿಸುತ್ತಿವೆ. ಸರ್ಕಾರದ ಅನುದಾನ ಪಡೆಯುವ ವಿಶ್ವವಿದ್ಯಾಲಯಗಳು ಖಾಸಗಿ ವಿ.ವಿ.ಗಳ ಮಾದರಿಯಲ್ಲಿ ದುಬಾರಿ ಶುಲ್ಕ ವಸೂಲಿ ಮಾಡುವಂತಿಲ್ಲ. ಹೀಗಾಗಿ, ವಿ.ವಿ.ಗಳು ತಮಗೆ ಅಗತ್ಯವಿರುವ ಹಣಕಾಸಿನ ಸಂಪನ್ಮೂಲವನ್ನು ತಾವೇ ಕಂಡುಕೊಳ್ಳಬೇಕು ಎಂಬುದು ಸರಿಯಲ್ಲ. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯ ಮೂಲಕ ಹಣ ಸಂಗ್ರಹಿಸಬಹುದು ಎಂಬ ಸಲಹೆಯನ್ನು ನೀಡುವುದು ಸುಲಭ, ಅನುಷ್ಠಾನ ಕಷ್ಟ. ಬಹುತೇಕ ಕುಲಪತಿಗಳು ಬೋಧನಾ ಅನುಭವ ಮಾತ್ರ ಹೊಂದಿರುತ್ತಾರೆ, ಅವರಿಗೆ ಆಡಳಿತಾತ್ಮಕ ಅನುಭವ ಹೆಚ್ಚಿರುವುದಿಲ್ಲ. ಅವರಿಗೆ ಬೃಹತ್ ಗಾತ್ರದ ಕಾರ್ಪೊರೇಟ್ ಕಂಪನಿಗಳ ಜೊತೆ ವ್ಯವಹರಿಸಿದ ಅನುಭವ ಕಡಿಮೆ.

> **ವಿಶ್ವವಿದ್ಯಾಲಯಗಳಲ್ಲಿನ ಬೋಧಕರ ಕೊರತೆಯನ್ನು ಅತಿಥಿ ಸಿಬ್ಬಂದಿ ಮೂಲಕ ನಿಭಾಯಿಸುವುದು ಸರ್ಕಾರ ಮಾಡಿಕೊಂಡಿರುವ ರಾಜಿಯೇ ಹೊರತು, ಶಿಕ್ಷಣ ಕ್ಷೇತ್ರವನ್ನು ಬಲಪಡಿಸುವ ನಡೆಯಲ್ಲ.**

ಸಮಾಧಾನದ ಸಂಗತಿಯೆಂದರೆ, ತಾತ್ಕಾಲಿಕ ಬೋಧಕರನ್ನು ನೆಚ್ಚಿಕೊಳ್ಳುವ ವ್ಯವಸ್ಥೆಯ ವಿರುದ್ಧ ಸುಪ್ರೀಂ ಕೋರ್ಟ್ ಜನವರಿಯಲ್ಲಿ ಗಟ್ಟಿ ಸಂದೇಶವೊಂದನ್ನು ರವಾನಿಸಿದೆ. ಒಬ್ಬ ತಾತ್ಕಾಲಿಕ ಶಿಕ್ಷಕನಿಂದ ತೆರವಾದ ಸ್ಥಾನವನ್ನು ಇನ್ನೊಬ್ಬ ತಾತ್ಕಾಲಿಕ ಶಿಕ್ಷಕನ ಮೂಲಕ ನೇಮಕ ಮಾಡಿಕೊಳ್ಳುವುದು ಸರಿಯಲ್ಲ ಎಂದು ಅದು ಹೇಳಿದೆ. ಕಾಯಂ ಕೆಲಸಗಳನ್ನು ತಾತ್ಕಾಲಿಕ ಸಿಬ್ಬಂದಿಯ ಮೂಲಕ ಮಾಡಿಸುವುದು ಶೋಷಣೆ ಎಂದೂ ಹೇಳಿದೆ. ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳು ದೀರ್ಘಾವಧಿಯಿಂದ ಖಾಲಿ ಇರುವ ಸ್ಥಾನಗಳನ್ನು ನಾಲ್ಕು ತಿಂಗಳಲ್ಲಿ ಭರ್ತಿ ಮಾಡಬೇಕು ಎಂದು ಹೇಳಿದೆ. ರಾಜ್ಯದ ಉನ್ನತ ಶಿಕ್ಷಣ ವ್ಯವಸ್ಥೆಗೆ ಹೊಸ ಆಲೋಚನೆಗಳು ಬೇಕಾಗಿವೆ; ಟೊಳ್ಳು ಆವೇಶದ ಸಮರ್ಥನೆಗಳ ಅವಶ್ಯಕತೆ ಇಲ್ಲ. ರಾಜ್ಯದ ವಿಶ್ವವಿದ್ಯಾಲಯಗಳು ಸಮರ್ಥ ಹಾಗೂ ಉದ್ಯಮ ಕೌಶಲಗಳಿಗೆ ಸ್ಪಂದಿಸುವ ಪದವೀಧರರನ್ನು ತಯಾರಿಸಬೇಕು. ತಾತ್ಕಾಲಿಕ ಬೋಧಕ ಸಿಬ್ಬಂದಿಯ ನೇಮಕವನ್ನು ಸಹಜವಾಗಿಸುವುದು, ವಿಶ್ವವಿದ್ಯಾಲಯಗಳಿಗೆ ಅಗತ್ಯ ಅನುದಾನ ಇಲ್ಲದಂತೆ ಮಾಡುವುದು ನೀತಿ ನಿರೂಪಣೆಯಲ್ಲಿನ ಸೋಲು. ವಿಶ್ವವಿದ್ಯಾಲಯಗಳು ಅಂದರೆ ಜ್ಞಾನ ದೇಗುಲವಿದ್ದಂತೆ, ಅವುಗಳನ್ನು ಆ ಬಗೆಯಲ್ಲೇ ಕಾಣಬೇಕು.





# ರಾಮಾಯಣ

## ತಾರೆಯು ಲಕ್ಷ್ಮಣನಿಗೆ ಹೇಳಿದ ಸಮಾಧಾನ

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**


ಆತನ ಸಮೀಪಕ್ಕೆ ನಾನು ಹೋಗಬಹುದಾದ ಸಮಯವನ್ನಾ ಬಂದು ಹೇಳು ಚಿತ್ತಶುದ್ಧಿಯುಳ್ಳವರಾದ ಮಹಾತ್ಮರು ಪರಸ್ತ್ರೀಯರ ವಿಷಯದಲ್ಲಿ ಕೋಪವನ್ನು ಮಾಡರು. ನೀನು ಹೋಗಿ ಮೃದುವಾಕ್ಯಗಳಿಂದ ಕೋಪಶಾಂತಿಯನ್ನು ಮಾಡು... ಆಮೇಲೆ ನಾನು ಬಂದು ಅವನನ್ನು ಕಾಣಿಸಿಕೊಂಡು ಮಾತನಾಡುತ್ತೇನೆ ಎಂದು ಹೇಳಿದನು. ತಾರಾದೇವಿಯ ಮಧುಪಾನದಿಂದ ಮತ್ತಳಾಗಿ ಎಡಹುತ್ತ ಕಾಂಚೀದಾಮವನ್ನು ಧ್ವನಿಗೈಯುತ್ತ ಲಕ್ಷ್ಮಣನ ಸಮೀಪಕ್ಕೆ ಹೋಗಿ ನಿಂತಳು. ಮಹಾತ್ಮನಾದ ಲಕ್ಷ್ಮಣನು ಉದಾಸೀನ ಬುದ್ಧಿಯಿಂದ ಆ ತಾರಾದೇವಿಯನ್ನು ನೋಡದೆ ನೆಲವನ್ನು ನೋಡುತ್ತ ಸುಗ್ರೀವನ ಸ್ತ್ರೀಯೇ ತನ್ನ ಸಮೀಪಕ್ಕೆ ಬಂದಳೆಂದು ಶಾಂತನಾದನು. ಆಗ ಮಧಾಪಾನವನ್ನು ಮಾಡಿದ್ದ ತಾರಾದೇವಿಯು ಲಜ್ಜೆದೊರೆದು ಲಕ್ಷ್ಮಣನನ್ನು ನೋಡಿ ಆತನನ್ನಾ ಕುರಿತು ಸ್ನೇಹದಿಂದಲೂ ಪ್ರೌಢತ್ವದಿಂದಲೂ ಎಲೈ ಲಕ್ಷ್ಮಣ, ನಿನಗೆ ಕೋಪವು ಬರುವುದಕ್ಕೆ ಕಾರಣವೇನು? ಸುಗ್ರೀವನು ನೀನು ಹೇಳಿದ ಮಾತುಗಳನ್ನು ಮೀರಲಿಲ್ಲ. ನೀನು ಹೀಗೆ ಕೋಪಿಸಿದರೆ ನಿನ್ನನ್ನು ಎದುರಿಸುವವರಾರು? ಒಣಮರಗಳುಳ್ಳ ವನದಲ್ಲಿ ನುಗ್ಗಿ ಬರುವ ಕಾಡ್ಗಿಚ್ಚಿಗೆ ಎದುರಾಗಿ ಯಾರು ಬಂದಾರು? ಎಂದು ಕೇಳಿದನು.

ಸಾಂತ್ವಾನಪೂರ್ವಕವಾಗಿ ಸ್ನೇಹವೆರಸಿದ ತಾರಾದೇವಿಯ ಮಾತನ್ನು ಕೇಳಿ ಲ ಹರ್ಷಯುಕ್ತನಾದನು. ಅವನು ಸ್ನೇಹಪೂರ್ವಕವಾಗಿ ಅವಳನ್ನು ಕುರಿತು '' ತಾರಾದೇವಿ, ನಿನ್ನ ಪತಿಯಾದ ಸುಗ್ರೀವನು ಕಾಮುಕನಾಗಿ ಧರ್ಮಾಗಳನ್ನು ಕೆಡಿಸಿಕೊಂಡನು. ತನ್ನ ರಾಜಧರ್ಮವನ್ನರಿಯದೆಯೂ ದುಃಖಿತರಾದ ನಮ್ಮನ್ನು ವಿಚಾರಿಸದೆಯೂ ತನ್ನ ಮಂತ್ರಿಗಳನು ಕೂಡಿಕೊಂಡು ಮಧುಪಾನವನ್ನು ಮಾಡುತ್ತ ವಂತ್ತನಾಗಿರುವನಂ. ಮೊದಲು ನಾಲ್ಕು ತಿಂಗಳವರೆಗೂ ಮಳೆಗಾಲವನ್ನು ಸಹಿಸಿಕೊಂಡಿರಹೇಳಿ ಕಾಲವಿತಿಯನ್ನು ಗೊತ್ತುಮಾಡಿದನು.. ಆ ನಾಲ್ಕು ತಿಂಗಳುಗಳು ಕಳೆದಮೇಲೂ ಸ್ತ್ರೀಲೋಲನಾಗಿ ನಮ್ಮನ್ನು ಮರೆತಿರುವನು. ಮದ್ಯಪಾನವು ಧರ್ಮಾರ್ಥಗಳನ್ನು ಕೆಡಿಸುವಂತಹುದು ಆತನು ಉಪಕಾರಮಾಡಿದವರಿಗೆ ಪ್ರತ್ಯುಪಕಾರವನ್ನು ಮಾಡದೆ ಧರ್ಮವನ್ನು ಬಿಟ್ಟಿದ್ದಾನೆ. ದಂಡಯಾತ್ರೆ ಹೊರಡುವ ಕಾಲದಲ್ಲಿ ಶತ್ರುಗಳ ಮೇಲೆ ದಂಡಯಾತ್ರೆ ಹೊರಡದಂತೆಯೂ ನಮ್ಮ ಕಾರ್ಯವನ್ನು ಆಗುಗೊಳಿಸದಂತೆಯೂ ಮಾಡಿ ದ್ರೋಹವನ್ನೆಸಗಿದ್ದಾನೆ.

ತಾರಾದೇವಿ, ನೀನು ಸಮಸ್ತ ಕಾರ್ಯರಡಾಸ್ಕವನ್ನು ಬಲ್ಲವಳು. ಈಗ ನಾವು ಏನುಮಾಡಬೇಕೋ ಅದನ್ನು ನೀನೇ ವಿಚಾರಿಸಿ ಹೇಳು ಎಂದು ನುಡಿದನು. ಧವರ್ಾರ್ಥಯುಕ್ತವಾದ ನೀತಿಯೊಡಗೂಡಿದ ಲಕ್ಷ್ಮಣನ ವಾಕ್ಯವನ್ನು ಕೇಳಿ ತಾರಾದೇವಿಯು ಶ್ರೀರಾಮನ ಕಾರ್ಯಾಸಿದ್ಧಿಯಾಗುವುದಕ್ಕಾಗಿ ಆತನನ್ನು ಕುರಿತು ಹೀಗೆ ಹೇಳಿದಳು ಎಲೈ ಲಕ್ಷ್ಮಣ, ನಿಮ್ಮ ಕಾರ್ಯವನ್ನು ಮಾಡುವುದಕ್ಕೆ ತಕ್ಕ ಕಾಲವು ಮೀರಿಶೆಂದೆಣಿಸಬೇಡ. ಹಾಗೆ ವೀರಿದರೂ ನಿನ್ನ ಸೇವಕನಾದ ಸುಗ್ರೀವನಲ್ಲಿ ಕೋಪಮಾಡಸಲ್ಲದು. ಯಾವಾಗಲೂ ನಿಮ್ಮ ಸೇವೆಯನ್ನೇ ಮಾಡಬೇಕೆಂದು ಯತ್ನಮಾಡಿಕೊಂಡಿರುವವನು ಒಂದು ಬಾರಿ ತಪ್ಪಿದರೂ ನೀವು ಸಹಿಸಿಕೊಳ್ಳಬೇಕು. ರಾಜಕುಮಾರರಲ್ಲಿ ಉತ್ತಮನಾದ ನೀನು ಸಾಮಾನ್ಯ ಜನರ ವಿಷಯದಲ್ಲಿ ಕೋಪಮಾಡುವುದು ನೀತಿಯಲ್ಲ. ಸತ್ಯಸಂಧನೂ ತಪಸ್ವಿಯೂ ಆದ ನಿನ್ನಂಥ ಪುರುಷನೇ ಕೋಪಮಾಡಬಹುದೆ ಲಕ್ಷ್ಮಣ, ನಿಮ್ಮ ಕಾರ್ಯಗೌರವವನ್ನೂ ನಿನ್ನ ರೋಷವನ್ನೂ ಬಲ್ಲೆನು. ನೀವು ಮೊದಲು ಸುಗ್ರೀವನಿಗೆ ಮಾಡಿದ ಉಪಕಾರವನ್ನೂ ಬಲ್ಲೆನು.

ಮುಂದುವರಿಯುವುದು...

# ಸ್ಪರ್ಧಾತ್ಮಕ ಜೀವನ ಓಟದ ಅಂತ್ಯ ಎಲ್ಲಿದೆ?




ಇಂದಿನ ಕಾಲದಲ್ಲಿ ಜೀವನವೇ ಒಂದು ನಿರಂತರ ಓಟದಂತಾಗಿದೆ. ಶಾಲೆಯ ಮೊದಲ ದಿನದಿಂದಲೇ ಮಕ್ಕಳಿಗೆ ''ಮೊದಲ ರ್‍ಯಾಂಕ್'' ಎಂಬ ಪದ ಪರಿಚಯವಾಗುತ್ತದೆ. ಅಲ್ಲಿ ಆರಂಭವಾದ ಸ್ಪರ್ಧೆ ಕಾಲೇಜು ಪ್ರವೇಶ, ಉದ್ಯೋಗ, ಸಂಬಳ, ಸ್ಥಾನಮಾನಗಳವರೆಗೆ ಮುಂದುವರಿಯುತ್ತದೆ. ಜೀವನದ ಪ್ರತಿಯೊಂದು ಹಂತವೂ ಹೋಲಿಕೆಯ ಮೇರೆಗೆ ಅಳೆಯಲ್ಪಡುತ್ತಿದೆ.

''ಅವನು IAS ಆಗಿದ್ದಾನೆ'',
''ಅವಳು ವಿದೇಶಕ್ಕೆ ಹೋಗಿದ್ದಾಳೆ'',
''ಅವರಿಗೆ ದೊಡ್ಡ ಸಂಬಳ''

ಇವು ಪ್ರೇರಣೆಯ ಮಾತುಗಳಾಗಬಹುದು. ಆದರೆ ಅನೇಕ ಯುವಕರಿಗೆ ಇದೇ ಮಾತುಗಳು ಮನಸ್ಸಿನ ಮೇಲೆ ಭಾರವಾಗುತ್ತಿವೆ. ಪ್ರತಿಯೊಬ್ಬರೂ ಶಿಖರವನ್ನು ತಲುಪಲು ಸಾಧ್ಯವಿಲ್ಲ; ಆದರೆ ಪ್ರತಿಯೊಬ್ಬರಿಗೂ ತಮ್ಮದೇ ಆದ ಪರ್ವತವಿದೆ. ಸಮಸ್ಯೆ ಏನೆಂದರೆ, ನಾವು ಎಲ್ಲರಿಗೂ ಒಂದೇ ಶಿಖರವನ್ನು ತೋರಿಸುತ್ತಿದ್ದೇವೆ. ಸ್ಪರ್ಧೆ ತಪ್ಪಲ್ಲ. ಅದು ವ್ಯಕ್ತಿಯ ಸಾಮರ್ಥ್ಯವನ್ನು ಹೊರತೆಗೆದು, ಉತ್ತಮ ಸಾಧನೆಗೆ ದಾರಿ ಮಾಡಿಕೊಡುತ್ತದೆ. ಆದರೆ ಸ್ಪರ್ಧೆ ಅತಿಯಾಗಿ ಹೋದಾಗ ಅದು ಒತ್ತಡವಾಗಿ ಮಾರ್ಪಡುತ್ತದೆ. ಗೆಲುವು ಮಾತ್ರ ಗುರಿಯಾಗಿದಾಗ, ಪ್ರಕ್ರಿಯೆಯ ಸೌಂದರ್ಯ ಕಣ್ಮರೆಯಾಗುತ್ತದೆ. ಕಲಿಕೆಯ ಆನಂದ, ಅನುಭವದ ಮೌಲ್ಯ, ಪ್ರಯಾಣದ ಸಿಹಿ ಇವೆಲ್ಲವೂ ಮಸುಕಾಗುತ್ತವೆ. ಜೀವನವನ್ನು ಕೇವಲ ಫಲಿತಾಂಶಗಳ ಆಧಾರದಲ್ಲಿ ಅಳೆಯಲು ಆರಂಭಿಸಿದಾಗ, ವ್ಯಕ್ತಿಯ ಆತ್ಮವಿಶ್ವಾಸ ಕುಗ್ಗುತ್ತದೆ. ಯಾರಾದರೂ ನಮ್ಮಿಗಿಂತ ಮುಂದೆ ಹೋದರೆ ನಾವು ಹಿಂದುಳಿದವರಾಗಿದ್ದೇವೆ ಎಂಬ ಭಾವನೆ ಮೂಡುತ್ತದೆ. ಆದರೆ ಪ್ರತಿಯೊಬ್ಬರ ಆರಂಭದ ಬಿಂದು, ಪರಿಸ್ಥಿತಿ, ಅವಕಾಶ, ಆಸಕ್ತಿ ಇವೆಲ್ಲವೂ ವಿಭಿನ್ನ. ಹೀಗಿರಲು ಒಂದೇ ಮಾಪಕವನ್ನು ಎಲ್ಲರಿಗೂ ಬಳಸುವುದು ನ್ಯಾಯವೇ ಸಮಾಜದಲ್ಲಿ ಯಶಸ್ಸಿನ ಅರ್ಥವನ್ನು ನಾವು ಕೇವಲ ಸ್ಥಾನಮಾನ ಮತ್ತು ಸಂಬಳಕ್ಕೆ ಸೀಮಿತಗೊಳಿಸಿದ್ದೇವೆ. ವೈದ್ಯ, ಇಂಜಿನಿಯರ್, IAS ಇವು ಗೌರವಯುತ ಹುದ್ದೆಗಳು ಆದರೆ ಶಿಕ್ಷಕ, ರೈತ, ಕಲಾವಿದ, ಸಣ್ಣ ಉದ್ಯಮಿ ಇವರ ಜೀವನ ಮೌಲ್ಯಯುತವಲ್ಲವೇ ನಾವು ಕೆಲವೇ ವೃತ್ತಿಗಳನ್ನು ''ಯಶಸ್ಸು'' ಎಂದು ಘೋಷಿಸಿ, ಉಳಿದವನ್ನೆಲ್ಲಾ ಕಡಿಮೆ ಮಾಡಿ ನೋಡುತ್ತಿದ್ದೇವೆ. ಹೋಲಿಕೆ ಮಾನವಸ್ವಭಾವದ ಭಾಗವಾದರೂ, ಅದನ್ನು ಅತಿಯಾಗಿ ಬಳಸಿದಾಗ ಅದು ಆತ್ಮವಿಶ್ವಾಸವನ್ನು ಕುಂದಿಸುತ್ತದೆ. ವಿಶೇಷವಾಗಿ ಯುವಕರಲ್ಲಿ ಇದು ಗಂಭೀರ ಪರಿಣಾಮ ಬೀರುತ್ತದೆ. ತಮ್ಮ ಸಾಮರ್ಥ್ಯವನ್ನು ಅರಿತು ಬೆಳೆವ ಬದಲು, ಇತರರ ಹೆಜ್ಜೆ ಗುರುತುಗಳನ್ನು ಹಿಂಬಾಲಿಸಲು ಅವರು ಒತ್ತಾಯಿತರಾಗುತ್ತಾರೆ. ಇದರಿಂದ ಅವರು ತಮ್ಮ ಸ್ವಂತ ಗುರುತನ್ನು ಕಳೆದುಕೊಳ್ಳುವ ಅಪಾಯ ಉಂಟಾಗುತ್ತದೆ.


ಆಗ ಪ್ರಶ್ನೆ ಈ ಓಟದ ಅಂತ್ಯ ಎಲ್ಲಿದೆ? ಒಂದು ಗುರಿ ತಲುಪಿದ ಕೂಡಲೇ ಮತ್ತೊಂದು ಗುರಿ ಎದುರು ನಿಂತಿರುತ್ತದೆ. ಹೆಚ್ಚು ಸಂಬಳ ಸಿಕ್ಕರೂ ಮತ್ತೊಬ್ಬರಿಗಿಂತ ಕಡಿಮೆಯೇನೋ ಎಂಬ ಭಾವನೆ ಮೂಡುತ್ತದೆ. ಹೀಗಾಗಿ ತೃಪ್ತಿ ಸಿಗದೆ, ಶಾಂತಿ ಕಳೆದು ಹೋಗುತ್ತದೆ.

**ಯಶಸ್ಸು ಎಂದರೆ ಇತರರನ್ನು ಮೀರಿಸುವುದಲ್ಲ;** ನಮ್ಮನ್ನು ನಾವು ಮೀರಿಸುವುದು. ಸ್ಪರ್ಧೆ ಇರಲಿ, ಆದರೆ ಅದು ನಮ್ಮ ಬೆಳವಣಿಗೆಗೆ ಸಹಾಯಕವಾಗಲಿ. ಜೀವನವನ್ನು ಓಟವನ್ನಾಗಿ ಮಾಡುವುದಕ್ಕಿಂತ, ಅದನ್ನು ಒಂದು ಅರ್ಥಪೂರ್ಣ ಪ್ರಯಾಣವನ್ನಾಗಿ ಮಾಡೋಣ. ಪ್ರತಿಯೊಬ್ಬ ಯುವಕನಿಗೂ ತನ್ನದೇ ಆದ ದಾರಿ ಇದೆ. ಆ ದಾರಿಯಲ್ಲಿ ಸಾಗುವ ಧೈರ್ಯ ಮತ್ತು ಆತ್ಮವಿಶ್ವಾಸ ನೀಡುವುದು ಸಮಾಜದ ಕರ್ತವ್ಯ. ಒಂದೇ ಮಾಪಕದಿಂದ ಎಲ್ಲರನ್ನೂ ಅಳೆಯುವುದನ್ನು ನಿಲ್ಲಿಸಿದಾಗ ಮಾತ್ರ, ಈ ಓಟದ ಒತ್ತಡ ಕಡಿಮೆಯಾಗುತ್ತದೆ. ಅಂತಿಮವಾಗಿ, ಜೀವನದ ನಿಜವಾದ ಗೆಲುವು ಎಂದರೆ ಮನಶಾಂತಿ, ಆತ್ಮತೃಪ್ತಿ ಮತ್ತು ಸ್ವಂತ ಗುರಿಯನ್ನು ಸಾಧಿಸಿದ ಸಂತೋಷ. ಓಟದಲ್ಲಿ ಮೊದಲಿಗರಾಗುವುದಕ್ಕಿಂತ, ನಮ್ಮ ದಾರಿಯಲ್ಲಿ ನಿಷ್ಠೆಯಿಂದ ನಡೆಯುವುದೇ ಮುಖ್ಯ.



ವಿಶ್ವಾಸ್.ಡಿ.ಗೌಡ

## ದಿನಕ್ಕೊಂದು ಮುಕ್ತಕ:103



ಸಾಮಾಜಿಕ ಕಳಕಳಿ

**ಹೆಚ್.ಎಸ್. ಪ್ರತಿಮಾ**
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ
ಶಿಕ್ಷಕಿ, ಹಾಸನ

ಜನನಿಯೂ ನೀವಾಗಿ ಬಾಗುತಲೆ ಸೇವೆಯಲಿ
ಮನವನದು ಗೆಲ್ಲುತಲಿ ಕಾರ್ಯದಲ್ಲಿ
ಸನಿಹದಲಿ ಇರುತಲಿಯೆ ಮಹಿಳೆಯರಿಗೆ ಪ್ರೋತ್ಸಾಹಿಸಿ
ಕನಿಕರವ ತೋರುವಿರಿ ಲಕ್ಷ್ಮಿ ದೇವಿ.....

ತಾಯಿಯು ಜನನಿಯಾಗಿ ಎಲ್ಲೆಡೆಯೂ ಬಾಗುತ ತನ್ನದೇ ಆದಂತಹ ಸೇವೆಯನ್ನು ಮಾಡುವುದರಲ್ಲಿ ಮೊದಲಿಗಳಾಗಿರುತ್ತಾಳೆ. ತನ್ನ ಆಸೆ ಆಕಾಂಕ್ಷೆಗಳನ್ನು ಎಷ್ಟೋ ಬಾರಿ ಬಲಿ ಮಾಡಿ ಜೀವನದಲ್ಲಿ ಸಂತಸದ ಬದುಕಿನಂತೆ ವ್ಯಕ್ತಪಡಿಸುತ್ತಾ ಸಾಗುತ್ತಾಳೆ.ಹಾಗೆಯೇ ಎಲ್ಲರ ಮನವನ್ನು ಗೆಲ್ಲುತಲಿ ಕೆಲಸವನ್ನು ಮಾಡುವುದರಲ್ಲಿ ಮುಂದಿರುತ್ತಾಳೆ. ಹಾಗೆಯೇ ಇತರರ ಕಷ್ಟಗಳನ್ನು ಕಂಡು ಸಹಕಾರ ಮಾಡುತ್ತ ಮಹಿಳೆಯರಿಗೂ ಪ್ರೋತ್ಸಾಹ ಸಲಹೆಗಳನ್ನು ನೀಡುತ್ತ , ಅವರಿಗೆ ಕನಿಕರವನ್ನು ತೋರಿಸುತ್ತ ಸಾಗುತ್ತಾಳೆ. ಅದಕ್ಕೆ ಅಲ್ಲವೇ ಆಕೆಯನ್ನು ಮಹಾತ್ಯಾಗಿ ಎಂದು ಕರೆಯುವರು.ಆಕೆ ತನ್ನ ಮಕ್ಕಳನ್ನು ಸಾಕುವುದರಲ್ಲಿ ಯಶಸ್ವಿ ಆಗುತ್ತಾಳೆ. ಸಮಾಜದಲ್ಲಿ ಹೆಣ್ಣಿಗೆ ವಿಶೇಷವಾದ ಸ್ಥಾನವಿರುವುದು ಪ್ರತಿಯೊಬ್ಬರಿಗೂ ತಿಳಿದಿರುವಂತಹ ವಿಷಯ. ಅಂತರಾಳದ ಮನದಲ್ಲಿ ಎಷ್ಟೇ ಆಸೆ ಆಕಾಂಕ್ಷೆಗಳಿದ್ದರೂ ಸಹ ಯಾವುದೇ ರೀತಿಯ ಹಠವನ್ನು ಮಾಡದ ರೀತಿ ತನ್ನ ಜೀವನದಲ್ಲಿ ಇರುವ ಜವಾಬ್ದಾರಿಯನ್ನು ನೆನೆಯುತ್ತಾ ಅರಿಯುತ್ತ ಮಕ್ಕಳಿಗಾಗಿ ತನ್ನ ಜೀವನವನ್ನೇ ಮುಡುಪಿಟ್ಟು ಹೋರಾಟದ ಬದುಕನ್ನು ಮಾಡುವವರು ಬಹಳಷ್ಟು ಮಂದಿ ಇದ್ದಾರೆ. ಜಗದ ನಿಯಮಗಳಲ್ಲಿ ಕೆಲವೊಮ್ಮೆ ಆಕೆ ತನಗೆ ತಾನೇ ಮನದಲ್ಲಿ ಅರ್ಥೈಸಿಕೊಂಡು ಮಾಡಲಾಗದಿದ್ದರೂ ಸಹ ಅದಕ್ಕೆ ತಲೆಬಾಗಿ ಕಾರ್ಯ ನಿರ್ವಹಿಸುತಲಿ ಸಾಗುತಿರುವುದನ್ನು ಕಾಣುವ ಉದಾಹರಣೆ ಬಹಳಷ್ಟಿದೆ . ಇಂತಹ ಮಹಾನ್ ತಾಯಂದಿರು ಬಹಳಷ್ಟು ಮಂದಿ ನಮ್ಮ ನಿಮ್ಮೆಲ್ಲರ ಮುಂದೆ ಇದ್ದಾರೆ. ಅಂತಹ ತಾಯಂದಿರನ್ನು ನಾವು ನೋಡುತ್ತಾ ಸಂಸ್ಕೃತಿಯನ್ನು ಮರೆಯದಂತೆ, ಆಚಾರ ವಿಚಾರಗಳನ್ನು ತೊರೆಯದಂತೆ ಬದುಕಿನಲ್ಲಿ ಸಾರ್ಥಕತೆಯ ಬದುಕನ್ನು ಪ್ರತಿಯೊಬ್ಬ ಮಹಿಳೆ ಮಾಡಬೇಕಿದೆ. ಒಟ್ಟಾರೆ ಹೆಣ್ಣು ಮಕ್ಕಳಿಗೆ ಪ್ರೋತ್ಸಾಹ ಅತಿ ಮುಖ್ಯವಾದದ್ದು ಎಂಬುದನ್ನ ಪ್ರತಿಯೊಬ್ಬರು ಅರಿಯಬೇಕಿದೆ.



# ಮಣ್ಣಿನ ಪಾತ್ರೆಯಲ್ಲಿ ಅಡುಗೆ ಮಾಡ್ತೀರಾ?



ಮಣ್ಣಿನ ಮಡಿಕೆ ಹಾಗೂ ಮಣ್ಣಿನ ಪಾತ್ರೆಗಳನ್ನು ಬಹಳ ಹಿಂದಿನಿಂದಲೂ ಅಡುಗೆಗೆ ಬಳಸಲಾಗುತ್ತಿದೆ. ಮಣ್ಣಿನ ಪಾತ್ರೆಯಲ್ಲಿ ತಯಾರಿಸಿದ ಆಹಾರ ಬಹಳ ರುಚಿಕರವೂ ಆಗಿರುತ್ತದೆ. ಇದನ್ನು ಬಹಳ ನಾಜೂಕಾಗಿ ಹ್ಯಾಂಡಲ್ ಮಾಡಬೇಕು ಕೈಜಾರಿ ಕೆಳಗೆ ಬಿದ್ದರೆ ಒಡೆದು ಹೋಗುತ್ತದೆ. ನೀವೂ ಮನೆಯಲ್ಲಿ ಮಣ್ಣಿನ ಪಾತ್ರೆಗಳನ್ನು ಅಡುಗೆಗೆ ಬಳಸುತ್ತಿದ್ದರೆ ಈ ಕೆಲವೊಂದು ಮಾಹಿತಿಯನ್ನು ನೀವು ತಿಳಿಯಲೇ ಬೇಕು.

**ಡಿಶ್ ವಾಶ್ ಸೋಪ್ ಬಳಸಬೇಡಿ:** ಅಡುಗೆಗೆ ಬಳಸುವ ಮಣ್ಣಿನ ಪಾತ್ರೆಗಳನ್ನು ಎಂದಿಗೂ ಡಿಶ್ ವಾಶ್ ಸೋಪ್ ಅಥವಾ ದ್ರವದಿಂದ ತೊಳೆಯಬಾರದು. ಆದರೆ ನಮ್ಮಲ್ಲಿ ಪ್ರತಿಯೊಬ್ಬರೂ ಇದನ್ನು ಡಿಶ್‌ವಾಶ್ ಸೋಪ್ ನಿಂದಲೇ ಕ್ಲೀನ್ ಮಾಡುತ್ತಾರೆ. ಆದರೆ ಈ ರೀತಿ ಮಣ್ಣಿನ ಪಾತ್ರೆ ತೊಳೆಯಬಾರದು ಎನ್ನುತ್ತಾರೆ ಶೆಫ್ ಪಂಕಜ್ ಬದೌರಿಯಾ. ಮಣ್ಣಿನ ಪಾತ್ರೆಗಳು ರಂಧ್ರಗಳಿಂದ ಕೂಡಿರುತ್ತವೆ, ರಾಸಾಯನಿಕಗಳನ್ನು ಹೀರಿಕೊಳ್ಳುತ್ತವೆ. ಹಾಗಾಗಿ ನೀವು ಸೋಪು ಬಳಸಿದಾಗ ಅದರಲ್ಲಿನ ರಾಸಾಯನಿಕಗಳನ್ನು ಒಳಗೆ ಹೀರಿಕೊಳ್ಳುತ್ತದೆ.

**ಹಾಗಾದರೆ ನೀವು ಅವುಗಳನ್ನು ಹೇಗೆ ತೊಳೆಯುತ್ತೀರಿ?:** ಸೋಪ್‌ನಿಂದ ತೊಳೆಯ ಬಾರದೆಂದರೆ ಮತ್ಯಾವ ರೀತಿ ತೊಳೆಯಬೇಕು ಎನ್ನುವ ಪ್ರಶ್ನೆಗೆ ಶೆಫ್ ಪಂಕಜ್ ಮಣ್ಣಿನ ಪಾತ್ರೆ ತೊಳೆಯುವ ವಿಧಾನವನ್ನು ತಿಳಿಸಿದ್ದಾರೆ. ನೀವು ಅಡುಗೆಗೆ ಬಳಸಿದ ಪಾತ್ರೆಯಲ್ಲಿ ಎಣ್ಣೆಯಂಶ, ಜಿಡ್ಡು ಉಂಟಾಗೋದು ಸಹಜ. ಹಾಗೆಯೇ ಈ ಮಣ್ಣಿನ ಪಾತ್ರೆಯಲ್ಲೂ ಜಿಡ್ಡು ಸೇರಿರುತ್ತದೆ. ಇದನ್ನು ತೆಗೆಯಲು ಮೊದಲು ಪಾತ್ರೆಗೆ ನಿಂಬೆಯ ತುಂಡುಗಳನ್ನು ಹಾಕಿ ಸ್ವಲ್ಪ ನೀರು ಹಾಕಿ ಕುದಿಸಿ. ಇದರಿಂದ ಪಾತ್ರೆಯಲ್ಲಿ ಅಂಟಿಕೊಂಡ ಜಿಡ್ಡೆಲ್ಲಾ ನಿಧಾನವಾಗಿ ಹೊರಬರಲು ಶುರುವಾಗುತ್ತದೆ. ಆ ನೀರನ್ನು ಚೆಲ್ಲಿ.

> **ಮಣ್ಣಿನ ಮಡಕೆಯನ್ನು ಯಾವಾಗ ಎಸೆಯಬೇಕು**
> **ಮಡಕೆಯ ಹಿಂಭಾಗದಲ್ಲಿ ಸ್ವಲ್ಪ ಬಿರುಕುಗಳು ಉಂಟಾಗಲು ಪ್ರಾರಂಭಿಸಿದಾಗ ಅದನ್ನು ಅಡುಗೆಗೆ ಬಳಸುವುದು ಸೂಕ್ತವಲ್ಲ. ಅಂತಹ ಮಡಕೆಯನ್ನು ನೀವು ಅಡುಗೆಗೆ ಬಳಸುವ ಬದಲು ರಾಗಿ ನೆನೆಸಲು ಅಥವಾ ತೋಟಗಾರಿಕೆಗೆ ಬಳಸಬಹುದು.ಮಡಕೆಯ ಹಿಂಭಾಗದಲ್ಲಿ ಎಣ್ಣೆ ಸೋರಿಕೆಯಾಗಲು ಪ್ರಾರಂಭಿಸಿದರೆ ಅದನ್ನು ಎಸೆಯುವುದು ಉತ್ತಮ.**

**ಉಪ್ಪು ಮತ್ತು ಅಕ್ಕಿ ಹಿಟ್ಟು ಬಳಸಿ:** ಪಾತ್ರೆಯಲ್ಲಿನ ಜಿಡ್ಡೆಲ್ಲಾ ಹೋದ ನಂತರ ಪಾತ್ರೆಗೆ ಒಂದು ಚಮಚ ಉಪ್ಪು, ಅಕ್ಕಿ ಹಿಟ್ಟನ್ನು ಹಾಕಿ ಸ್ಕಬರ್ ಸಹಾಯದಿಂದ ತೊಳೆಯಿರಿ. ಈ ರೀತಿ ಮಾಡೋದ್ರಿಂದ ಪಾತ್ರೆ ಚೆನ್ನಾಗಿ ಕ್ಲೀನ್ ಆಗುತ್ತದೆ. ಪಾತ್ರೆಯನ್ನು ನೀರಿನಲ್ಲಿ ತೊಳೆದ ನಂತರ ಅದನ್ನು ಚೆನ್ನಾಗಿ ಒಣಗಿಸಿ ಆ ನಂತರ ತೆಗೆದಿಟ್ಟುಕೊಳ್ಳಿ. ಇದರಿಂದ ಪಾತ್ರೆಯಲ್ಲಿ ಯಾವುದೇ ತೇವಾಂಶ ಇರೋದಿಲ್ಲ, ಪಾತ್ರೆಯಲ್ಲಿ ಅಚ್ಚು ಬೆಳೆಯೋದಿಲ್ಲ.

**ಮಣ್ಣಿನ ಪಾತ್ರೆಯಲ್ಲಿ ಅಡುಗೆ ಮಾಡುವವರಿಗೆ ಟಿಪ್ಸ್**

ಮಣ್ಣಿನ ಪಾತ್ರೆಗಳಲ್ಲಿ ಅಡುಗೆ ಮಾಡುವುದಕ್ಕೆ ತಾಳ್ಮೆ ಮತ್ತು ಅಭ್ಯಾಸದ ಅಗತ್ಯವಿದೆ ಏಕೆಂದರೆ ಅದು ಬಿಸಿಯಾಗಲು ಸಮಯ ತೆಗೆದುಕೊಳ್ಳುತ್ತದೆ. ಒಲೆ ಆಫ್ ಮಾಡಿದ ನಂತರವೂ ನೀವು ಅದು ಕುದಿಯುವುದನ್ನು ನೋಡಬಹುದು ಅದು ಮಣ್ಣಿನ ಪಾತ್ರೆಗಳ ಮುಖ್ಯ ವಿಶೇಷತೆಯಾಗಿದೆ. ಇದು ಗ್ಯಾಸ್ ಸ್ಟೌವ್ ಗಳಲ್ಲಿ ಕಾರ್ಯನಿರ್ವಹಿಸುತ್ತದೆ ಆದರೆ ಇಂಡಕ್ಷನ್‌ನಲ್ಲಿ ಕೆಲಸ ಮಾಡುವುದಿಲ್ಲ. ಸಸ್ಯಾಹಾರಿ ಮತ್ತು ಮಾಂಸಾಹಾರಿ ಆಹಾರಕ್ಕಾಗಿ ಪ್ರತ್ಯೇಕ ಮಣ್ಣಿನ ಪಾತ್ರೆಗಳನ್ನು ಹೊಂದಿರುವುದು ಯಾವಾಗಲೂ ಉತ್ತಮ. ತೊಳೆಯಲು ಯಾವುದೇ ಸೋಪ್ ಬಳಸಬೇಡಿ.

ಅಕ್ಕಿ ಹಿಟ್ಟು ಅಥವಾ ಬೇಸನ್ ಹಿಟ್ಟು ಅಥವಾ ಚಪಾತಿ ಹಿಟ್ಟನ್ನು ಮಾತ್ರ ಬಳಸಿ. ಒಣಗಿದ ನಂತರ ಮೊದಲ ಬಾರಿಗೆ ಅಡುಗೆ ಮಾಡುವಾಗ ಬಹಳ ಜಾಗರೂಕರಾಗಿರಿ. ನೀವು ಅದನ್ನು ಸುಟ್ಟರೆ ಸುಟ್ಟ ವಾಸನೆಯು ಆ ಪಾತ್ರೆಯಲ್ಲಿ ಬೇಯಿಸಿದ ಯಾವುದೇ ಆಹಾರದಲ್ಲಿ ಕಾಣಿಸಿಕೊಳ್ಳುತ್ತದೆ. ಖಾಲಿ ಪಾತ್ರೆಯನ್ನು ಬಿಸಿ ಮಾಡಬೇಡಿ. ಪಾತ್ರೆಯನ್ನು ಅತಿಯಾಗಿ ಬಿಸಿ ಮಾಡುವುದರಿಂದ ಬಿರುಕುಗಳು ಉಂಟಾಗಬಹುದು ಆದ್ದರಿಂದ ಅಡುಗೆ ಮಾಡುವಾಗ ಕಡಿಮೆ ಮಧ್ಯಮ ಉರಿಯನ್ನು ಕಾಯ್ದುಕೊಳ್ಳುವುದು ಉತ್ತಮ.



# ಧೂಮಪಾನ ಕೂದಲು ಉದುರುವ ಸಮಸ್ಯೆಗೆ ಹೇಗೆ ಕಾರಣವಾಗುತ್ತೆ



ಕೂದಲು ಉದುರುವಿಕೆ ಎನ್ನುವುದು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಕಾಡುವ ಸಮಸ್ಯೆಯಾಗಿದೆ. ಇದು ಬರೀ ವಯಸ್ಸಾದ ನಂತರ ಮಾತ್ರವಲ್ಲ, ಯುವಕರಾಗಿರುವಾಗಲೇ ಕೂದಲು ಉದುರಲು ಶುರುವಾಗುತ್ತದೆ. ಕೂದಲು ಉದುರುವಿಕೆಗೆ ಅನೇಕ ಕಾರಣಳಿರಬಹುದು ಅವುಗಳಲ್ಲಿ ಧೂಮಪಾನವೂ ಒಂದು. ಹಾಗಂತ ಬರೀ ಧೂಮಪಾನ ಮಾಡುವವರಲ್ಲಿ ಮಾತ್ರ ಕೂದಲು ಉದುರುವ ಸಮಸ್ಯೆ ಕಾಡೋದಲ್ಲ, ಬದಲಾಗಿ ಧೂಮಪಾನ ಮಾಡದವರಿಗಿಂತ ಧೂಮಪಾನ ಮಾಡಿರುವವರಲ್ಲಿ ಕೂದಲು ಉದುರುವ ಸಮಸ್ಯೆ ಬೇಗನೆ ಆರಂಭವಾಗುತ್ತದೆ ಹಾಗೂ ಹೆಚ್ಚಿರುತ್ತದೆ.

**ಧೂಮಪಾನವು ಆರಂಭಿಕ ಬೋಳು ತಲೆಗೆ ಕಾರಣವಾಗುತ್ತದೆಯೇ:** ಧೂಮಪಾನವು ಅಕಾಲಿಕ ಬೋಳುಗೆ ಕಾರಣವಾಗುತ್ತದೆ ಏಕೆಂದರೆ ಅದು ಕೂದಲು ಕಿರುಚೀಲಗಳನ್ನು ಹಾನಿಗೊಳಿಸುತ್ತದೆ ಮತ್ತು ಹಾರ್ಮೋನುಗಳ ಅಸಮತೋಲನವನ್ನು ಸೃಷ್ಟಿಸುತ್ತದೆ. ಸಿಗರೇಟ್ ಹೊಗೆಯು ನಿಕೋಟಿನ್ ಮತ್ತು ಕಾರ್ಬನ್ ಮಾನಾಕ್ಸೈಡ್‌ನಂತಹ ಹಾನಿಕಾರಕ ರಾಸಾಯನಿಕಗಳನ್ನು ಮತ್ತು ರಕ್ತನಾಳಗಳಿಗೆ ಹಾನಿ ಮಾಡುವ ಫ್ರೀ ರಾಡಿಕಲ್‌ಗಳನ್ನು ಹೊಂದಿರುತ್ತದೆ. ನೆತ್ತಿಯು ಕಡಿಮೆ ರಕ್ತದ ಹರಿವನ್ನು ಅನುಭವಿಸುತ್ತದೆ, ಇದು ಆಮ್ಲಜನಕದ ಕೊರತೆ ಮತ್ತು ಪೋಷಕಾಂಶಗಳ ಕೊರತೆಗೆ ಕಾರಣವಾಗುತ್ತದೆ, ಇದು ಆರೋಗ್ಯಕರ ಕೂದಲಿನ ಬೆಳವಣಿಗೆಯನ್ನು ತಡೆಯುತ್ತದೆ. ಕೂದಲು ಕಿರುಚೀಲಗಳು ಅವುಗಳ ಶಕ್ತಿ ಕಡಿಮೆಯಾದ ನಂತರ ಕುಗ್ಗಲು ಪ್ರಾರಂಭಿಸುತ್ತವೆ, ಇದು ತೆಳುವಾಗಲು ಮತ್ತು ಆರಂಭಿಕ ಕೂದಲು ಉದುರುವಿಕೆಗೆ ಕಾರಣವಾಗುತ್ತದೆ ಎನ್ನುತ್ತಾರೆ ಆಸ್ಟರ್ ಆರ್‌ವಿ ಆಸ್ಪತ್ರೆಯ ಚರ್ಮರೋಗ ತಜ್ಞ ಡಾ. ಸುನೀಲ್ ಕುಮಾರ್ ಪ್ರಭಾಕರ್.

**ನಿಕೋಟಿನ್ ಹಾರ್ಮೋನುಗಳ ನಿಯಂತ್ರಣವನ್ನು ಅಡ್ಡಿಪಡಿಸುತ್ತದೆ**

ಧೂಮಪಾನವು ದೇಹದ ಆಕ್ಸಿಡೇಟಿವ್ ಒತ್ತಡ ಮತ್ತು ಉರಿಯೂತದ ಪ್ರತಿಕ್ರಿಯೆಯ ಮಟ್ಟವನ್ನು ಹೆಚ್ಚಿಸುತ್ತದೆ. ದೇಹವು ಕೂದಲು ಕಿರುಚೀಲ ಕೋಶಗಳನ್ನು ನಾಶಮಾಡುವ ಈ ಪ್ರಕ್ರಿಯೆಗಳನ್ನು ಅನುಭವಿಸುತ್ತದೆ ಮತ್ತು ಅವು ಸಾಮಾನ್ಯ ಕೂದಲಿನ ಬೆಳವಣಿಗೆಯನ್ನು ತಡೆಯುತ್ತದೆ. ದೇಹವು ಕೂದಲು ಕಿರುಚೀಲ ಕೋಶಗಳನ್ನು ನಾಶಮಾಡುವ ಈ ಪ್ರಕ್ರಿಯೆಗಳನ್ನು ಅನುಭವಿಸುತ್ತದೆ, ಅವು ಸಾಮಾನ್ಯ ಕೂದಲಿನ ಬೆಳವಣಿಗೆಯನ್ನು ತಡೆಯುತ್ತದೆ.

**ಅಧ್ಯಯನಗಳು ಏನು ಹೇಳುತ್ತವೆ?:** ಅಮೇರಿಕನ್ ಅಕಾಡೆಮಿ ಆಫ್ ಡರ್ಮಟಾಲಜಿ ಅಧ್ಯಯನಗಳ ಮೂಲಕ ಧೂಮಪಾನಿಗಳು ಚಿಕ್ಕ ವಯಸ್ಸಿನಲ್ಲಿಯೇ ಕೂದಲು ತೆಳುವಾಗುವುದನ್ನು ಅನುಭವಿಸುತ್ತಾರೆ ಮತ್ತು ಧೂಮಪಾನ ಮಾಡದವರಿಗಿಂತ ಹೆಚ್ಚು ತೀವ್ರ ಲಕ್ಷಣಗಳನ್ನು ಹೊಂದಿರುತ್ತಾರೆ ಎಂದು ಕಂಡುಹಿಡಿದಿದೆ. ಧೂಮಪಾನವನ್ನು ನಿಲ್ಲಿಸುವ ಮೂಲಕ ಜನರು ತಮ್ಮ ರಕ್ತದ ಹರಿವನ್ನು ಹೆಚ್ಚಿಸಬಹುದು ಮತ್ತು ದೇಹದ ಉರಿಯೂತವನ್ನು ಕಡಿಮೆ ಮಾಡಬಹುದು, ಇದು ಕೂದಲು ಉದುರುವಿಕೆಯನ್ನು ಕಡಿಮೆ ಮಾಡುತ್ತದೆ. ಮುಂದುವರಿದ ಬೋಳು ಪ್ರಕರಣಗಳಲ್ಲಿ ಕೂದಲು ಮತ್ತೆ ಬೆಳೆಯುವ ಪ್ರಕ್ರಿಯೆಯು ಅಸಾಧ್ಯವಾಗುತ್ತದೆ ಆದರೆ ಧೂಮಪಾನವನ್ನು

**ಕೂದಲಿನ ಬೇರುಗಳಲ್ಲಿರುವ ಜೀವಕೋಶಗಳು ಹಾನಿಗೊಳಗಾದರೆ ಕೂದಲಿನ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ**

- **ಧೂಮಪಾನವು ರಕ್ತದ ಹರಿವನ್ನು ಸಹ ದುರ್ಬಲಗೊಳಿಸುತ್ತದೆ**
- **ರಕ್ತನಾಳಗಳಲ್ಲಿ ಪ್ಲೇಕ್ ನಿರ್ಮಾಣವಾಗಲು ಕಾರಣವಾಗುತ್ತದೆ**
- **ಸಾಕಷ್ಟು ಆಮ್ಲಜನಕ ಮತ್ತು ಪೋಷಕಾಂಶಗಳು ನೆತ್ತಿಯನ್ನು ತಲುಪುವುದನ್ನು ತಡೆಯುತ್ತದೆ**
- **ಇದು ಕೂದಲನ್ನು ದುರ್ಬಲಗೊಳಿಸುತ್ತದೆ**
- **ಇದುಕೂದಲು ಉದುರುವಿಕೆಗೆ ಕಾರಣವಾಗುತ್ತದೆ**
- **ಧೂಮಪಾನವು ದೇಹದಲ್ಲಿ ಉರಿಯೂತದ ಪ್ರೋಟೀನ್‌ಗಳನ್ನು ಸಕ್ರಿಯಗೊಳಿಸುತ್ತದೆ**
- **ಹಾರ್ಮೋನುಗಳ ಸಮತೋಲನವನ್ನು ಅಡ್ಡಿಪಡಿಸುತ್ತದೆ ಮತ್ತು ಕೂದಲು ಬೆಳವಣಿಗೆಯ ಚಕ್ರವನ್ನು ನಿಯಂತ್ರಿಸುವ ಕಿಣ್ವಗಳನ್ನು ಬದಲಾಯಿಸುತ್ತದೆ**

ನಿಲ್ಲಿಸುವುದು ನೆತ್ತಿ ಮತ್ತು ಕೂದಲಿನ ಸ್ಥಿತಿಯನ್ನು ಸುಧಾರಿಸುವಾಗ ಅಸ್ತಿತ್ವದಲ್ಲಿರುವ ಕೂದಲನ್ನು ರಕ್ಷಿಸುತ್ತದೆ.

**ಧೂಮಪಾನವು ಕೂದಲಿಗೆ ಹೇಗೆ ಹಾನಿ ಮಾಡುತ್ತದೆ?:** ತಂಬಾಕು ಧೂಮಪಾನವು ನಿಮ್ಮ ಕೂದಲು ಕಿರುಚೀಲಗಳಿಗೆ ಹಾನಿ ಮಾಡುತ್ತದೆ, ಕೂದಲು ಉದುರುವಿಕೆಯ ಅಪಾಯವನ್ನು ಹೆಚ್ಚಿಸುತ್ತದೆ. ವೈಲಿಯಲ್ಲಿ ಪ್ರಕಟವಾದ 20 ರಿಂದ 35 ವರ್ಷ ವಯಸ್ಸಿನ ಪುರುಷರ 2020ರ ಅಧ್ಯಯನವು ಧೂಮಪಾನಿಗಳು, ಧೂಮಪಾನ ಮಾಡದವರ ನಡುವಿನ ಆರಂಭಿಕ-ಪ್ರಾರಂಭದ ಆಂಡ್ರೊಜೆನೆಟಿಕ್ ಅಲೋಪೆಸಿಯಾ ಸಂಭವವನ್ನು ಹೋಲಿಸಿದೆ. 500 ಧೂಮಪಾನಿಗಳಲ್ಲಿ 425 ಜನರು ಸ್ವಲ್ಪ ಮಟ್ಟದ ಕೂದಲು ಉದುರುವಿಕೆಯನ್ನು ಹೊಂದಿದ್ದಾರೆ ಎಂದು ಕಂಡುಹಿಡಿದಿದೆ. 500 ಧೂಮಪಾನ ಮಾಡದವರಲ್ಲಿ 200 ಮಾತ್ರ. ಹ್ಯಾಮಿಲ್ಟನ್-ನಾರ್ವುಡ್ ಮಾಪಕದ ಪ್ರಕಾರ, ಗ್ರೇಡ್ 3 ಕೂದಲಿನ ರೇಖೆಯನ್ನು ಗಮನಾರ್ಹವಾಗಿ ಕಡಿಮೆ ಮಾಡುತ್ತದೆ ಮತ್ತು ಗ್ರೇಡ್ 4 ತಲೆಯ ಮೇಲೆ ಗುರುತಿಸಲಾದ ಬೋಳುತನಕ್ಕೆ ಕಾರಣವಾಗುತ್ತದೆ. ಧೂಮಪಾನಿಗಳಲ್ಲಿ ಶೇ. 47 ರಷ್ಟು ಜನರು ಗ್ರೇಡ್ 3 ಮತ್ತು ಶೇ. 24 ರಷ್ಟು ಜನರು ಗ್ರೇಡ್ 4 ತಲುಪಿದ್ದಾರೆ ಎಂದು ಅಧ್ಯಯನವು ಕಂಡುಹಿಡಿದಿದೆ.



ಆದರೆ ಧೂಮಪಾನ ಮಾಡದವರಲ್ಲಿ ಶೇ. 10 ರಷ್ಟು ಜನರು ಮಾತ್ರ ಈ ಮಟ್ಟವನ್ನು ತಲುಪಿದ್ದಾರೆ. ತಂಬಾಕಿನಲ್ಲಿರುವ ನಿಕೋಟಿನ್, ಇತರ ರಾಸಾಯನಿಕಗಳು ಕೂದಲು ಉದುರುವಿಕೆಯನ್ನು ವೇಗಗೊಳಿಸಬಹುದು ಎಂದು ಸಂಶೋಧಕರು ನಂಬುತ್ತಾರೆ, ಆದಾಗ್ಯೂ ಹೆಚ್ಚಿನ ಅಧ್ಯಯನದ ಅಗತ್ಯವಿದೆ.

> **ಕೂದಲು ಉದುರುವ ಸಮಸ್ಯೆ ಆರಂಭ**

**ಆಕ್ಸಿಡೇಟಿವ್ ಒತ್ತಡವನ್ನು ಉತ್ತೇಜಿಸುತ್ತದೆ:** ಧೂಮಪಾನವು ದೇಹದಲ್ಲಿ ಆಕ್ಸಿಡೇಟಿವ್‌ಒತ್ತಡವನ್ನು ಹೆಚ್ಚಿಸುತ್ತದೆ, ಅಂದರೆ ಇದು ಫ್ರೀ ರಾಡಿಕಲ್‌ಗಳ ಪ್ರಮಾಣವನ್ನು ಹೆಚ್ಚಿಸುತ್ತದೆ. ಈ ಹಾನಿಕಾರಕ ಕಣಗಳು ದೇಹದ ಜೀವಕೋಶಗಳ ಡಿಎನ್‌ಎಗೆ ಹಾನಿ ಮಾಡಬಹುದು. ತಂಬಾಕು ಹೊಗೆ, ಮಾಲಿನ್ಯ, ತೀವ್ರವಾದ ಸೂರ್ಯನ ಬೆಳಕು ಸಹ ಇದೇ ರೀತಿಯ ಪರಿಣಾಮಗಳನ್ನು ಬೀರುತ್ತವೆ.

**ನಿಮ್ಮ ಕೂದಲು ಕಿರುಚೀಲಗಳಿಗೆ ರಕ್ತದ ಹರಿವು ಕಡಿಮೆಯಾಗುತ್ತದೆ**

ತಂಬಾಕಿನಲ್ಲಿರುವ ರಾಸಾಯನಿಕಗಳು ನಿಮ್ಮ ರಕ್ತ ಪರಿಚಲನೆ, ಹೃದಯರಕ್ತನಾಳದ ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತವೆ. ಧೂಮಪಾನವು ನಿಮ್ಮ ರಕ್ತನಾಳಗಳಲ್ಲಿ ಪ್ಲೇಕ್ ಶೇಖರಣೆಗೆ ಕಾರಣವಾಗುತ್ತದೆ ಎಂದು FDA ಟ್ರಸ್ಟೆಡ್ ಸೋರ್ಸ್ ಹೇಳುತ್ತದೆ, ಇದು ರಕ್ತ ಹೆಪ್ಪುಗಟ್ಟುವಿಕೆ, ಹೃದಯಾಘಾತ, ಪಾರ್ಶ್ವವಾಯು ಈ ರೀತಿಯ ಪರಿಸ್ಥಿತಿಗಳನ್ನು ಅಭಿವೃದ್ಧಿಪಡಿಸುವ ಅಪಾಯವನ್ನು ಹೆಚ್ಚಿಸುತ್ತದೆ.

### ನಿರ್ಲಕ್ಷ್ಯದ ಜೊತೆಗೆ ತಾರತಮ್ಯ ನೀತಿ ಅನುಸರಿಸಲಾಗುತ್ತಿದೆ ಎನ್ನುವ ಆರೋಪವೂ ವ್ಯಾಪಕವಾಗಿದೆ

# ಗಂಗಾವತಿ ಕ್ಷೇತ್ರದಲ್ಲಿ ಪ್ರಗತಿ ಕಾರ್ಯಕ್ಕೆ ಬರ, ಜನರ ಬೇಡಿಕೆಗಳೂ ಅಪಾರ

• **ಉದಯವಾಹಿನಿ ಗಂಗಾವತಿ**

ರಾಜ್ಯದ ಭತ್ತದ ಕಣಜ ಮತ್ತು ಹನುಮನ ನಾಡು ಎಂದೇ ಖ್ಯಾತಿ ಪಡೆದ ಗಂಗಾವತಿ ಕ್ಷೇತ್ರದ ಅಭಿವೃದ್ಧಿಗೆ ಹೇರಳ ಅವಕಾಶಗಳು ಇದ್ದರೂ ಜನರ ಬೇಡಿಕೆಗಳು ಈಡೇರಿಲ್ಲ. ಅಭಿವೃದ್ಧಿ ಕೆಲಸಗಳ ವಿಚಾರದಲ್ಲಿ ನಿರ್ಲಕ್ಷ್ಯದ ಜೊತೆಗೆ ತಾರತಮ್ಯ ನೀತಿ ಅನುಸರಿಸಲಾಗುತ್ತಿದೆ ಎನ್ನುವ ಆರೋಪವೂ ವ್ಯಾಪಕವಾಗಿದೆ.

ತಾಲ್ಲೂಕಿನಲ್ಲಿ ವಿಜಯನಗರ ಸಾಮ್ರಾಜ್ಯದ ಕಾಲದ ದೇವಾಲಯಗಳು, ಮಂಟಪ, ರಾಮಾಯಣ ಕಾಲದ ಪಂಪಾಸರೋವರ, ಋಷಿಮುಖ ಪರ್ವತ ಸೇರಿ ಹಲವು ಐತಿಹಾಸಿಕ ಪ್ರದೇಶಗಳಿವೆ. ಇವುಗಳ ಅಭಿವೃದ್ಧಿಯಾಗಬೇಕಿದೆ. ತಾಲ್ಲೂಕು ರಚನೆಯಾದ ಬಳಿಕ ಗಂಗಾವತಿ ನಿರೀಕ್ಷೆಯಷ್ಟು ಅಭಿವೃದ್ಧಿ ಕಂಡಿಲ್ಲ. 2023ರ ನಂತರ ಗಂಗಾವತಿಯ ಅಭಿವೃದ್ಧಿ ಇಳಿಮುಖವಾಗಿದೆ ಎಂದು ಜನ ಬಹಿರಂಗವಾಗಿಯೇ ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ನಗರ ಪ್ರದೇಶ ದಿನದಿಂದ ದಿನಕ್ಕೆ ಬೆಳೆಯುತ್ತಿದ್ದು, ಭತ್ತ ಬೆಳೆಯುವ ಪ್ರದೇಶದಲ್ಲಿ ಸಾಕಷ್ಟು ಅಕ್ಕಿಗಿರಣಿಗಳೂ ಇವೆ. ಇಲ್ಲಿನ ಅಕ್ಕಿ ದೇಶ-ವಿದೇಶಗಳಿಗೆ ರಫ್ತು ಆಗುತ್ತಿದ್ದರೂ ಭತ್ತ ಅಭಿವೃದ್ಧಿ ಮಂಡಳಿ ಸ್ಥಾಪನೆ ಕಾರ್ಯರೂಪಕ್ಕೆ ಬಂದಿಲ್ಲ. ದರೋಜಿ-ಬಾಗಲಕೋಟಿ ರೈಲ್ವೆ ಆರಂಭ, ವ್ಯಾಪಾರಿಗಳಿಗೆ ಅಗತ್ಯ ಸೌಲಭ್ಯಗಳು ಬೇಕಾಗಿವೆ. ಗಂಗಾವತಿ ಕೇಂದ್ರವಾಗಿರಿಸಿ ಕಿಂಧಾ ಜಿಲ್ಲೆ ರಚನೆ ಮಾಡಲು ಕಿಂಧಾ ಹೋರಾಟ ಸಮಿತಿ ಒಂದು ವರ್ಷದಿಂದ ಹೋರಾಟ ನಡೆಸುತ್ತಿದೆ. ಈ ಬೇಡಿಕೆಯೂ ಈಡೇರಿಲ್ಲ.

ಕ್ಷೇತ್ರದ ಅಭಿವೃದ್ಧಿಗೆ ಏನಾಗಬೇಕು?: ಗಂಗಾವತಿ ಅಭಿವೃದ್ಧಿ ಭಾಗವಾಗಿ ಆರ್.ಟಿ.ಒ, ಸಹಾಯಕ ಆಯುಕ್ತರ ಕಚೇರಿ,

ನಗರದಲ್ಲಿ ಬೈಪಾಸ್ ರಸ್ತೆ ನಿರ್ಮಾಣ, ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಇರಕಲ್ಲಗಡ ಭಾಗದಲ್ಲಿ ಕರಡಿಧಾಮ ನಿರ್ಮಾಣ, ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ, ಮಹಿಳಾ ಪದವಿ ಕಾಲೇಜು, ಬಾಲಕರ ಮತ್ತು ಬಾಲಕಿಯರ ವಸತಿ ನಿಲಯಗಳು ಮಂಜೂರು ಆಗಬೇಕಿದ್ದು, ಈ ಬಾರಿಯ ಬಜೆಟ್‌ನಲ್ಲಿ ಸಾಕಷ್ಟು ನಿರೀಕ್ಷೆಯಿದೆ.

ಹೋಬಳಿ ಮಟ್ಟದಲ್ಲಿ ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳ ಆರಂಭ, ಸಿಬ್ಬಂದಿ ನೇಮಕ, ನಗರ ಮತ್ತು ಗ್ರಾಮೀಣ ಭಾಗದಲ್ಲಿ ಸುಸಜ್ಜಿತ ರಸ್ತೆ, ಉಪ ಬಂಧಿಖಾನೆ, ಒಳಚರಂಡಿ ವ್ಯವಸ್ಥೆ ಪಾದಚಾರಿಗಳ ಮಾರ್ಗ, ರಸ್ತೆಗಳ ಒತ್ತುವರಿ ತೆರವು, ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಆಗಬೇಕಿದೆ.

**ಬೇಕಿದೆ ಆದ್ಯತೆ:** ಅಂಜನಾದ್ರಿ, ಜಾಗತಿಕ ಮಟ್ಟದಲ್ಲಿ ಮನ್ನಣೆ ಪಡೆದಿದೆ. ದೇವಸ್ಥಾನಕ್ಕೆ ಭೇಟಿ ನೀಡುವ ಭಕ್ತರಿಗೆ ಈವರೆಗೆ ವಸತಿ, ಊಟ ಸೇರಿ ಮೂಲ ಸೌಲಭ್ಯಗಳಿಲ್ಲ. ಇಲ್ಲಿ ಪ್ರಾಥಮಿಕ ಚಿಕಿತ್ಸಾ ಕೇಂದ್ರ, ಪೊಲೀಸ್ ಠಾಣೆ ಅಗತ್ಯವಿದೆ. ಕಿಷ್ಕಂಧಾ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಬೇಕಿದೆ ಎನ್ನುವುದು ಇತಿಹಾಸಕಾರರ ಒತ್ತಾಯವಾಗಿದೆ.

ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಹಿರೇಬೆಣಕಲ್ ನೆಲೆಗಳಿಗೆ ರಕ್ಷಣೆ ಬೇಕಿದೆ. ಇಲ್ಲಿನ ಸಮಾಧಿಗಳು ಅವನತಿಯಲ್ಲಿದ್ದು, ಸರಿಪಡಿಸಿ ಇತಿಹಾಸದ ಮಹತ್ವ ಸಾರಬೇಕಿದೆ. ಆನೆಗೊಂದಿ ಸುತ್ತಮುತ್ತಲಿನ ವಿಜಯನಗರ ಕಾಲದ ಮಂಟಪ, ದೇವಾಲಯಗಳ ನಿರ್ವಹಣೆ ಆಗಬೇಕಿದೆ. ಇತಿಹಾಸದ ಕುರಿತು ಮಾಹಿತಿ ತಿಳಿಸಲು ಆನೆಗೊಂದಿ ಭಾಗದಲ್ಲಿ ಮಾಹಿತಿ ಕೇಂದ್ರ ನಿರ್ಮಾಣವಾಗಬೇಕಿದೆ.

**ಬೇಕಿದೆ ಕಡಿವಾಣ:** ಗಂಗಾವತಿ ಭಾಗದಲ್ಲಿ ಆನೆಗೊಂದಿ, ಸಾಣಾಪುರ ಭಾಗದಲ್ಲಿ ನಿಸರ್ಗದ ಸುಂದರ ತಾಣಗಳಿದ್ದು, ಇಲ್ಲಿಗೆ ವಾರಾಂತ್ಯದಲ್ಲಿ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಲೇ ಇದೆ. ಅದರಲ್ಲಿ ಅಕ್ರಮ ರೆಸಾರ್ಟ್, ಹೋಂಸ್ಟೇ, ರೆಂಟಲ್ ಬೈಕ್, ಹರಿಗೋಲು ಸವಾರಿ, ಕ್ಲಿಫ್ ಜಂಪಿಂಗ್ ಹೆಚ್ಚಾಗಿ ನಡೆಯುತ್ತಿವೆ. ಅಕ್ರಮಕ್ಕೆ ಕಡಿವಾಣ ಹಾಕಬೇಕಿದೆ.

> ಗಂಗಾವತಿ ಅಭಿವೃದ್ಧಿಗೆ ಪ್ರವಾಸೋದ್ಯಮದ ಬೆಳವಣಿಗೆ ಮುಖ್ಯಪಾತ್ರ ವಹಿಸುತ್ತದೆ. ಗ್ರಾಮೀಣ ಭಾಗದಲ್ಲಿ ವಸತಿ ಶಾಲೆಗಳ ಸಂಖ್ಯೆ ಹೆಚ್ಚಳದ ಜೊತೆಗೆ ಜಾನಪದ ಲೋಕ ಸ್ಥಾಪನೆಯಾಗಬೇಕು. ವಿಶ್ವಮಟ್ಟದಲ್ಲಿ ಗಂಗಾವತಿ ಗುರುತಿಸುವ ಯೋಜನೆಗಳು ನೀಡಬೇಕು. -ಗುಂಡೂರು ಪವನ್ ಕುಮಾರ
> ಉಪನ್ಯಾಸಕ ಗಂಗಾವತಿ

**ಬಜೆಟ್ ನಿರೀಕ್ಷೆ ಅಂಶಗಳು**

- ದರೋಜಿ ಬಾಗಲಕೋಟಿ ರೈಲ್ವೆ ಆರಂಭ
- ಗಂಗಾವತಿ ನಗರಕ್ಕೆ ರಿಂಗ್ ರೋಡ್ ನಿರ್ಮಾಣ
- ಗಂಗಾವತಿ ಕಿಕ್ಕಿಂಧಾ ಜಿಲ್ಲೆಯಾಗಿ ಘೋಷಣೆ
- ಕಿಕ್ಕಿಂಧಾ ಪ್ರಾಧಿಕಾರ ಸ್ಥಾಪನೆ
- ಅಂಜನಾದ್ರಿ, ಹಿರೇಬೆಣಕಲ್ ಅಭಿವೃದ್ಧಿ ಭತ್ತ ಅಭಿವೃದ್ಧಿ ಮಂಡಳಿ ಸ್ಥಾಪನೆ
- ಇತಿಹಾಸ ಮಾಹಿತಿ ಕೇಂದ್ರ ನಿರ್ಮಾಣ

> ಗಂಗಾವತಿ ಅಭಿವೃದ್ಧಿಯ ಭಾಗವಾಗಿ ಅಂಜನಾದ್ರಿ, ಹಿರೇಬೆಣಕಲ್ ನಗರದ ರಸ್ತೆ ಮಾರುಕಟ್ಟೆ ಸುಸಜ್ಜಿತ ಮೈದಾನ ಸೇರಿ ಹಲವು ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ. ಸರ್ಕಾರ ಸೂಕ್ತ ಅನುದಾನ ನೀಡಿದರೆ. ಗಂಗಾವತಿಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿಪಡಿಸಲಾಗುತ್ತದೆ.
> -ಜಿ. ಜನಾರ್ದನ ರೆಡ್ಡಿ ಶಾಸಕ ಗಂಗಾವತಿ

> ಗಂಗಾವತಿಗೆ ಮಹಿಳಾ ಕೇಂದ್ರಿತ ಯೋಜನೆಗಳು ಬರಬೇಕು. ಮಹಿಳಾ ಸ್ವ ಉದ್ಯೋಗಗಳಿಗೆ ಸರ್ಕಾರ ನೆರವಿನ ಹಸ್ತ ನೀಡಬೇಕು. ಇದರಿಂದ ಮಹಿಳೆ ಸ್ವಾವಲಂಬಿಯಾಗಲು ಸಾಧ್ಯವಾಗುತ್ತದೆ.
> -ಕವಿತಾ ಮೆಟ್ರಿ ಉಪನ್ಯಾಸಕಿ ವಿದ್ಯಾನಿಕೇತನ ಪದವಿ ಕಾಲೇಜು ಗಂಗಾವತಿ

> ಮೂರು ವರ್ಷಗಳಿಂದ ಗಂಗಾವತಿ ಅಭಿವೃದ್ಧಿ ಕುಂಠಿತವಾಗಿದೆ. ಈ ಬಾರಿ ಕ್ಷೇತ್ರಕ್ಕೆ ನಗರ ಮತ್ತು ಗ್ರಾಮೀಣ ಭಾಗಕ್ಕೆ ರಸ್ತೆ ಅಂಜನಾದ್ರಿ ಅಭಿವೃದ್ಧಿ ಪ್ರಾಥಮಿಕ ಕೇಂದ್ರಗಳಿಗೆ ಸಿಬ್ಬಂದಿ ನಿಯೋಜನೆಗೆ ಬಜೆಟ್‌ನಲ್ಲಿ ಆಸಕ್ತಿ ತೋರಬೇಕಿದೆ.-ಪುನೀತಕುಮಾರ
> ವಕೀಲ ಹನುಮನಹಳ್ಳಿ ನಿವಾಸಿ

**ಅಭಿವೃದ್ಧಿ ಕೆಲಸಗಳ ವಿಚಾರದಲ್ಲಿ ನಿರ್ಲಕ್ಷ್ಯ**



## ಕಾರಟಗಿ ಸಂಪೂರ್ಣ ಶಿಥಿಲಗೊಂಡು ಅಪಾಯದ ಅಂಚಿನಲ್ಲಿರುವ ಬ್ರಿಡ್ಜ್ ಸೇತುವೆ

• **ಉದಯವಾಹಿನಿ ಕಾರಟಗಿ**

ಪಟ್ಟಣದ ನಜೀರ್ ಸಾಬ್ ಕಾಲೋನಿಯ 20-21-22 ವಾರ್ಡ್‌ಗಳ ಸಂಪರ್ಕ ಹೊಂದಿರುವ 31ನೇ ವಿತರಣಾ ಕಾಲುವೆಯ ಸೇತುವೆ ಸಂಪೂರ್ಣ ಶಿಥಿಲಗೊಂಡಿದ್ದು ಅಪಾಯದ ಅಂಚಿನಲ್ಲಿದೆ. ಹಳೆಯ ಸೇತುವೆ ಬ್ರಿಡ್ಜ್‌ನ ಒಳಭಾಗ ಸಂಪೂರ್ಣ ಬಿರುಕು ಬಿಟ್ಟು, ಪಿಲ್ಲರ್‌ಗಳ ಸಾಮರ್ಥ್ಯ ಇಲ್ಲದೆ ಒಳಭಾಗ ಸುಮಾರು 80% ಬಿದ್ದು ಹೋಗಿದೆ, ಸಾರ್ವಜನಿಕರು, ವಾಹನ ಚಾಲಕರು ವಾರ್ಡ್ ನಿವಾಸಿಗಳು, ಶಾಲಾ ವಿದ್ಯಾರ್ಥಿಗಳು ಮಕ್ಕಳು ಪ್ರಾಣ ಭೀತಿಯಲ್ಲಿ ತಿರುಗಾಡುವಂತಾಗಿದೆ, ಎಂದು ಸಮೀರ್, ಶರಣಪ್ಪ ಮತ್ತು ಅರಳೇಶ್ ಕುಮಾರ್ ನಾಯಕ್ ಪತ್ರಿಕಾಮಾಧ್ಯಮ ದವರ ಜೊತೆ ಮಾತನಾಡಿದರು.

ಈ ಬಗ್ಗೆ ಮಾತನಾಡಿದ ಪತ್ರ ಕರ್ತ ಅರಳೇಶ್ ಮಾತನಾಡಿ ಬ್ರಿಡ್ಜ್ ಸುಮಾರು 15-20 ವರ್ಷಗಳ ಹಿಂದೆಯೇ ನಿರ್ಮಾಣವಾಗಿದ್ದು. ಶಾಲಾ ವಾಹನ ಸೇರಿದಂತೆ ಟ್ರ್ಯಾಕ್ಟರ್ ದ್ವಿ ಚಕ್ರ ವಾಹನಗಳು ಟಾಟಾ ಎಸಿ ಆಟೋಗಳು ಲಾರಿಗಳು ನಿರಂತರ ಓಡಾಡುತ್ತವೆ, ಮುಖ್ಯವಾಗಿ ಪಟ್ಟಣದ ಮುಖ್ಯ ರಸ್ತೆಯಲ್ಲಿ ಅನೇಕ ಪ್ರತಿಭಟನೆ, ಜಾತ್ರೆ ಇನ್ನಿತರ ಕಾರಣಗಳಿಗೆ ಪ್ರಮುಖ ರಸ್ತೆ ಜಾಮ್ ಆದಲ್ಲಿ ಇದೇ ಸೇತುವೆ ಮೂಲಕ ನಿರಂತರ ಓಡಾಡುತ್ತಿರುತ್ತವೆ, ಪ್ರಮುಖವಾಗಿ ಮುಂದಿನ ಮಾರ್ಚ್ ನಲ್ಲಿ ಇದೇ ಸೇತುವೆಗೆ ಕೆಳಭಾಗದ ರೈತರಿಗೆ ಸಾರ್ವಜನಿಕರಿಗೆ ಕುಡಿಯುವ ನೀರು ಬಿಡಲಿದ್ದು, ನೀರು ಬಿಡುವುದರೊಳಗಾಗಿ ಈ ಸೇತುವೆಯನ್ನು ಸಮರ್ಪಕವಾಗಿ ನಿರ್ಮಾಣ ಮಾಡಿ ಸಾರ್ವಜನಿಕರ ಹಿತಾಸಕ್ತಿ ಕಾಪಾಡಬೇಕೆಂದರು.

ಕಾಲುವೆಯಲ್ಲಿ ಸಂಪೂರ್ಣ ತ್ಯಾಜ್ಯ ಮತ್ತು ಕಲುಷಿತ ನೀರು ಬಿಡುವುದರಿಂದ ಚರಂಡಿಯಂತಾಗಿ ಹಲವು ಕ್ರಿಮಿ ಕೀಟಗಳು ಮುಖ್ಯವಾಗಿ ಸೊಳ್ಳೆಗಳು ಹೆಚ್ಚಾಗಿದ್ದು, ಡೆಂಗ್ಯೂ ಮಲೇರಿಯಾದಂತಹ ಮಾರಕ ರೋಗಗಳು ಹರಡುವ ಭೀತಿಯಲ್ಲಿ ಸಾರ್ವಜನಿಕರಿದ್ದಾರೆ, ಈ ಕುರಿತು ನೀರಾವರಿ ಇಲಾಖೆಯವರಿಗೂ ಹಾಗೂ ಪುರಸಭಾ ಇಲಾಖೆಯ ಆರೋಗ್ಯ ನಿರೀಕ್ಷಕರಿಗೂ ಅಧಿಕಾರಿಗಳಿಗೂ ಹಲವು ಬಾರಿ ಮನವಿ ಮಾಡಿಕೊಂಡರು ಅಧಿಕಾರಿಗಳು ಇತ್ತ ಗಮನಹರಿಸಿ ಸಾರ್ವಜನಿಕರ ಹಿತ ಕಾಪಾಡುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ, ಈಗಲಾದರೂ ಎಚ್ಚೆತ್ತುಕೊಂಡು ಕಾಲುವೆಯ ಸ್ವಚ್ಛತಾ ಕಾರ್ಯಕ್ರಮಕ್ಕೆ ಮುಂದಾಗಿ ಮಾರಕ ರೋಗಗಳಿಂದ ಮುಕ್ತಗೊಳಿಸಿ ಮುಂಜಾಗ್ರತೆ ಕ್ರಮ ಕೈಗೊಳ್ಳಬೇಕು ಎಂದರು. ಈ ಸಂದರ್ಭದಲ್ಲಿ ವಾರ್ಡಿನ ಸಮೀರ್, ಶರಣಪ್ಪ, ಅರಳೇಶ್ ಹಾಗೂ ಇತರರು ಇದ್ದರು.





ಉದಯವಾಹಿನಿ ಚಿತ್ರ



> ಸೇತುವೆ ಶಥಿಲಗೊಂಡಿರುವುದು ನೀರಾವರಿ ಇಲಾಖೆ ಗಮನಕ್ಕೆ ಇದೆ, ಈಗಾಗಲೇ ಸೇತುವೆ ಮರು ನಿರ್ಮಾಣಕ್ಕೆ ಟೆಂಡರ್ ಕರೆಯಲಾಗಿದೆ, ಅತಿ ಶೀಘ್ರದಲ್ಲಿ ಸೇತುವೆ ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ. -ನಾಗಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು (ಪ್ರಭಾರಿ)ನೀರಾವರಿ ಇಲಾಖೆ

**ಕಲುಷಿತ ನೀರಿನಿಂದ ಚರಂಡಿಯಾದ ಕಾಲುವೆ. ರೋಗಾಣು ಹರಡುವ ಭೀತಿಯಲ್ಲಿ ಸಾರ್ವಜನಿಕರು**

## ಎಸ್.ಎಸ್.ಎಲ್.ಸಿ. ಫಲಿತಾಂಶ ಸುಧಾರಣೆಗೆ ಕ್ರಮವಹಿಸಿ: ಜಿಪಂ ಸಿಇಒ ರಿಷಿ ಆನಂದ ಸೂಚನೆ

• **ಉದಯವಾಹಿನಿ ವಿಜಯಪುರ**



ಉದಯವಾಹಿನಿ ಚಿತ್ರ

ಮುಂಬರುವ ದಿನಗಳಲ್ಲಿ ನಡೆಯುವ ಎಸ್ ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯ ಫಲಿತಾಂಶ ಶೇ.100 ರಷ್ಟು ಪ್ರಗತಿ ಸಾಧಿಸಬೇಕು ಎಂದು ಜಿಪಂ ಸಿಇಒ ರಿಷಿ ಆನಂದ ಅಧಿಕಾರಿಗಳಿಗೆ ಸೂಚಿಸಿದರು. ಎಸ್.ಎಸ್.ಎಲ್.ಸಿ. ಫಲಿತಾಂಶ ಸುಧಾರಣಾ ಕ್ರಮಗಳ ಕುರಿತು ನಗರದ ಜಿಪಂ ಸಭಾಂಗಣದಲ್ಲಿ ನಡೆದ ಪ್ರಗತಿ ಪರಿಶಿಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಮತ್ತು ಶಿಕ್ಷಕರು ಸಮನ್ವಯ ಸಾಧಿಸಿ ಪೂರ್ವ ಸಿದ್ಧತಾ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಪಡೆಯಲು ವಿನೂತನ ಚಟುವಟಿಕೆಗಳನ್ನು ನಡೆಸಬೇಕು. ವಿದ್ಯಾರ್ಥಿಗಳು ಉತ್ತಮ ಅಂಕ ಪಡೆಯುವಲ್ಲಿ ನೀವೆಲ್ಲರೂ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದರು.

ಇಲಾಖೆಗೆ ಹಿಂದಿನ ವರ್ಷಗಳ ಮಾದರಿ ಪ್ರಶ್ನೆ ಪತ್ರಿಕೆ ವಿತರಿಸಲಾಗಿದೆ. ಈ ಪ್ರಶ್ನೆ ಪತ್ರಿಕೆಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳಿಗೆ ಅಭ್ಯಾಸ ಮಾಡಿಸಬೇಕು. ನಿಮ್ಮ ಕಡೆಯಿಂದ ಶೇ.100ರಷ್ಟು ಪ್ರಯತ್ನ ಮಾಡಬೇಕು. ಇದರಲ್ಲಿ ಮುಖ್ಯ ಶಿಕ್ಷಕರು ಹೆಚ್ಚು ಪ್ರಯತ್ನ ಮಾಡಬೇಕು ಎಂದರು. ನಮ್ಮ ಜಿಲ್ಲೆಯ ಎಸ್.ಎಸ್.ಎಲ್.ಸಿ. ಫಲಿತಾಂಶ ಶೇ.100ರಷ್ಟು ಫಲಿತಾಂಶ ಸಾಧಿಸಲು ನಿಮ್ಮ ಪ್ರಯತ್ನ ಅತೀ ಮುಖ್ಯವಾದದ್ದು. ವಾರ್ಷಿಕ ಪರೀಕ್ಷೆಗೆ ಇನ್ನೂ 15 ರಿಂದ 20 ದಿನಗಳ ಸಮಯವಿದೆ. ಪೂರ್ವ ಸಿದ್ಧತಾ ಪರೀಕ್ಷೆಗಳಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳ ಮೇಲೆ ಅತೀ ಹೆಚ್ಚು ನಿಗಾವಹಿಸಿ ಕಡಿಮೆ ಅಂಕ ಪಡೆದ ವಿಷಯದ ಮೇಲೆ ಹೆಚ್ಚು ಅಭ್ಯಾಸ ಮಾಡಿಸಬೇಕು ಎಂದರು.

ವಿದ್ಯಾರ್ಥಿಗಳು ಕಡಿಮೆ ಅಂಕಗಳನ್ನು ಪಡೆಯಲು ಕಾರಣಗಳೇನು ಎಂಬುದನ್ನು ವಿಶ್ಲೇಷಣೆಗೊಳಿಸಬೇಕು. ಸಮಸ್ಯೆಗಳನ್ನು ಪರಿಹರಿಸಿ ವಿದ್ಯಾರ್ಥಿಗಳ ಗೊಂದಲಗಳನ್ನು ಹೋಗಲಾಡಿಸಿ, ಉತ್ತಮ ಅಂಕ ಪಡೆಯಲು ಪ್ರೇರಣೆ ನೀಡಬೇಕು. ಏಕೆಂದರೆ ವಿದ್ಯಾರ್ಥಿ ಜೀವನದಲ್ಲಿ ಎಸ್.ಎಸ್.ಎಲ್.ಸಿ. ಯು ಬಹಳ ಪ್ರಮುಖ ಘಟ್ಟವಾಗಿದ್ದು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದಲ್ಲಿ ಮಾತ್ರ ಅವರು ಉನ್ನತ ಶಿಕ್ಷಣ ಪಡೆಯಲು ಸಹಾಯಕವಾಗುತ್ತದೆ ಎಂದರು.

## ಮಹಿಳಾ ಪ್ರಯಾಣಿಕರನ್ನು ಗೌರವಿಸಬೇಕು: ಸಿಪಿಐ



ಉದಯವಾಹಿನಿ ಚಿತ್ರ

• **ಉದಯವಾಹಿನಿ ಕಮಲನಗರ**

ರಸ್ತೆ ಸುರಕ್ಷತಾ ನಿಯಮಗಳನ್ನು ಚಾಚು ತಪ್ಪದೇ ಪಾಲಿಸಬೇಕು. ಅದರ ಜೊತೆಗೆ ಮಹಿಳಾ ಪ್ರಯಾಣಿಕರನ್ನು ಗೌರವಿಸಬೇಕು ಮತ್ತು ಅವರನ್ನು ಕರೆದೊಯ್ಯುವಾಗ ಅನುಚಿತವಾಗಿ ವರ್ತಿಸಬಾರದು, ಇಲ್ಲದಿದ್ದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಸಿಪಿಐ ಶ್ರೀಕಾಂತ ಅಲ್ಲಾಪುರೆ ಹೇಳಿದರು.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ರಸ್ತೆ ಸುರಕ್ಷತೆ, ಮಹಿಳಾ ಪ್ರಯಾಣಿಕರ ಸುರಕ್ಷತೆ ಕುರಿತು ಆಟೋ ಚಾಲಕರೊಂದಿಗೆ ಹಮ್ಮಿಕೊಂಡ ಸಭೆಯಲ್ಲಿ ಚಾಲಕರನ್ನು ಉದ್ದೇಶಿಸಿ ಮಾತನಾಡಿದರು. ರಸ್ತೆ ಸುರಕ್ಷತೆಯ ಮೂಲ ನಿಯಮಗಳು ಗೊಂದಲವನ್ನು ತಪ್ಪಿಸುವುದು, ಸ್ಟಾಪ್ ಚಿಹ್ನೆಗಳು, ಕೆಂಪು ದೀಪಗಳಂತಹ ಸಂಚಾರ ಸಂಕೇತ ಪಾಲಿಸುವುದು, ಯುನಿಫಾರ್ಮ್ ಧರಿಸುವಿಕೆ, ಸೀಟ್ ಬೆಲ್ಟ್, ಹೆಲ್ಮೆಟ್ ಧರಿಸುವುದು, ವೇಗದ ಮಿತಿ ಮತ್ತು ಸುರಕ್ಷಿತ ಅಂತರ ಕಾಯ್ದುಕೊಳ್ಳುವುದು, ಮಧ್ಯಪಾನ ಮಾಡಿ ವಾಹನ ಚಲಾಯಿಸಬೇಡಿ, ಚಾಲನಾ ಪರವಾನಗಿ ಇಲ್ಲದೆ ವಾಹನ ಚಲಾಯಿಸಬೇಡಿ ಇತ್ಯಾದಿ ಹಲವು ನಿಯಮಗಳನ್ನು ಅತ್ಯಂತ ಮುಖ್ಯವಾದವುಗಳಾಗಿವೆ ಎಂದು ತಿಳಿಸಿದರು. ಪಿಎಸ್ಐ ಆಶಾ ರಾಠೋಡ್ ಮಾತನಾಡಿ, ಜೀವನದಲ್ಲಿ ನಾವು ಇಡುವ ಪ್ರತಿಯೊಂದು ಹೆಜ್ಜೆಗೂ ನಿಯಮಗಳಿರುತ್ತವೆ. ಅದೇ, ರೀತಿ ರಸ್ತೆ ಸುರಕ್ಷತೆಗೆ ಕೆಲವು ನಿಯಮಗಳಿವೆ, ಮತ್ತು ವಾಹನ ಚಲಾಯಿಸುವಾಗ ನಮ್ಮನ್ನು ಸುರಕ್ಷಿತವಾಗಿಡಲು ಅವು ನಮಗೆ ಬಹಳ ಮುಖ್ಯ ಎಂದರು.

ಆಟೋ ಚಾಲಕರಾದ ಜ್ಞಾನೋಬಾ ಕಾಂಬಳೆ, ಹಣಮಂತ, ಅಮಜದ್, ಫರದೀನ್, ನಾಗನಾಥ, ಇಮ್ರಾನ್, ಮಹೇಶ, ರಾಮ, ಸುರಜ, ಪ್ರದೀಪ, ಫೀರೋಜ್, ಪ್ರಶಾಂತ, ಗೋವಿಂದ, ಸಾಗರ, ಸಂದೀಪ ಉಪಸ್ಥಿತರಿದ್ದರು.

## ಮುದ್ರಣ ರಹಿತ ಜಗತ್ತು ಊಹಿಸಲು ಅಸಾಧ್ಯ: ಎಚ್.ಬಿ.ಪಾಟೀಲ

• **ಉದಯವಾಹಿನಿ ಕಲಬುರಗಿ**



ಉದಯವಾಹಿನಿ ಚಿತ್ರ

ಪುಸ್ತಕಗಳಿಂದ ಶಿಕ್ಷಣ ಮತ್ತು ಜ್ಞಾನ, ಪತ್ರಿಕೆಗಳಿಂದ ರಾಜಕೀಯ ಸೇರಿದಂತೆ ಎಲ್ಲಾ ಸಾಮಾನ್ಯ ಜ್ಞಾನ ದೊರೆಯಬೇಕಾದರೆ ಮುದ್ರಣ ಅಗತ್ಯ. ಒಂದು ವೇಳೆ ಮುದ್ರಣವಿಲ್ಲದಿದ್ದರೆ ಜ್ಞಾನದ ಬ್ಯಾಂಕಿನಲ್ಲಿ ಠೇವಣಿ ಇರುತ್ತಿರಲಿಲ್ಲ. ಪ್ರಪಂಚದೊಡನೆ ಸಂಪರ್ಕ ಸಲೀಸಾಗುತ್ತಿರಲಿಲ್ಲ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಸಂಚಲನ ಇರುತ್ತಿರಲಿಲ್ಲ. ದೈನಂದಿನ ಚಟುವಟಿಕೆಗಳು ತಿಳಿಯದೇ, ಆದಿ ಮಾನವನಂತೆ ಬದುಕುವ ಸ್ಥಿತಿ ಬರುತಿತ್ತು. ಮುದ್ರಣ ರಹಿತ ಜಗತ್ತು ಊಹಿಸಲು ಅಸಾಧ್ಯವಾಗಿದೆ ಎಂದು ಉಪನ್ಯಾಸಕ ಎಚ್.ಬಿ.ಪಾಟೀಲ ಹೇಳಿದರು.

ನಗರದ ಪ್ರಕಾಶ ಏಷಿಯನ್ ಮಾಲ್‌ನಲ್ಲಿನ ಎಸ್.ಡಿ.ಮಠಪತಿ ಪ್ರಿಂಟರ್ಸ್ ಮತ್ತು ಮಹಾನಂದ ಪ್ರಿಂಟರ್ಸ್‌ನಲ್ಲಿ ಬಸವೇಶ್ವರ ಸಮಾಜ ಸೇವಾ ಬಳಗದ ವತಿಯಿಂದ ಮಂಗಳವಾರ ಸಂಜೆ ಏರ್ಪಡಿಸಲಾಗಿದ್ದ ಅಂತಾರಾಷ್ಟ್ರೀಯ ಮುದ್ರಕರ ದಿನಾಚರಣೆಯಲ್ಲಿ ಮುದ್ರಣ ಯಂತ್ರದ ಜನಕ ಜೋಹಾನ್ಸ್ ಗುಟೆನಬರ್ಗ್‌ರ ಭಾವಚಿತ್ರಕ್ಕೆ ಪುಷ್ಪನಮನಗಳನ್ನು ಸಲ್ಲಿಸಿ ಅವರು ಮಾತನಾಡುತ್ತಿದ್ದರು.

ಮನುಷ್ಯನಿಗೆ ನೀರು, ಗಾಳಿ, ಅಗ್ನಿ, ಆಕಾಶ, ಭೂಮಿಗಳೆಂಬ ಪಂಚಭೂತಗಳ ನಂತರದ 6ನೇ ಅವಶ್ಯಕತೆಯಾಗಿ ಮುದ್ರಣ ಎಂಬುದು ಇಂದಿನ ದೈನಂದಿನ ಬದುಕಿಗೆ ಅತ್ಯಂತ ಅನಿವಾರ್ಯ ಎಂದೆನಿಸುತ್ತದೆ. ಮುದ್ರಣರಹಿತ ಪ್ರಪಂಚ ಹೇಗಿರಬಹುದಿತ್ತೆಂಬುದನ್ನು ಊಹಿಸಿಕೊಂಡು ನೋಡಿದಾಗ ಮುದ್ರಣದ ಮಹತ್ವ ಅರಿವಾಗುತ್ತದೆ.

ಮನುಷ್ಯ ಉಪಯೋಗಿಸುವ ಪ್ರತಿ ವಸ್ತುಗಳು ಒಂದಲ್ಲವೊಂದು ರೀತಿಯ ಮುದ್ರಣವನ್ನು ಅವಲಂಬಿಸಿರುತ್ತವೆ. ಭೌಗೋಳಿಕ, ಸಾಹಿತ್ಯ, ವಿಜ್ಞಾನ ಮತ್ತು ತಂತ್ರಜ್ಞಾನ ಸೇರಿದಂತೆ ಪ್ರತಿಯೊಂದು ವಿಷಯ, ಮಾಹಿತಿ ದೊರೆಯಬೇಕಾದರೆ ಪುಸ್ತಕಗಳ ಅಧ್ಯಯನ ಅಗತ್ಯ. ದೇಶದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅಂಕಿ-ಅಂಶಗಳನ್ನು ಒದಗಿಸಿ, ಸಮಸ್ಯೆಯ ಬಗ್ಗೆ ಬೆಳಕು ಚೆಲ್ಲಲು ಸೂಕ್ತ ಮಾಹಿತಿ ಅಗತ್ಯವಾಗಿದೆ. ಮುದ್ರಣ ಶಾಶ್ವತ ದಾಖಲೆಯಾಗಿದ್ದು, ವಿಶ್ವದ ಅಭಿವೃದ್ಧಿಗೆ ಅನನ್ಯವಾದ ಕೊಡುಗೆಯನ್ನು ನೀಡುತ್ತಿದೆ ಎಂದರು.

ಪ್ರಿಂಟರ್ಸ್‌ನ ಮುಖ್ಯಸ್ಥ ಶ್ರೀಶೈಲ ಡಿ.ಮಠಪತಿ ನರೋಣಾ ಮಾತನಾಡಿ, ಜೋನ್ಸ್ ಗುಟೆನಬರ್ಗ್ ಅವರು ಮುದ್ರಣ ಯಂತ್ರವನ್ನು ಸಂಶೋಧನೆ ಮಾಡಿದ್ದಾರೆ. ಹಿಂದಿನ ಕಾಲದಲ್ಲಿ ಮುದ್ರಣ ಕಾರ್ಯ ಬಹಳ ಕಷ್ಟಕರವಾಗಿತ್ತು. ಪ್ರತಿಯೊಂದು ಅಕ್ಷರ ಜೋಡಿಸಿ ಮುದ್ರಣ ಮಾಡಲು ಸಾಕಷ್ಟು ಸಮಯ, ತಾಳ್ಮೆ, ಪರಿಶ್ರಮ ಬೇಕಾಗುತ್ತಿತ್ತು.

ಆದರೆ ಈಗ ಕಂಪ್ಯೂಟರ ವ್ಯಾಪಕ ಬಳಕೆ, ಡಿಜಿಟಲ್ ಕ್ರಾಂತಿಯಿಂದಾಗಿ ಮುದ್ರಣ ಕಾರ್ಯ ಸರಳ ಮತ್ತು ವೇಗವಾಗಿದೆ. ಪ್ರಸ್ತುತ ಸಂದರ್ಭಗಳಲ್ಲಿ ಇದು ಅನಿವಾರ್ಯ ಕೂಡಾ ಹೌದು. ಮುದ್ರಕರನ್ನು ಗುರುತಿಸಿ ಪ್ರೋತ್ಸಾಹಿಸುವ ಕಾರ್ಯ ಮಾಡುತ್ತಿರುವ ಬಳಗದ ಸೇವೆ ಅಮೋಘವಾಗಿದೆ ಎಂದರು.

**ಸಾಮಾನ್ಯ ಜ್ಞಾನ ದೊರೆಯಬೇಕಾದರೆ ಮುದ್ರಣ ಅಗತ್ಯ**

# ಪಾಲಿಕೆ ಬಜೆಟ್ ಮಂಡನೆ: ನೀರಿಗಿಂತ ನಾಯಿಗಳಿಗೇ ಹೆಚ್ಚು ವೆಚ್ಚ

### ಮೂಲ ಸೌಕರ್ಯ ಅಭಿವೃದ್ಧಿ, ವಿದ್ಯುತ್ ಬಿಲ್ ಪೂರಣ, ಪೌರ ಕಾರ್ಮಿಕರ ವೇತನ ಸೇರಿದಂತೆ ಮೂಲ ಸೌಕರ್ಯಗಳಿಗೆ ಆದ್ಯತೆ

• **ಉದಯವಾಹಿನಿ ಬೆಳಗಾವಿ**

ಮಹಾನಗರ ಪಾಲಿಕೆಯಿಂದ ಈ ವರ್ಷ ರೂ.442.54 ಕೋಟಿ ಆದಾಯ ನಿರೀಕ್ಷಿಸಲಾಗಿದ್ದು, ರೂ.441.62 ಕೋಟಿ ವೆಚ್ಚ ಅಂದಾಜಿಸಲಾಗಿದೆ. ಎಲ್ಲಾ ಖರ್ಚುಗಳನ್ನು ತೆಗೆದು ರೂ.92.32 ಲಕ್ಷ ಉಳಿತಾಯ ಸಾಧಿಸುವ ಗುರಿ ಹೊಂದಿರುವ ಬಜೆಟ್ ಅನ್ನು ಬುಧವಾರ ಮಂಡಿಸಲಾಯಿತು. ಮೇಯರ್ ಮಂಗೇಶ ಪವಾರ್ ಅಧ್ಯಕ್ಷತೆಯಲ್ಲಿ ನಡೆದ ಬಜೆಟ್ ಸಭೆಯಲ್ಲಿ, ಪಾಲಿಕೆಯ ತೆರಿಗೆ, ಹಣಕಾಸು ಮತ್ತು ಅಪೀಲುಗಳ ಸ್ಥಾಯಿ ಸಮಿತಿ ಅಧ್ಯಕ್ಷೆ ರೇಷ್ಮಾ ಹೂಗಾರ ಅವರು. ನಗರದ ಅಭಿವೃದ್ಧಿಗೆ ದಿಕ್ಕು ತೋರಿಸುವ 2026-27ನೇ ಸಾಲಿನ ಬಜೆಟ್ ಮಂಡಿಸಿದರು. ಇದಕ್ಕೂ ಮುನ್ನ ಅವರು ಮೇಯರ್ ಹಾಗೂ ಉಪಮೇಯರ್ ವಾಣಿ ಜೋಶಿ ಅವರಿಗೆ ಬಜೆಟ್ ಪತ್ರಗಳನ್ನು ತಲುಪಿಸಿದರು.

ಪ್ರತಿ ಬಾರಿಯಂತೆ ಈ ಬಾರಿಯೂ ನಗರದ ಸ್ವಚ್ಛತೆ, ಎಲ್ಲಾ 58 ವಾರ್ಡುಗಳಲ್ಲೂ ಮೂಲ ಸೌಕರ್ಯ ಅಭಿವೃದ್ಧಿ, ವಿದ್ಯುತ್ ಬಿಲ್ ಪೂರಣ, ಪೌರ ಕಾರ್ಮಿಕರ ವೇತನ ಸೇರಿದಂತೆ ಮೂಲ ಸೌಕರ್ಯಗಳಿಗೆ ಆದ್ಯತೆ ನೀಡಲಾಗಿದೆ.

**ಪ್ರಮುಖ ವೆಚ್ಚಗಳು:** ಎಸ್.ಎಫ್.ಸಿ ವಿದ್ಯುತ್ ಅನುದಾನ ರೂ.62.6 ಕೋಟಿ, ಎಸ್.ಎಫ್.ಸಿ ಮುಕ್ತ ನಿಧಿ ರೂ.3.22 ಕೋಟಿ, 16ನೇ ಹಣಕಾಸು ಆಯೋಗ ಅನುದಾನಕ್ಕೆ ರೂ.21 ಕೋಟಿ ವೆಚ್ಚವನ್ನು ಅಂದಾಜಿಸಲಾಗಿದೆ. ಮುಖ್ಯವಾಗಿ ಸ್ವಚ್ಛತೆ ಮತ್ತು ವೇತನಗಳಿಗೆ ಹೆಚ್ಚಿನ ಹಂಚಿಕೆ ನೀಡಲಾಗಿದೆ. ಹೊರಗುತ್ತಿಗೆ ಸ್ವಚ್ಛತಾ ವೆಚ್ಚ ರೂ.38.25 ಕೋಟಿ, ನೇರ ನೇಮಕಾತಿ ಪೌರ ಕಾರ್ಮಿಕರ ವೇತನಕ್ಕೆ ರೂ.11 ಕೋಟಿ, ಪೌರಕಾರ್ಮಿಕರ ಉಪಾಹಾರ ಭತ್ಯೆ ರೂ.2 ಕೋಟಿ, ವೈಜ್ಞಾನಿಕ ಘನತ್ಯಾಜ್ಯ ವಿಲೇವಾರಿ ರೂ4 ಕೋಟಿ, ಬೀದಿ ದೀಪ ನಿರ್ವಹಣೆ ರೂ.50 ಲಕ್ಷ, ರಸ್ತೆ, ಚರಂಡಿ, ಪಾದಚಾರಿ ಮಾರ್ಗ ನಿರ್ವಹಣೆಗೆ ರೂ.6.95 ಕೋಟಿ, ಬೀದಿ ನಾಯಿಗಳ ಶೆಡ್ ನಿರ್ಮಾಣ ಹಾಗೂ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಗೆ ರೂ.2.10 ಕೋಟಿ, ಸ್ಮಶಾನ ಅಭಿವೃದ್ಧಿ ರೂ.1 ಕೋಟಿ, ಕುಡಿಯುವ ನೀರು, ತೆರೆದ ಭಾವಿ ಅಭಿವೃದ್ಧಿ ರೂ.25 ಲಕ್ಷ, ಕ್ರೀಡೆಗಳಿಗೆ ರೂ.14.43 ಲಕ್ಷ, ಬೆಳಗಾವಿ ಯೋಜನೆಗೆ ವಂತಿಕೆ ರೂ.5 ಕೋಟಿ ವೆಚ್ಚವನ್ನು ಅಂದಾಜಿಸಲಾಗಿದೆ. ಎಲ್ಲಾ ವಾರ್ಡುಗಳಲ್ಲೂ ಮೂಲಸೌಕರ್ಯ ಕಾಮಗಾರಿಗಳಿಗೆ ರೂ.27 ಕೋಟಿ ವೆಚ್ಚ ಅಂದಾಜಿಸಿದ್ದು, ಇದರಲ್ಲಿ ಹೊಸದಾಗಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣವನ್ನೂ ಸೇರಿಸಲಾಗಿದೆ.

**ಇತರೆ ಬಂಡವಾಳ ವೆಚ್ಚಗಳು:** ಒಳಚರಂಡಿ ದುರಸ್ತಿ, ಹೊಸ ಚರಂಡಿಗಳ ನಿರ್ಮಾಣ ಹಾಗೂ ಸಮುದಾಯ ಶೌಚಾಲಯ ಸೇರಿ ಒಟ್ಟು 22 ಕೋಟಿ, ಪಾಲಿಕೆ ಆಸ್ತಿ ಸಂರಕ್ಷಣೆ ರೂ.2 ಕೋಟಿ, ಉದ್ಯಾನಗಳ ಅಭಿವೃದ್ಧಿ ರೂ.1.35 ಕೋಟಿ, ಇ-ಆಫೀಸ್ ವ್ಯವಸ್ಥೆ, ಗಣಕೀಕರಣ ಮತ್ತು ಯಂತ್ರೋಪಕರಣಕ್ಕೆ ರೂ.1.45 ಕೋಟಿ ವೆಚ್ಚ ನಿಗದಿ ಮಾಡಲಾಗಿದೆ.

**ತೆರಿಗೆ: ಮತ್ತದೇ ಅಭಿಯಾನ:** ಈ ಬಾರಿ ಎಲ್ಲಾ ಮೂಲಗಳ ತೆರಿಗೆಯನ್ನು ಅಚ್ಚುಕಟ್ಟಾಗಿ ಸಂಗ್ರಹಿಸಲು ಅಭಿಯಾನ ಹಮ್ಮಿಕೊಳ್ಳುವುದಾಗಿ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಲಾಗಿದೆ. ಇದು ಕೂಡ ಹಳೆಯ ಚಾಳಿಯೇ. ಕಳೆದ ಐದಾರು ಬಜೆಟ್‌ಗಳಲ್ಲಿಯೂ ಇದೇ ಮಾದರಿಯ ಅಭಿಯಾನದ ನಿರೀಕ್ಷೆ ಇಡಲಾಗಿತ್ತು. ಆದರೂ ನಾಗರಿಕರಿಂದ ನಿರೀಕ್ಷಿತ ತೆರಿಗೆ ಸಂಗ್ರಹ ಸಾಧ್ಯವಾಗಲಿಲ್ಲ.



ಉದಯವಾಹಿನಿ ಚಿತ್ರ

**ಅಂಕಿ ಅಂಶಗಳು**

- ಬೆಳಗಾವಿ ಪಾಲಿಕೆ ಆದಾಯ ಮೂಲ: ರೂ.85 ಕೋಟಿ
- ಆಸ್ತಿ ತೆರಿಗೆಯಿಂದ ಸಂಗ್ರಹ: ರೂ.7.55 ಕೋಟಿ
- ಆಸ್ತಿಗಳ ವರ್ಗಾವಣೆ ಶುಲ್ಕ ಹಾಗೂ ದಂಡ ಮೂಲ: ರೂ.9.90 ಕೋಟಿ
- ಕಟ್ಟಡ ಪರವಾನಗಿ, ಅಭಿವೃದ್ಧಿ, ಸುಧಾರಣೆ ಶುಲ್ಕ: ರೂ.11 ಕೋಟಿ
- ಖಾಲಿ ನಿವೇಶನಗಳ ಮಾರಾಟದಿಂದ: ರೂ.9.75 ಕೋಟಿ
- ಘನತ್ಯಾಜ್ಯ ನಿರ್ವಹಣಾ ಶುಲ್ಕ: ರೂ.4 ಕೋಟಿ
- ಉದ್ದಿಮೆ ಪರವಾನಗಿಯಿಂದ: ರೂ.5 ಕೋಟಿ
- ಹೊಸ ಯುಜಿಡಿ ಸಂಪರ್ಕದಿಂದ: ರೂ.1.5 ಕೋಟಿ
- ರಸ್ತೆ ಅಗೆತ ಶುಲ್ಕ: ರೂ.1.7 ಕೋಟಿ
- ಅವಶೇಷ ನಿರ್ಮೂಲನೆ ಮೂಲ: ರೂ.1.3 ಕೋಟಿ

**ನೀರಿಗಿಂತ ನಾಯಿಗಳಿಗೇ ಹೆಚ್ಚು ವೆಚ್ಚ**

ಸ್ಮಾರ್ಟ್‌ಸಿಟಿಯಲ್ಲಿ ಕಳೆದೊಂದು ದಶಕಗಳಿಂದಲೂ ಬೀದಿನಾಯಿಗಳ ಕಾಟ ವಿಪರೀತವಾಗಿದೆ. ಸಾವಿರಾರು ಸಂಖ್ಯೆಯ ನಾಯಿಗಳು ಪ್ರತಿ ವರ್ಷವೂ ಹೆಚ್ಚುತ್ತಲೇ ಇವೆ. ಪ್ರಸಕ್ತ ಬಜೆಟ್‌ನಲ್ಲಿ ಕೂಡ ನಾಯಿಗಳ ಉಪಟಳ ನಿಯಂತ್ರಣ ಹಾಗೂ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಗೆ ರೂ.2.10 ಕೋಟಿ ಅನುದಾನ ಮೀಸಲು ಇಡಲಾಗಿದೆ. 2024-25ನೇ ಸಾಲಿನ ಹಾಗೂ 2025-26ನೇ ಸಾಲಿನ ಬಜೆಟ್‌ನಲ್ಲಿಯೂ ಅಂದಾಜು ರೂ.2 ಕೋಟಿ ಮೀಸಲು ಇಡಲಾಗಿತ್ತು. ಆದರೆ, ನಾಯಿಗಳ ಸಂತಾನ ಮಾತ್ರ ಕಡಿಮೆ ಆಗಿಲ್ಲ. ಅಚ್ಚರಿಯೆಂದರೆ ಕುಡಿಯುವ ನೀರಿಗಿಂತಲೂ ನಾಯಿಗಳೇ ಹೆಚ್ಚು ಹಣ ನುಂಗುತ್ತಿವೆ.

## ಮಿನಿ ನ್ಯೂಸ್

### ನಗರದಲ್ಲಿ ನೈರ್ಮಲ್ಯ ಕಾಪಾಡಿ

• **ಉದಯವಾಹಿನಿ ಬೀದರ್**

ನಗರದಲ್ಲಿ ನೈರ್ಮಲ್ಯ ಕಾಪಾಡಲು ಕ್ರಮ ಕೈಗೊಳ್ಳಬೇಕು ಎಂದು ನಮ್ಮ ಕರ್ನಾಟಕ ಸೇನೆ ಆಗ್ರಹಿಸಿದೆ. ಸೇನೆಯ ಜಿಲ್ಲಾ ಘಟಕದ ಪದಾಧಿಕಾರಿಗಳು ನಗರದಲ್ಲಿ ಬೀದರ್ ಮಹಾನಗರ ಪಾಲಿಕೆಯ ಆಯುಕ್ತರಿಗೆ ಬರೆದ ಮನವಿ ಪತ್ರವನ್ನು ಮಹಾನಗರ ಪಾಲಿಕೆ ಅಧಿಕಾರಿಗೆ ಸಲ್ಲಿಸಿದರು.

ಬ್ರಿಮ್ಸ್ ಆಸ್ಪತ್ರೆ ಸಮೀಪದ ಇಂದಿರಾ ಕ್ಯಾಂಟೀನ್ ಹತ್ತಿರ ಆಸ್ಪತ್ರೆ ಸಿಬ್ಬಂದಿ ಸಿರಿಂಜ್, ಇಂಜಕ್ಷನ್, ಬಾಟಲಿ ಹಾಗೂ ಕಸ ತಂದು ಬೀಸಾಡುತ್ತಿದ್ದು, ದನ ಕರುಗಳು ತ್ಯಾಜ್ಯ ವಸ್ತು ತಿಂದು ಸಂಕಷ್ಟಕ್ಕೆ ಒಳಗಾಗುತ್ತಿವೆ. ಸಾರ್ವಜನಿಕರಿಗೂ ತೊಂದರೆಯಾಗುತ್ತಿದೆ ಎಂದು ಸೇನೆಯ ಜಿಲ್ಲಾ ಘಟಕದ ಅಧ್ಯಕ್ಷ ಗಣೇಶ ಪಾಟೀಲ ಜ್ಯಾಂತಿ ಗಮನ ಸೆಳೆದರು. ಕೇಂದ್ರ ಬಸ್ ನಿಲ್ದಾಣ, ಹಳೆಯ ಬಸ್ ನಿಲ್ದಾಣ, ನಾವದಗೇರಿ ಹಾಗೂ ನಗರದ ವಿವಿಧ ಬಡಾವಣೆಗಳಲ್ಲಿ ರಸ್ತೆ ಬದಿಯ ಚರಂಡಿಗಳು ತುಂಬಿ ತುಳುಕುತ್ತಿವೆ. ಕಲುಷಿತ ನೀರಿನ ಹೊಸಲು ವಾಸನೆಯಿಂದ ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಇದೆ ಎಂದು ಹೇಳಿದರು. ಬೀದರ್ ನಗರವು ಮಹಾನಗರವಾಗಿ ಮೇಲ್ದರ್ಜೆಗೆ ಏರಿದ ನಂತರ ನಗರದಲ್ಲಿ ಮೂಲಸೌಕರ್ಯ ಸುಧಾರಣೆ ಆಗಬಹುದು ಎಂದು ಜನ ನಿರೀಕ್ಷಿಸಿದ್ದರು. ಆದರೆ, ಹಾಗೆ ಆಗಿಲ್ಲ ಎಂದು ತಿಳಿಸಿದರು.

### ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ

• **ಉದಯವಾಹಿನಿ ದಾಂಡೇಲಿ**

ನಗರದ ವಿದ್ಯುತ್ ಸರಬರಾಜು 11 ಕೆವಿ ಮಾರ್ಗದ ತುರ್ತು ನಿರ್ವಹಣಾ ಕೆಲಸ ಇರುವುದರಿಂದ ಫೆ.25 ರಂದು ನಗರದ ವಿವಿಧಡೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಹೆಸ್ಕಾಂ ತಿಳಿಸಿದೆ. ಬೆಳಗ್ಗೆ 9.30 ರಿಂದ ಸಂಜೆ 6 ಗಂಟೆಯವರೆಗೆ ಅಂಬೇವಾಡಿ, ಇಂಡಸ್ಟ್ರಿಯಲ್ ಏರಿಯಾ, ಗಣೇಶನಗರ, ಸಾಯಿನಗರ, ಮಾರುತಿನಗರ, ಗಾಂಧಿನಗರ, 14 ಬ್ಲಾಕ್, ಗೌಂಟನ್, ಟೌನ್‌ಶಿಪ್, ವನಶ್ರೀನಗರ, ವಿಜಯನಗರ, ಈಡಬ್ಲ್ಯುಎಸ್, ಕೆಎಚ್‌ಬಿ ಕಾಲೊನಿ, ಬಸವೇಶ್ವರ ನಗರ, ಸುಭಾಸ್ ನಗರ, ಅಜಾದ್ ನಗರ, ಜೆ.ಎನ್ ರೋಡ್, ಬಾಂಬೆ ಚಾಳ, ಸೊಮನಿ ಸರ್ಕಲ್ ಹಾಗೂ ರವಿವಾರ ಪೇಟೆ ಸೇರಿದಂತೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಹೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ತಂಬಾಕು ಬೆಳೆಗಾರರ ಹಿತ ಕಾಪಾಡಲು ಮನವಿ

• **ಉದಯವಾಹಿನಿ ಕೊಣನೂರು**

ತಂಬಾಕು ಬೆಲೆ ಕುಸಿದಿರುವ ಕುರಿತು ಶೀಘ್ರದಲ್ಲಿ ಸಭೆ ನಡೆಸಿ ತಂಬಾಕು ಬೆಳೆಗಾರರ ಹಿತ ಕಾಪಾಡುವಂತೆ ರೈತ ಸಂಘದ ಅಧ್ಯಕ್ಷ ಎಚ್.ಎಸ್ ಭುವನೇಶ್ ನೇತೃತ್ವದಲ್ಲಿ ರೈತ ಸಂಘಟನೆ ಕಾರ್ಯಕರ್ತರು ಮಾರುಕಟ್ಟೆ ಅಧೀಕ್ಷಕಿ ಸವಿತಾರಿಗೆ ಮನವಿ ಸಲ್ಲಿಸಿದರು. ರೈತ ಸಂಘ ಹಾಗೂ ಹಸಿರು ಸೇನೆ(ಪ್ರೊ.ನಂಜುಡಸ್ವಾಮಿ ಬಣದ ಅಧ್ಯಕ್ಷ) ಎಚ್.ಎಸ್ ಭುವನೇಶ್ ನೇತೃತ್ವದಲ್ಲಿ ರೈತ ಸಂಘಟನೆ ಕಾರ್ಯಕರ್ತರು, ರಾಮನಾಥಪುರ ತಂಬಾಕು ಮಾರುಕಟ್ಟೆಯಲ್ಲಿ ಕೇಂದ್ರ ಬಜೆಟ್ ಮಂಡನೆ ನಂತರ ತಂಬಾಕು ಮಾರುಕಟ್ಟೆಯಲ್ಲಿ ದಿಢೀರ್ ಬೆಲೆ ಕುಸಿತಗೊಂಡಿರುವುದನ್ನು ವಿರೋಧಿಸಿದರು.

ಈ ಹಿಂದೆ ಪ್ರತಿ ಕೆ.ಜಿ ತಂಬಾಕಿಗೆ ಸರಾಸರಿ ರೂ. 320ರಷ್ಟಿದ್ದ ಬೆಲೆ, ಪ್ರಸ್ತುತ ರೂ.240 ರಿಂದ ರೂ.260ಕ್ಕೆ ಕುಸಿದಿದೆ. ಇದರಿಂದ ಬೆಳೆಗಾರರು ನಷ್ಟ ಅನುಭವಿಸುವ ಭೀತಿಯಲ್ಲಿದ್ದಾರೆ. ಬೆಲೆ ಕುಸಿತದ ಹಿನ್ನೆಲೆಯಲ್ಲಿ ಜನಪ್ರತಿನಿಧಿಗಳು, ಶಾಸಕರು, ಸಂಸದರು, ವರ್ತಕರು ಮತ್ತು ರೈತ ಮುಖಂಡರ ಸಮ್ಮುಖದಲ್ಲಿ ತುರ್ತು ಸಭೆ ನಡೆಸಬೇಕು ಎಂದು ರೈತ ಸಂಘದವರು ಒತ್ತಾಯಿಸಿದರು. ತಂಬಾಕು ಮಂಡಳಿಯ ಪ್ರಾದೇಶಿಕ ವ್ಯವಸ್ಥಾಪಕರು ಈ ವಿಚಾರವಾಗಿ ಗಮನ ಹರಿಸಿ, ಬರುವ ಸದ್ಯದಲ್ಲೇ ಬೆಲೆ ಕುಸಿತದ ಕುರಿತು ಚರ್ಚಿಸಲು ಸಭೆ ಕರೆಯಬೇಕೆಂದು ಸಂಘವು ಮನವಿಯಲ್ಲಿ ತಿಳಿಸಿದೆ. ಕೇಂದ್ರ ಬಜೆಟ್ ನಂತರ ಮಾರುಕಟ್ಟೆಯಲ್ಲಿ ಹೊಗೆಸೊಪ್ಪು ಬೆಲೆ ಕುಸಿದಿರುವುದು ರೈತರ ಅಸಮಾಧನಕ್ಕೆ ಕಾರಣವಾಗಿದೆ. ಜಿಲ್ಲಾಡಳಿತ ಕೂಡಲೇ ಮಧ್ಯಪ್ರವೇಶಿಸಿ ರೈತರಿಗೆ ನ್ಯಾಯೋಚಿತ ಬೆಲೆ ಸಿಗುವಂತೆ ಮಾಡಬೇಕು ಎಂದು ಒತ್ತಾಯಿಸಿದೆ.

### ಜಾಲಿಕಟ್ಟೆ ನೀರು ಮಲಿನ

• **ಉದಯವಾಹಿನಿ ಹಳೇಬೀಡು**

ಜಾನುವಾರುಗಳಿಗೆ ನೀರು ಕುಡಿಸುವುದಕ್ಕಾಗಿ ನಿರ್ಮಿಸಿರುವ ಘಟ್ಟದಹಳ್ಳಿಯ ಜಾಲಿಕಟ್ಟೆ, ಶುಭ ಕಾರ್ಯಗಳ ಊಟ, ಉಪಾಹಾರದ ತ್ಯಾಜ್ಯದಿಂದ ನಲುಗಿದೆ. ಜಾಲಿ ಕಟ್ಟೆಯಲ್ಲಿ ಶುದ್ಧವಾದ ನೀರು ಸಂಗ್ರಹವಾಗುತ್ತದೆ. ನೀರು ತಾಜಾತನ ಕಳೆದುಕೊಳ್ಳುವುದಿಲ್ಲ. ಕಟ್ಟೆಗೆ ಕೆಸರಿನ ರಾಡಿ, ಮಣ್ಣು ಸೇರಿಕೊಳ್ಳದೇ ನೀರಿನ ನೈಜ ಬಣ್ಣ ಸದಾಕಾಲ ಇರುತ್ತದೆ. ಹಿಂದೆ ವಾಹನ ಸೌಲಭ್ಯ ಇಲ್ಲದ ಕಾಲದಲ್ಲಿ ಕಾಲ್ನಡಿಗೆಯಲ್ಲಿ ಪ್ರಯಾಣಿಸುತ್ತಿದ್ದ ಜನರು, ಜಾಲಿಕಟ್ಟೆಯ ನೀರು ಕುಡಿದು ಬಾಯಾರಿಕೆ ನಿವಾರಿಸಿಕೊಂಡು ಪ್ರಯಾಣ ಮುಂದುವರಿಸುತ್ತಿದ್ದರು. ಕಟ್ಟೆ ಬಳಿಯ ಜಮೀನಿನಲ್ಲಿ ಕೆಲಸ ಮಾಡುವವರು ಊಟ, ಉಪಾಹಾರದ ಬುತ್ತಿ ಜೊತೆ ಕುಡಿಯಲು ನೀರು ತರುತ್ತಿರಲಿಲ್ಲ. ಆಹಾರ ಸೇವನೆಯ ನಂತರ ಕಟ್ಟೆಯ ನೀರು ಕುಡಿಯುತ್ತಿದ್ದರು. ತಾಜಾತನದ ಜೊತೆಗೆ ನೀರು ಸಿಹಿಯಾಗಿದ್ದರಿಂದ ಬೆಳೆ, ಕಾಳು ಬೇಯಿಸುವುದಕ್ಕೂ ಮನೆಗೆ ಬಿಂದಿಗೆಯಲ್ಲಿ ತೆಗೆದುಕೊಂಡು ಹೋಗುತ್ತಿದ್ದರು ಎಂಬುದನ್ನು ಘಟ್ಟದಹಳ್ಳಿ ಭಾಗದ ಹಿರಿಯರು ನೆನಪಿಸಿಕೊಳ್ಳುತ್ತಾರೆ.

ಶುದ್ಧತೆಗೆ ಹೆಸರಾಗಿದ್ದ ಜಾಲಿಕಟ್ಟೆಯ ನೀರು, ಮಲೀನವಾಗುವ ಸ್ಥಿತಿಗೆ ತಲುಪಿದೆ. ವಿವಾಹ, ಗೃಹ ಪ್ರವೇಶ ಮೊದಲಾದ ಶುಭ ಕಾರ್ಯ ನಡೆಸಿದವರು, ಊಟದ ನಂತರ ಬರುವ ತ್ಯಾಜ್ಯ ವಿಲೇವಾರಿ ಮಾಡುವ ಸ್ಥಳವಾಗಿ ಜಾಲಿಕಟ್ಟೆ ಪರಿವರ್ತನೆಯಾಗಿದೆ. ಕಟ್ಟೆ ಪಕ್ಕದಲ್ಲಿ ಹಾಕುವ ಉಳಿದ ಆಹಾರ ಪದಾರ್ಥ ಕಾಲಕ್ರಮೇಣ ಕೊಳೆತು ನೀರು ಸೇರಿ ಕಲುಷಿತವಾಗುವ ಸಾಧ್ಯತೆ ಇದೆ. ಊಟದ ಟೇಬಲ್‌ಗೆ ಹಾಸುವ ಪೇಪರ್, ವಿವಿಧ ಸಾಮಗ್ರಿಗಳಿಂದ ತೆಗೆದ ಪ್ಯಾಕಿಂಗ್ ಕವರ್ ಹಾಗೂ ಕುಡಿಯುವ ನೀರಿನ ಪ್ಲಾಸ್ಟಿಕ್ ಬಾಟಲಿಗಳು ಕಟ್ಟೆ ನೀರಿನಲ್ಲಿ ಸೇರುತ್ತಿವೆ. ಜನರು ಜಾಗೃತರಾಗಿ ತ್ಯಾಜ್ಯ ಹಾಕುವುದನ್ನು ನಿಲ್ಲಿಸದಿದ್ದರೆ, ಜಾನುವಾರು ನೀರು ಕುಡಿಯುವ ಕಟ್ಟೆ, ತ್ಯಾಜ್ಯದ ಗುಂಡಿ ಆಗುತ್ತದೆ ಎಂಬ ಆತಂಕದ ನುಡಿ ರೈತ ಸಂತೋಷ್ ಅವರಿಂದ ಕೇಳಿ ಬಂತು.

### ಕಳವು ಪ್ರಕರಣ ಭೇದಿಸಿದ ಪೊಲೀಸರು

• **ಉದಯವಾಹಿನಿ ಗಜೇಂದ್ರಗಡ**

ಪಟ್ಟಣದ ಟಗರಗಲ್ಲಿಯಲ್ಲಿ ಇತ್ತೀಚೆಗೆ ಮನೆಯಲ್ಲಿ ನಡೆದ ಕಳವು ಪ್ರಕರಣವನ್ನು ಸ್ಥಳೀಯ ಪೊಲೀಸರು ಭೇದಿಸಿದ್ದು, ಮೂವರು ಆರೋಪಿಗಳನ್ನು ವಶಕ್ಕೆ ಪಡೆದು, ಅವರಿಂದ ಒಟ್ಟು ರೂ. 4,50,568 ಮೌಲ್ಯದ 78.730 ಗ್ರಾಂ ಚಿನ್ನ, 711.47 ಗ್ರಾಂ ಬೆಳ್ಳಿ ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆ. ಪಟ್ಟಣದ ಟಗರಗಲ್ಲಿಯಲ್ಲಿ ಫೆ.17ರ ರಾತ್ರಿ 11.45 ರಿಂದ ಫೆ.18ರ ಬೆಳಗಿನ 6.30ರ ನಡುವೆ ಬಾಷಾಸಾಬ ಡಾಲಾಯತ ಎಂಬುವವರ ಮನೆಯಲ್ಲಿ ಕಳ್ಳತನ ನಡೆದಿತ್ತು. ಈ ಕುರಿತು ಗಜೇಂದ್ರಗಡ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ, ಡಿ.ಎಸ್.ಪಿ ಪ್ರಭುಗೌಡ ಕಿರೇದಳ್ಳಿ ಮಾರ್ಗದರ್ಶನ, ರೋಣ ಸಿಪಿಐ ವಿಜಯಕುಮಾರ ನೇತೃತ್ವದಲ್ಲಿ ಗಜೇಂದ್ರಗಡ ಠಾಣೆಯ ಪಿಎಸ್ಐ ಪ್ರಕಾಶ ಡಿ, ಸಿಬ್ಬಂದಿಗಳಾದ ಜೆ.ಬಿ.ಪೂಜಾರ, ಎಂ.ಎಂ.ಶಿಗೀಹಳ್ಳಿ, ಸದಾಶಿವ ಕದಂ, ಎಂ.ಕೆ.ಮುನೇನಕೊಪ್ಪ, ಎಸ್.ಎ.ಖಾಜಿ, ಒಳಗೊಂಡ ತಂಡ ರಚಿಸಲಾಗಿತ್ತು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 01:30 ರಿಂದ 03:00 |
| ಗುಳಿಕ ಕಾಲ | ಬೆಳಿಗ್ಗೆ | 09:00 ರಿಂದ 10:30 |
| ಯಮಗಂಡ ಕಾಲ | ಬೆಳಿಗ್ಗೆ | 06:00 ರಿಂದ 07:30 |

**ಮೇಷ** ನೀವು ಶಾಂತಿಯನ್ನು ಪಡೆಯುವ ಸ್ಥಳದಲ್ಲಿ ಕಳೆಯಲು ಇಷ್ಟಪಡುತ್ತೀರಿ. ನಿಮ್ಮ ಸಂಗಾತಿಯು ಕೆಲವು ಕುಖ್ಯಾತ ವಿಷಯಗಳ ಜೊತೆಗೆ ನಿಮ್ಮ ಹದಿಹರೆಯದ ದಿನಗಳನ್ನು ನೆನಪಿಸುತ್ತಾರೆ.

**ವೃಷಭ** ನಿಮ್ಮ ಸಭ್ಯ ನಡವಳಿಕೆ ಮೆಚ್ಚುಗೆ ಪಡೆಯುತ್ತದೆ. ಅನೇಕ ಜನರು ನಿಮ್ಮನ್ನು ಹೊಗಳುತ್ತಾರೆ. ಇಂದು ನೀವು ನಿಮ್ಮ ಮನೆಯ ಸದಸ್ಯರನ್ನು ಎಲ್ಲಿಗಾದರೂ ಸುತ್ತಾಡಲು ಕರೆದುಕೊಂಡು ಹೋಗಬಹುದು.

**ಮಿಥುನ** ನೀವು ಕೆಲವು ಆಘಾತಗಳನ್ನು ಎದುರಿಸುವುದರಿಂದ ನೀವು ಬಹಳ ಧೈರ್ಯ ಹಾಗೂ ಶಕ್ತಿಯನ್ನು ಪ್ರದರ್ಶಿಸುವ ಅಗತ್ಯವಿದೆ. ನೀವು ನಿಮ್ಮ ಆಶಾವಾದಿ ನಿಲುವಿನಿಂದ ಇವುಗಳಿಂದ ಸುಲಭವಾಗಿ ಹೊರಬರುತ್ತೀರಿ.

**ಕರ್ಕಾಟಕ** ನಿಮ್ಮ ಗೌಪ್ಯ ಮಾಹಿತಿಯನ್ನು ನಿಮ್ಮ ಸಂಗಾತಿಯ ಜೊತೆ ಹಂಚಿಕೊಳ್ಳುವ ಮೊದಲು ಯೋಚಿಸಿ. ಅವಳು ಅದನ್ನು ಬೇರೆಯವರಿಗೆ ಹೇಳಬಹುದಾದ್ದರಿಂದ ಸಾಧ್ಯವಾದರೆ ಅದನ್ನು ತಪ್ಪಿಸಲು ಪ್ರಯತ್ನಿಸಿ.

**ಸಿಂಹ** ಸಾಮಾಜಿಕ ಸಮಾರಂಭಗಳು ಪ್ರಭಾವಿ, ಪ್ರಮುಖ ಜನರೊಡನೆ ನಿಮ್ಮ ಬಾಂಧವ್ಯವನ್ನು ಸುಧಾರಿಸಲು ಒಂದು ಪರಿಪೂರ್ಣ ಅವಕಾಶವಾಗಿರುತ್ತದೆ. ನಿಮ್ಮ ಪ್ರೀತಿ ಒಂದು ಹೊಸ ಎತ್ತರವನ್ನು ತಲುಪುತ್ತದೆ.

**ಕನ್ಯಾ** ನಿಮ್ಮ ಬಗ್ಗೆ ನಿಮಗೇ ಉತ್ತಮ ಅಭಿಪ್ರಾಯ ಬರಲು ಕೆಲಸಗಳನ್ನು ಮಾಡಲು ಒಂದು ಅದ್ಭುತ ದಿನ. ಹಣದ ಲಾಭ ನಿಮ್ಮ ನಿರೀಕ್ಷೆಯಂತೆ ಬರುವುದಿಲ್ಲ. ಪ್ರೀತಿ- ಸಾಂಗತ್ಯ ಮತ್ತು ಬಂಧ ಏರಿಕೆಯಲ್ಲಿರುತ್ತವೆ.

**ತುಲಾ** ನಿಮ್ಮ ಮನಸ್ಥಿತಿಯನ್ನು ಬದಲಾಯಿಸಲು ಯಾವುದಾದರೂ ಸಾಮಾಜಿಕ ಸಭೆಗೆ ಹಾಜರಾಗಿ. ಇಂದಿನವರೆಗೂ ಹಣವನ್ನು ಯೋಚಿಸದೆ ಖರ್ಚು ಮಾಡುತ್ತಿದ್ದ ಜನರು, ಅವರಿಗೆ ಹಣದ ತುಂಬಾ ಅಗತ್ಯ ವಿರಬಹುದು.

**ವೃಶ್ಚಿಕ** ಹಳೆಯ ಸ್ನೇಹಿತರ ಜೊತೆಗಿನ ಒಂದು ಪುನರ್ಮಿಲನ ನಿಮ್ಮನ್ನು ಚೇತೋಹಾರಿಯಾಗಿರಿಸುತ್ತದೆ. ವ್ಯಾಪಾರದಲ್ಲಿ ಪ್ರಯೋಜನ ಇಂದು ಅನೇಕ ವ್ಯಾಪಾರಿಗಳ ಮುಖದಮೇಲೆ ಸಂತೋಷವನ್ನು ತರಬಹುದು.

**ಧನಸ್ಸು** ನಾಳೆ ಬಹಳ ತಡವಾಗುವುದರಿಂದ ನೀವು ನಿಮ್ಮ ಪ್ರಿಯತಮೆಗೆ ನಿಮ್ಮ ಸಂದೇಶವನ್ನು ಕೂಡಲೇ ತಿಳಿಸಬೇಕು. ಪ್ರಮುಖ ಜನರೊಡನೆ ಮಾತನಾಡುವಾಗ ನಿಮ್ಮ ಕಿವಿ ಮತ್ತು ಕಣ್ಣುಗಳನ್ನು ತೆರೆದಿಡಿ.

**ಮಕರ** ನಿಮ್ಮ ಸಕಾಲಿಕ ಸಹಾಯ ಯಾರಾದರೊಬ್ಬರ ದೌರ್ಭಾಗ್ಯವನ್ನು ನಿವಾರಿಸುತ್ತದೆ. ನಿಮ್ಮ ಸಂಪೂರ್ಣ ಹಾಗೂ ಪ್ರಶ್ನಾತೀತ ಪ್ರೀತಿ ಒಂದು ಜಾದುವಿನಂಥ ಸೃಜನಶೀಲ ಶಕ್ತಿಯನ್ನು ಹೊಂದಿದೆ.

**ಕುಂಭ** ನಿಮ್ಮ ಇತರರನ್ನು ಶ್ಲಾಘಿಸುವ ಮೂಲಕ ಅವರ ಯಶಸ್ಸನ್ನು ಆನಂದಿಸುವ ಸಾಧ್ಯತೆಗಳಿವೆ. ಇನ್ನೂ ಸಂಬಳ ಪಡೆಯದವರು, ಇಂದು ಅವರು ಹಣಕ್ಕಾಗಿ ತುಂಬಾ ಚಿಂತೆ ಮಾಡಬಹುದು.

**ಮೀನ** ಒತ್ತಡದ ದಿನದ ಹೊರತಾಗಿಯೂ ಆರೋಗ್ಯ ಪರಿಪೂರ್ಣವಾಗಿರುತ್ತದೆ. ದಿನದಲ್ಲಿ ನಂತರ ಹಣಕಾಸು ಪರಿಸ್ಥಿತಿಗಳು ಸುಧಾರಿಸುತ್ತವೆ. ನಿಮ್ಮ ಮನೆಯಲ್ಲಿ ಸ್ವಲ್ಪ ಸ್ವಚ್ಛತಾ ಕಾರ್ಯವನ್ನು ತಕ್ಷಣ ಕೈಗೊಳ್ಳಬೇಕು.

### ಶಿಗ್ಗಾವಿ ಕ್ಷೇತ್ರದ ನೀರಿನ ಸಮಸ್ಯೆ ಪರಿಶೀಲಿಸಿದ ಶಾಸಕ: ಮುಂಜಾಗ್ರತಾ ಕ್ರಮಕ್ಕೆ ಪಠಾಣ ಸೂಚನೆ

# ಕುಡಿಯುವ ನೀರು: ಹೆಸ್ಕಾಂ ವಿರುದ್ಧ ಎಫ್‌ಐಆರ್: ಶಾಸಕ

• ಉದಯವಾಹಿನಿ, ಶಿಗ್ಗಾವಿ

ಬೇಸಿಗೆ ಆರಂಭವಾಗುತ್ತಿದ್ದು, ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಅಗತ್ಯವಿರುವ ಕಡೆಗಳಲ್ಲಿ ಕೊಳವೆ ಬಾವಿ ವ್ಯವಸ್ಥೆ ಮಾಡಿಕೊಳ್ಳಬೇಕು. ವಿದ್ಯುತ್ ಸಂಪರ್ಕ ನೀಡಲು ನಿರಾಕರಿಸುವ ಹಾಗೂ ಕುಡಿಯುವ ನೀರು ನೀಡುವಲ್ಲಿ ಏನಾದರೂ ಸಮಸ್ಯೆ ಮಾಡಿದರೆ, ತಪ್ಪಿತಸ್ಥ ಹೆಸ್ಕಾಂ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಬೇಕು. ಈ ಬಗ್ಗೆ ಸಿಪಿಐ ಜೊತೆ ನಾನೇ ಮಾತನಾಡುತ್ತೇನೆ ಎಂದು ಶಾಸಕ ಯಾಸೀರ್ ಅಹ್ಮದ್ ಖಾನ್ ಪಠಾಣ ಅವರು ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದರು. ಪಟ್ಟಣದ ಬಿ.ಆರ್. ಅಂಬೇಡ್ಕರ ಸಂಕೀರ್ಣದಲ್ಲಿ ನಡೆದ, ಶಿಗ್ಗಾವಿ ಹಾಗೂ ಸವಣೂರ ತಾಲ್ಲೂಕಿನ ವಿವಿಧ ಇಲಾಖೆಗಳ ಅಧಿಕಾರಿಗಳ ತಾಲ್ಲೂಕು ಮಟ್ಟದ ಕುಡಿಯುವ ನೀರಿನ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

**ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ**

ಬೇಸಿಗೆಯಲ್ಲಿ ಯಾವ ಗ್ರಾಮಗಳಲ್ಲಿ ನೀರಿನ ಸಮಸ್ಯೆ ಉಂಟಾಗುತ್ತದೆ ಎಂಬುದನ್ನು ಮೊದಲೇ ಪಟ್ಟಿ ಮಾಡಿಕೊಳ್ಳಬೇಕು. ಕೊಳವೆ ಬಾವಿಗಳ ಸ್ಥಿತಿಗತಿ ಪರಿಶೀಲಿಸಬೇಕು. ಹಾಳಾದ ಕೊಳವೆ ಬಾವಿಗಳನ್ನು ದುರಸ್ತಿ ಮಾಡಿಸಬೇಕು. ಕುಡಿಯುವ ನೀರಿನ ವಿಚಾರದಲ್ಲಿ ವಿಳಂಬ ಮಾಡಬಾರದು. ಗ್ರಾಮ ಪಂಚಾಯಿತಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ತ್ವರಿತ ಕೆಲಸ ಮಾಡಿ, ಜನರಿಗೆ ನೀರು ಕೊಡಬೇಕು ಎಂದು ಹೇಳಿದರು. ನಗರ ಮತ್ತು ಗ್ರಾಮೀಣ ಪ್ರದೇಶದ ಜನರಿಗೆ, ಜಾನುವಾರುಗಳಿಗೆ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಉಂಟಾಗಬಹುದು. ಹೀಗಾಗಿ, ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಮುಂಜಾಗ್ರತೆ ವಹಿಸುವ ಮೂಲಕ ಬೇಸಿಗೆಯಲ್ಲಿ ಕುಡಿಯುವ ನೀರಿನ ಅಭಾವ ತಡೆಯಬೇಕು ಎಂದರು.

> ಜನರಿಗೆ ಕುಡಿಯುವ ನೀರು ಒದಗಿಸುವಲ್ಲಿ ಅಧಿಕಾರಿಗಳು ಕಾಲಹರಣ ಮಾಡಬಾರದು. ಕುಂಟ ನೆಪವೂ ನಡೆಯುವುದಿಲ್ಲ. ಅಧಿಕಾರಿಗಳು ಎಚ್ಚರಿಕೆಯಿಂದ ಕೆಲಸ ಮಾಡಿ ಜನರಿಗೆ ನೀರು ನೀಡಬೇಕು.
> – ಯಾಸೀರ್ ಅಹ್ಮದ ಖಾನ್ ಪಠಾಣ ಶಾಸಕ



ಉದಯವಾಹಿನಿ ಚಿತ್ರ

**ಗುತ್ತಿಗೆದಾರರ ನಿರ್ಲಕ್ಷ್ಯ...!**

**ಕಾರ್ಖಾನೆಗೆ ಕೇವಲ 9 ಲಕ್ಷ ತೆರಿಗೆಯೇ, ಶಿಗ್ಗಾವಿ ತಾಲ್ಲೂಕಿನ ಕೋಣನಕೇರಿ ರಸ್ತೆಯಲ್ಲಿ ವಿ.ಐ.ಎನ್.ಪಿ ಡಿಸ್ಟಿಲರೀಸ್ ಮತ್ತು ಶುಗರ್ಸ್ ಕಂಪನಿಯವರು ವಾಣಿಜ್ಯ ಚಟುವಟಿಕೆ ನಡೆಸಿ ನೂರಾರು ಕೋಟಿ ರೂಪಾಯಿ ಲಾಭ ಮಾಡುತ್ತಿದ್ದಾರೆ. ಅವರಿಗೆ ಕೇವಲ ರೂ. 9 ಲಕ್ಷ ತೆರಿಗೆಯೇ ರೂ. ಸೂಕ್ತ ರೀತಿಯಲ್ಲಿ ಪರಿಶೀಲಿಸಿ ತೆರಿಗೆ ನಿಗದಿಪಡಿಸಬೇಕು ಎಂದು ಶಾಸಕ ಯಾಸೀರ್ ಅಹ್ಮದ್ ಖಾನ್ ಪಠಾಣ ತಿಳಿಸಿದರು. ಕೋಣನಕೇರಿ ಗ್ರಾ.ಪಂ. ಅಧಿಕಾರಿ ನೀಡಿದ ಮಾಹಿತಿಗೆ ಪ್ರತಿಕ್ರಿಯಿಸಿದ ಪಠಾಣ ನಿಮ್ಮದು ತೆರಿಗೆ ವಸೂಲಿ ಹೆಚ್ಚಿರುವ ಪಂಚಾಯಿತಿ, ಕುಡಿಯುವ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಿ. ತೆರಿಗೆ ವಸೂಲಿ ಮಾಡುವಾಗ ಬಡವರ ಮೇಲೆ ಪ್ರಹಾರ ಮಾಡಬೇಡಿ. ವಾಣಿಜ್ಯ ಚಟುವಟಿಕೆ ಮಾಡಿ ಲಾಭ ಮಾಡಿಕೊಳ್ಳುತ್ತಿರುವ ಶ್ರೀಮಂತರಿಂದ ಮೊದಲು ತೆರಿಗೆ ವಸೂಲಿ ಮಾಡಿ ಎಂದು ತಾಕೀತು ಮಾಡಿದರು. ಕ್ಷೇತ್ರದಲ್ಲಿ ಹಲವರು ಪವನ್ ವಿದ್ಯುತ್ ಫ್ಯಾನ್‌ಗಳನ್ನು ಹಾಕಿದ್ದಾರೆ. ಲಾಭ ಮಾಡಿಕೊಳ್ಳುತ್ತಿದ್ದಾರೆ. ಅವರೆಲ್ಲರಿಗೂ ಕಾನೂನು ಪ್ರಕಾರ ತೆರಿಗೆ ವಿಧಿಸಿ ವಸೂಲಿ ಮಾಡಿ ಎಂದರು.**

**ರಸ್ತೆ, ಚರಂಡಿಗೆ ನನ್ನ ಅನುದಾನ ಬಳಕೆ:** ರಸ್ತೆ, ಚರಂಡಿ ಸೇರಿದಂತೆ ವಿವಿಧ ಕಾಮಗಾರಿಗಳನ್ನು ನನ್ನ ಅನುದಾನದಲ್ಲಿ ಮಾಡಲು ಕ್ರಮ ಕೈಗೊಳ್ಳುತ್ತೇನೆ. ಗ್ರಾಮ ಪಂಚಾಯಿತಿಯವರು ತಮ್ಮಲ್ಲಿ ಲಭ್ಯವಿರುವ ಅನುದಾನವನ್ನು ಕುಡಿಯುವ ನೀರಿನ ನಿರ್ವಹಣೆಗಾಗಿ ತುರ್ತಾಗಿ ಬಳಕೆ ಮಾಡಿ. ಅದಕ್ಕೆ ಯಾವುದೇ ಅನುಮತಿ ಅವಶ್ಯವಿಲ್ಲ ಎಂದು ಪಠಾಣ ಹೇಳಿದರು. ಶಾಲೆಗಳಲ್ಲಿಯೂ ನೀರಿನ ಸಮಸ್ಯೆಯಾಗಂತೆ ನೋಡಿಕೊಳ್ಳಬೇಕು. ಹೆಸ್ಕಾಂ ಅಧಿಕಾರಿಗಳು, ಅವಶ್ಯವಿರುವ ಕಡೆ ಟ್ರಾನ್ಸ್‌ಫಾರ್ಮರ್‌ಗಳ ಜೋಡಣೆ ಮಾಡಬೇಕು. ವಿದ್ಯುತ್ ಸರಬರಾಜಿನಲ್ಲಿ ಯಾವುದೇ ಕೊರತೆಯಾಗದಂತೆ ನೋಡಿಕೊಳ್ಳಬೇಕು. ಕುಡಿಯುವ ನೀರಿನ ವಿಚಾರವಾಗಿ ಸಾರ್ವಜನಿಕರಿಂದ ಯಾವುದಾದರೂ ದೂರು ಬಂದರೆ, ಅದು ನಿಜವಾಗಿದ್ದರೆ ಸಂಬಂಧಿಸಿದ ಅಧಿಕಾರಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

**ಕಾಂಗ್ರೆಸ್ ಅಧ್ಯಕ್ಷನ ಕಾರುಬಾರು**

ನೀರಿನ ಬಗ್ಗೆ ಚರ್ಚಿಸಲು ನಡೆದ ಸರ್ಕಾರದ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಶಿಗ್ಗಾವಿ ತಾಲ್ಲೂಕು ಘಟಕದ ಅಧ್ಯಕ್ಷ ಗುಡ್ಡಪ್ಪ ಜಲ್ಲಿ ಅವರ ಕಾರುಬಾರು ಜೋರಾಗಿತ್ತು. ಶಾಸಕ ಹಾಗೂ ಅಧಿಕಾರಿಗಳ ಪಕ್ಕದಲ್ಲಿ ವೇದಿಕೆಯಲ್ಲಿಯೇ ಕುಳಿತಿದ್ದ ಗುಡ್ಡಪ್ಪ ಅವರ ನಡೆಗೆ ಖುದ್ದು ಅಧಿಕಾರಿಗಳೇ ಆಕ್ರೋಶ ಹೊರಹಾಕಿದ್ದಾರೆ. ಶಾಸಕರ ಜೊತೆಗೆ ಗುಡ್ಡಪ್ಪ ಸೇರಿ ಕಾಂಗ್ರೆಸ್ ಪಕ್ಷದ ಎಲ್ಲಾ ಮುಖಂಡರು ಓಡಾಡುತ್ತಾರೆ. ಸಭೆಗೂ ಬಂದು ವೇದಿಕೆಯಲ್ಲಿಯೇ ಕುಳಿತು ಯಾವುದೇ ಅಧಿಕಾರ ಇಲ್ಲದಿದ್ದರೂ ಅಧಿಕಾರಿಗಳ ವಿರುದ್ಧ ಮಾತನಾಡುತ್ತಾರೆ ಎಂದು ಅಧಿಕಾರಿಯೊಬ್ಬರು ಹೇಳಿದರು. ಸರ್ಕಾರಿ ಸಭೆಯಲ್ಲಿ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಮಾತ್ರ ಇರಬೇಕು. ಆದರೆ ಶಾಸಕರೇ ಅವರ ಪಕ್ಕದಲ್ಲಿ ಕಾಂಗ್ರೆಸ್ ಮುಖಂಡರನ್ನು ಕೂರಿಸಿಕೊಂಡು ಸಭೆ ಮಾಡುತ್ತಾರೆ. ಅದನ್ನು ನೇರವಾಗಿ ಪ್ರಶ್ನಿಸಲು ನಮಗೆ ಭಯವಾಗುತ್ತಿದೆ. ಶಾಸಕರೇ ಬದಲಾಗಬೇಕು. ಸರ್ಕಾರಿ ಸಭೆಯ ಶಿಷ್ಟಾಚಾರದ ಅರಿವು ಅವರಿಗೆ ಇರಬೇಕು ಎಂದು ತಿಳಿಸಿದರು.

## ಪಕ್ಷ ಸಂಘಟನೆ ಬಲವರ್ದಿಸಲು ಚರ್ಚಿಸಿದ ಮಾಜಿ ಸಚಿವ ಶ್ರೀರಾಮುಲು

• ಉದಯವಾಹಿನಿ ಕಾರಟಗಿ

ಬಿಜೆಪಿ ಯುವ ಮುಖಂಡ ಪ್ರಭುರಾಜ್ ಬೂದಿ ಯವರ ಮನೆಗೆ ಆಗಮಿಸಿದ ಶ್ರೀರಾಮುಲು ಕುಶಲೋಪಚಾರ ವಿಚಾರಿಸಿ ಪಾನೀಯ ಉಪಹಾರ ದ ನಂತರ ಅಭಿಮಾನಿಗಳು ಕಾರ್ಯಕರ್ತರು ಮತ್ತು ಕಾರ್ಯಕರ್ತರು ಅಭಿಮಾನಿಗಳು ಪಕ್ಷದ ಮುಖಂಡರು, ಶ್ರೀರಾಮುಲು ಇವರಿಗೆ ಶಾಲು ಹೊದಿಸಿ ಪುಷ್ಪ ಮಾಲೆ ಹಾಕಿ ಅವರಿಗೆ ಸನ್ಮಾನಿಸಿ ಗೌರವಿಸಿದರು.

ಬಳಿಕ ಮಾತನಾಡಿದ ಅವರು ಬಿಜೆಪಿ ಕಾರ್ಯಕರ್ತರು ಜನರ ಮಧ್ಯೆ ಕೆಲಸ ಮಾಡುವ ಮೂಲಕ ಪಕ್ಷದ ಸಂಘಟನೆ ಬಲಪಡಿಸಬೇಕು. ಕೇಂದ್ರದ ಹಾಗೂ ರಾಜ್ಯದಲ್ಲಿ ಬಿಜೆಪಿ ಆಡಳಿತದಲ್ಲಿ ಜಾರಿಗೆ ತರಲಾದ ಜನಪರ ಕಾರ್ಯಕ್ರಮಗಳನ್ನು ನೆನಪು ಮಾಡಿಕೊಡಬೇಕು, 2028ರ ಚುನಾವಣೆಯಲ್ಲಿ ಬಿಜೆಪಿ ರಾಜ್ಯದಲ್ಲಿ ಮತ್ತೆ ಅಧಿಕಾರದ ಗದ್ದುಗೆ ಏರಲಿದೆ. ಅದಕ್ಕೆ ಪೂರಕವಾಗಿ ಕಾರ್ಯಕರ್ತರು. ದಕ್ಷ ಮತ್ತು ಪ್ರಾಮಾಣಿಕವಾಗಿ ಕೆಲಸ ಮಾಡಿ ಜನರ ಕಷ್ಟಗಳಿಗೆ ಸ್ಪಂದಿಸಬೇಕು. ರಾಜ್ಯ ಕಾಂಗ್ರೆಸ್ ಸರಕಾರದ ಜನ ವಿರೋಧಿ ನೀತಿಗಳ ಬಗ್ಗೆ ಜನರ ಗಮನ ಸೆಳೆಯಲು ಕಾರ್ಯಕರ್ತರು ನಿರಂತರ ಚಟುವಟಿಕೆಯೊಂದಿಗೆ ಶ್ರಮಿಸಬೇಕು. ಕೇಂದ್ರದ ನರೇಂದ್ರ ಮೋದಿ ಅವರ ಆಡಳಿತ ದೇಶಕ್ಕೆ ಮಾದರಿಯಾಗಿದೆ. ಕೇಂದ್ರದ ಬಿಜೆಪಿ ನೇತೃತ್ವದ ಸರಕಾರದ ಜನಪರ ಯೋಜನೆಗಳನ್ನು ಮನೆ ಮನೆಗೂ ತಲುಪಿಸುವ ಮೂಲಕ ಪಕ್ಷ ಬಲವರ್ಧನೆಗೆ ಮುಂದಾಗಬೇಕು ಎಂದರು.




ಉದಯವಾಹಿನಿ ಚಿತ್ರ

ಈ ಸಂದರ್ಭದಲ್ಲಿ ಬೂದಿ ಪ್ರಭುರಾಜ್ ನಾಯ್ಕ ಗುರುನ ಗೌಡ ಪಾಟೀಲ್ ದೇವಣ್ಣ ನಾಯಕ ನೆಕ್ಕಂಟಿ ನಾಗರಾಜ್ ದೇವರಾಜ್ ಜೂರಟಗಿ, ಸುರೇಶ್ ಧಡೆಸೂಗೂರು,ಮಂಜುನಾಥ್ ತೊಂಡ್ಯಾಳ್ ಅಂಬರೀಶ್ ನಾಯಕ್, ಶರಣಪ್ಪ ಗದ್ದಿ, ಸೇರಿದಂತೆ ಅನೇಕ ಕಾರ್ಯಕರ್ತರು ಅಭಿಮಾನಿಗಳು ಹಾಗೂ ಪ್ರಭುರಾಜ್ ಬೂದಿ ಅವರ ಕುಟುಂಬ ಮತ್ತಿತರರು ಇದ್ದರು.

## ದ್ವಿತೀಯ ಪಿಯುಸಿ ಪರೀಕ್ಷೆಗೆ ಸಿದ್ಧತೆ ಪೂರ್ಣ: ಜಿಲ್ಲಾಧಿಕಾರಿ

• ಉದಯವಾಹಿನಿ, ಶಿವಮೊಗ್ಗ

ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಫೆ.28 ರಿಂದ ಮಾರ್ಚ್ 17ರ ವರೆಗೆ ಜಿಲ್ಲೆಯ 41 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದೆ. ಪರೀಕ್ಷೆ ಸುಗಮವಾಗಿ ನಡೆಸಲು ಜಿಲ್ಲಾಡಳಿತ ಅಗತ್ಯ ಕ್ರಮ ಕೈಗೊಂಡಿದೆ ಎಂದು ಜಿಲ್ಲಾಧಿಕಾರಿ ಪ್ರಭುಲಿಂಗ ಕವಳಿಕಟ್ಟಿ ತಿಳಿಸಿದರು. ಶಿವಮೊಗ್ಗದಲ್ಲಿ 17, ಭದ್ರಾವತಿಯಲ್ಲಿ ಆರು, ತೀರ್ಥಹಳ್ಳಿ ಮತ್ತು ಹೊಸನಗರದಲ್ಲಿ ತಲಾ ಮೂರು, ಸಾಗರ ಮತ್ತು ಶಿಕಾರಿಪುರದಲ್ಲಿ ತಲಾ ಐದು ಮತ್ತು ಸೊರಬದಲ್ಲಿ ಎರಡು ಪರೀಕ್ಷಾ ಕೇಂದ್ರಗಳು ಸೇರಿ ಜಿಲ್ಲೆಯಲ್ಲಿ ಒಟ್ಟು 41 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿವೆ.



19,009 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದಾರೆ. 7,188 ಬಾಲಕರು, 10,567 ಬಾಲಕಿಯರು ಸೇರಿದಂತೆ ಒಟ್ಟು 17,755 ರೆಗ್ಯೂಲರ್ ವಿದ್ಯಾರ್ಥಿಗಳು, 871 ಪುನರಾವರ್ತಿತ ಅಭ್ಯರ್ಥಿಗಳು, 383 ಖಾಸಗಿ ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ಎಂದರು. ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಸಿಇಒ ಎನ್.ಹೇಮಂತ್ ಮಾತನಾಡಿ, ಪೋಷಕರ ಕೋರಿಕೆಯ ಮೇರೆಗೆ ನಿತ್ಯ ಸಂಜೆ ವಿಶೇಷ ಕಲಿಕಾ ತರಗತಿ ನಡೆಸಲಾಗಿದೆ.

> ಆತಂಕವಿಲ್ಲದೆ ಪರೀಕ್ಷೆ ಬರೆಯುವಂತೆ ಪೋಷಕರು ಮಕ್ಕಳನ್ನು ಪ್ರೇರೇಪಿಸಬೇಕು. ಸಾಮಾಜಿಕ ಜಾಲತಾಣದಲ್ಲಿ ಸೋರಿಕೆಯಾಗುವ ಪ್ರಶ್ನೆಪತ್ರಿಕೆಗಳು ನಕಲಿ ಹಾಗೂ ನಂಬಲರ್ಹವಲ್ಲ. ವಿದ್ಯಾರ್ಥಿಗಳು ವಿಚಲಿತರಾಗುವುದು ಬೇಡ.
> –ಎನ್.ಹೇಮಂತ್ ಜಿಲ್ಲಾ ಪಂಚಾಯಿತಿ ಸಿಇಒ

ಜಿಲ್ಲೆಗೆ ಉತ್ತಮ ಫಲಿತಾಂಶ ದೊರಕಿಸಿಕೊಡುವ ನಿಟ್ಟಿನಲ್ಲಿ ಶಿಕ್ಷಕರು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದಾರೆ ಎಂದರು. ಮುಂದಿನ ಶೈಕ್ಷಣಿಕ ವರ್ಷದಿಂದ ಸಿಇಟಿ ತರಬೇತಿ ತರಗತಿಗಳ ನಡೆಸಲು ಉದ್ದೇಶಿಸಲಾಗಿದೆ. ಯಾವುದೇ ವಿದ್ಯಾರ್ಥಿ ಅನುತ್ತೀರ್ಣವಾಗದಂತೆ ನೋಡಿಕೊಳ್ಳುವ ಸದಾಶಯ ಹೊಂದಲಾಗಿದೆ ಎಂದರು. ಸಭೆಯಲ್ಲಿ ಎಡಿಸಿ ವಿ.ಅಭಿಷೇಕ್, ಡಿಡಿಪಿಯು ಚಂದ್ರಪ್ಪ ಗುಂಡಪಲ್ಲಿ ಉಪಸ್ಥಿತರಿದ್ದರು.

## ಶಿಷ್ಯವೇತನಕ್ಕಾಗಿ ವಿದ್ಯಾರ್ಥಿಗಳ ಪ್ರತಿಭಟನೆ

• ಉದಯವಾಹಿನಿ ಕಲಬುರಗಿ

ಕಲ್ಯಾಣ ಕರ್ನಾಟಕ ಭಾಗದ ಐಎಎಸ್ ಮತ್ತು ಕೆಎಎಸ್ ಆಕಾಂಕ್ಷಿಗಳಿಗೆ ಅನುಕೂಲವಾಗಲೆಂದು ಸರ್ಕಾರ ಕಲಬುರಗಿಯಲ್ಲಿ ಸ್ಥಾಪಿಸಿರುವ ಪ್ರಬುದ್ಧ ಅಕಾಡೆಮಿ ಸದ್ಯ ಗೊಂದಲದ ಗೂಡಾಗಿದೆ. ಶಿಷ್ಯವೇತನ, ವಸತಿ ಮತ್ತು ಮೂಲಸೌಕರ್ಯಗಳ ಕೊರತೆ ಖಂಡಿಸಿ ಅಭ್ಯರ್ಥಿಗಳು ತರಗತಿ ಬಹಿಷ್ಕರಿಸಿ ಪ್ರತಿಭಟನೆ ನಡೆಸಿದ್ದಾರೆ. ನಗರದ ಹೊರವಲಯದ ಜೇವರ್ಗಿ ರಸ್ತೆಯ ವಾಜಪೇಯಿ ಬಡಾವಣೆಯಲ್ಲಿರುವ ಪ್ರಬುದ್ಧ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳು ಕಳೆದ ಕೆಲವು ದಿನಗಳಿಂದ ತರಗತಿಗಳನ್ನು ಬಹಿಷ್ಕರಿಸಿ ಧರಣಿ ನಡೆಸುತ್ತಿದ್ದು, ಕೆಇಎ ಹೊರಡಿಸಿದ್ದ ಅಧಿಸೂಚನೆಯಲ್ಲಿ ಅಭ್ಯರ್ಥಿಗಳಿಗೆ ಮಾಸಿಕ ಶಿಷ್ಯವೇತನ ನೀಡುವ ಬಗ್ಗೆ ಉಲ್ಲೇಖಿಸಲಾಗಿತ್ತು. ಆದರೆ ಈಗ ತರಬೇತಿ ಕೇಂದ್ರದಲ್ಲಿ ಶಿಷ್ಯವೇತನ ನೀಡಲು ಸಾಧ್ಯವಿಲ್ಲ ಎಂದು ಹೇಳಲಾಗುತ್ತಿದೆ. ಇದು ವಿದ್ಯಾರ್ಥಿಗಳ ಆಕ್ರೋಶಕ್ಕೆ ಕಾರಣವಾಗಿದೆ.

## ಮಹಿಳಾ ಕವಿಗೋಷ್ಠಿಗೆ ಕವನಗಳ ಆಹ್ವಾನ

• ಉದಯವಾಹಿನಿ ಚಿತ್ರದುರ್ಗ

ಇದೇ ಬರುವ ಮಾರ್ಚ್ 8ರಂದು ಆಚರಿಸಲಾಗುವ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ನಗರದ ರೋಟರಿ ಬಾಲ ಭವನ ಚಿತ್ರದುರ್ಗ ಇಲ್ಲಿ ಚಿನ್ಮೂಲಾದ್ರಿ ಸಾಹಿತ್ಯ ವೇದಿಕೆ ಚಿತ್ರದುರ್ಗ,ಹಾಗೂ ರೋಟರಿ ಕ್ಲಬ್ ಚಿತ್ರದುರ್ಗ ಇವರು ಸಂಯುಕ್ತವಾಗಿ ಆಯೋಜಿಸಿರುವ ಜಿಲ್ಲಾ ಮಟ್ಟದ ಮಹಿಳಾ ಕವಿಗೋಷ್ಠಿ ಏರ್ಪಡಿಸಿದ್ದು ಇದರಲ್ಲಿ ಧಾರ್ಮಿಕ, ಇತಿಹಾಸ ಹಾಗೂ ಪುರಾಣ ಪ್ರಸಿದ್ಧ ಮಹಿಳೆಯರ ಕುರಿತು ಕವನವಾಚನ ಮಾಡಬಹುದಾಗಿದೆ. ಕವಿಗೋಷ್ಠಿಯಲ್ಲಿ ಭಾಗವಹಿಸಲು ಇಚ್ಛಿಸುವ ಮಹಿಳೆಯರು ತಮ್ಮ ಹೆಸರು ನೊಂದಾಯಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಶಾರದಾ ಜೈ ರಾಮ್ 9448245591 /ದಯಾವತಿ ಪುತ್ತೂರ್ ಕರ್ 8217599479 ಸಂಖ್ಯೆಗಳಿಗೆ ಕರೆಮಾಡಬಹುದಾಗಿದೆ ಹೆಸರು ನೊಂದಾಯಿಸಲು ಮಾರ್ಚ್ 3 ಕೊನೆಯ ದಿನವಾಗಿದೆ.

## ಜಿಲ್ಲಾ ಮಟ್ಟದ ಉದ್ಯೋಗ ಮೇಳ

• ಉದಯವಾಹಿನಿ ಧಾರವಾಡ

ರಾಜ್ಯ ಸರ್ಕಾರದ ಆದೇಶದಂತೆ ರಾಜ್ಯದಾದ್ಯಂತ ಉದ್ಯೋಗ ಮೇಳಗಳನ್ನು ಆಯೋಜಿಸಲಾಗುತ್ತಿದ್ದು, ಉದ್ಯೋಗಾವಕಾಶಗಳಿಗಾಗಿ ನಿರೀಕ್ಷೆಯಲ್ಲಿರುವ ಯುವಕರಿಗೆ ವೇದಿಕೆ ಸಿದ್ಧಪಡಿಸಲಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಅವರು ಹೇಳಿದರು. ಅವರು ಕರ್ನಾಟಕ ಕಾಲೇಜು ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಜಿಲ್ಲಾ ಕೌಶಲ್ಯ ಮಿಶನ್, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ಉದ್ಯೋಗ ಮೇಳವನ್ನು ಉದ್ಘಾಟಿಸಿ, ಮಾತನಾಡಿದರು. ಈ ಸಂದರ್ಭದಲ್ಲಿ ಕರ್ನಾಟಕ ಬಾಲವಿಕಾಸ ಅಕಾಡೆಮಿಯ ಅಧ್ಯಕ್ಷ ಸಂಗಮೇಶ ಅಪ್ಪಾಸಿ ಬಬಲೇಶ್ವರ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಸ್. ಆರ್. ಪಾಟೀಲ, ಜಿಲ್ಲಾಧಿಕಾರಿ ಸ್ನೇಹಲ್ ಆರ್. ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ ಪಾಟೀಲ, ಪ್ರೊಬೇಷನರಿ ಐಎಎಸ್ ಅಧಿಕಾರಿ ರಿತೀಕಾ ವರ್ಮಾ, ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದರು.



ಉದಯವಾಹಿನಿ ಚಿತ್ರ

## ವಿದ್ಯಾರ್ಥಿಗಳು ಜೀವನದಲ್ಲಿ ಯಶಸ್ಸು ಸಾಧಿಸಬೇಕಾದರೆ ಟಿವಿ ಮೊಬೈಲ್ ನಿಷೇಧಿಸಬೇಕು: ಕೆ.ಎ. ಬಳಿ ಗಾರ

• ಉದಯವಾಹಿನಿ ಗದಗ

ಸೊರಟೂರ ವಿದ್ಯಾರ್ಥಿ ಜೀವನದಲ್ಲಿ ಯಶಸ್ಸು ಗಳಿಸಬೇಕಾದರೆ ಮೊದಲು ಮೊಬೈಲ್ ಟಿವಿ ಬಳಕೆಯನ್ನ ಮಾಡಬಾರದು ತಾಯಿ ತಂದೆ ಗುರು ಹಿರಿಯರಿಗೆ ಗೌರವವನ್ನು ಕೊಡಬೇಕು ತಾಯಿ ತಂದೆಗಳನ್ನ ವೃದ್ಯಾಪ್ಯ ಹಂತದಲ್ಲಿ ಅವರ ಜೊತೆಗಿದ್ದು ಅವರನ್ನ ಜೋಪಾನವಾಗಿ ನೋಡಿಕೊಳ್ಳಬೇಕು ಇದು ಪ್ರತಿಯೊಬ್ಬ ಮಕ್ಕಳ ಕರ್ತವ್ಯ ಅಂದಾಗ ಜೀವನದಲ್ಲಿ ನಮಗೆ ಯಶಸ್ಸು ಸಿಗುವುದು. ಎಂದು ಗದಗ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಹಾಗೂ ನಿವೃತ್ತ ಶಿಕ್ಷಕರು ಉಪನ್ಯಾಸಕರು ಆದ ಕೆ ಎ ಬಳಿ ಗಾರ ಶಿಕ್ಷಕರು ಹೇಳಿದರು. ಇವರು ಗದಗ ತಾಲ್ಲೂಕಿನ ಸೊರಟೂರ ಗ್ರಾಮದ ಕರ್ನಾಟಕ ಪಬ್ಲಿಕ್ ಡಿ ಪಿ ಇ ಪಿ ಶಾಲೆ ಇಲ್ಲಿ ತಾಯಂದಿರ ಕೈ ತುತ್ತು ಹಾಗೂ ವಿಥೌಟ್ ಫೈಯರ್ ಪ್ರಿಪೇರ್ ಫುಡ್ ಮತ್ತು ವಿಜ್ಞಾನ ವಸ್ತು ಪ್ರದರ್ಶನ ಹಾಗೂ ವ್ಯವಹಾರ ಜ್ಞಾನ ಚಟುವಟಿಕೆ ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಆದಾಯ ತರುವ ಜ್ಞಾನ ಮೂಡಿಸುವುದು ಇವುಗಳ ಕಾರ್ಯಕ್ರಮದ ಉಪನ್ಯಾಸಕರಾಗಿ ಆಗಮಿಸಿ ಮಾತನಾಡಿದ ಇವರು

ಮಕ್ಕಳು ಸಮಾಜದಲ್ಲಿ ಉತ್ತಮ ನಾಗರಿಕರಾಗಿ ಬಾಳಲು ತಾಯಂದಿರ ಪಾತ್ರ ಬಹಳ ಮುಖ್ಯ ತಾಯಂದಿರು ಮಕ್ಕಳನ್ನ ಹೆರುವುದಷ್ಟೇ ಅಲ್ಲ ಮಕ್ಕಳ ಜೀವನದ ಬಹುಷ್ಯ ತಾಯಿಯ ಕೈಯಲ್ಲಿ ಇರುತ್ತದೆ. ತಾಯಿಯಾದವಳು ಮಕ್ಕಳಿಗೆ ಉತ್ತಮ ನಡವಳಿಕೆ ಮಾನವೀಯ ಮೌಲ್ಯಗಳನ್ನು ಕಲಿಸುವದರ ಜೊತೆಗೆ ವೀರ ಶೂರ ರಾಷ್ಟ್ರ ಸಂತರ ಕಥೆಗಳನ್ನ ಹೇಳುವುದರ ಜೊತೆಗೆ ಒಳ್ಳೆ ಒಳ್ಳೆ ವಿಚಾರಗಳನ್ನು ಮಕ್ಕಳಲ್ಲಿ ತುಂಬಬೇಕು ಎಂದು ಹೇಳಿದರು.



ಉದಯವಾಹಿನಿ ಚಿತ್ರ

ಸಭೆಯ ಅಧ್ಯಕ್ಷತೆಯನ್ನು ಶಾಲೆಯ ಮುಖ್ಯೋಪಾಧ್ಯಾಯರಾದ ಮಹಾಂತೇಶ ಶಲಿಯಪ್ಪನವರ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಎಸ್ ಡಿ ಎಂ ಸಿ ಸದಸ್ಯರಾದ ಮೌಲಾಸಾಬ ಬಾಬುಖಾನವರ. ನಾಗರಾಜ ಮೆಗೂರ. ಮಹಬೂಬಸಾಬ ಗದಗಿನ. ಪತ್ರಕರ್ತರಾದ ಮಾರುತಿ ಮಲ್ಲಾಡದ. ಶಾಲೆಯ ಸಿ ಆರ್ ಪಿ ಶ್ರೀಮತಿ ಕೆ ಬಿ ಕಾತರಕಿ. ಶಿಕ್ಷಕಿಯರಾದ ಎಸ್ ಆರ್ ಭೊವಿ. ಜಿ ಬಿ ಸಂಗಳದ. ಬಾಳಮ್ಮ ದೋಣಿ. ವಿ ಆರ್ ಬಂಡಾ. ವಿ ಬಿ ಶಿಂದೆ. ಎಸ್ ಎಮ್ ಮಖಾನದಾರ. ಆರ್ ವಿ ಬಡಿಗೇರ. ಶಿಕ್ಷಕರಾದ ಮಂಜುನಾಥ ಜಂಪಾಳಿ. ವಿ ಟಿ ದಾಸರಿ. ಸಿ ಬಿ ಪಾಟೀಲ. ಮುಂತಾದವರು ಉಪಸ್ಥಿತರಿದ್ದರು.

## ಆವುಂಟಿ ಅವರಿಗೆ ನಾಲ್ಮಡಿ ಕೃಷ್ಣರಾಜ ಒಡೆಯರ ರಾಷ್ಟ್ರೀಯ ಪ್ರಶಸ್ತಿ

• ಉದಯವಾಹಿನಿ, ಚಿಂಚೋಳಿ

ಪಟ್ಟಣದ ಚಂದಾಪೂರದ ಮಹಿಳಾ ಸಬಲೀಕರಣದ ಸಾಧಕಿ ನರಸಮ್ಮ ಲಕ್ಷ್ಮಣ ಆವುಂಟಿ ಅವರಿಗೆ ನಾಲ್ಮಡಿ ಕೃಷ್ಣಾರಾಜ ಒಡೆಯರ ರಾಷ್ಟ್ರೀಯ ಪ್ರಶಸ್ತಿಯನ್ನು ಮೈಸೂರು ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಜನಸೇವಾ ಫೌಂಡೇಷನ್ ಮತ್ತು ಕರ್ನಾಟಕ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮೈಸೂರ್ ಹಾಗೂ ಅಲೈನ್ಸ್ ಇಂಟ್ರನ್ಯಾಷನಲ್ ಸಂಸ್ಥೆ ಮೈಸೂರ್ ಇವರ ಸಹಯೊಗದಲ್ಲಿ ಸಂಸ್ಕೃತ ಕಾವ್ಯೋತ್ಸವ ಸಂಭ್ರಮಾಚರಣೆ ಸಮಾರಂಭದಲ್ಲಿ ಕನ್ನಡ,ನಾಡು,ನುಡಿ ನೆಲ ಜಲ ಕಲೆ ಭಾಷೆ ಸಾಹಿತ್ಯ, ಸಂಗಿತ ಸಂಸ್ಕೃತಿ, ಶಿಕ್ಷಣ,ಮಹಿಳಾ ಸಬಲಿಕರಣ ಸೇರಿದಂತೆ ಹಲವಾರು ಕ್ಷೇತ್ರದಲ್ಲಿ ಸಾಧನೆ ಗೈದ ಪ್ರತಿಭಾವಂತ ಸಾಧಕರನ್ನು ಗುರುತಿಸಿ ರಾಷ್ಟ್ರೀಯ ಪ್ರಶಸ್ತಿ ಪ್ರಧಾನ ಮಾಡಿದರು.



ಉದಯವಾಹಿನಿ ಚಿತ್ರ

ಡಾ.ಮಂಜುನಾಥ ಶಿವಕ್ಕನವರ,ಡಾ.ಎಫ್.ಕೆ ನಿಗದಿ,ನಾಗರಾಜ ಬೈರಿ, ಡಾ.ಬಿ.ತ್ಯಾಗರಾಜ, ಭೀಮಶಂಕರ ಫೀರೋಜಾಬಾದ್, ಶ್ರೀದೇವಿ, ಈರಮ್ಮ,ಗೌರಮ್ಮ ಪಾಟೀಲ, ಅನೇಕರಿದ್ದರು.

## ಮಂಗಳೂರು ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಜಾಗತಿಕ ಪ್ರಶಸ್ತಿ

• ಉದಯವಾಹಿನಿ, ಮಂಗಳೂರು

ಏರ್‌ಪೋರ್ಟ್ಸ್ ಕೌನ್ಸಿಲ್ ಇಂಟರ್‌ನ್ಯಾಷನಲ್ (ಎಸಿಐ ) ವರ್ಲ್ಡ್ ಮಂಗಳೂರು ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣವನ್ನು 2025ರ ಅತ್ಯುತ್ತಮ ವಿಮಾನ ನಿಲ್ದಾಣಕ್ಕಾಗಿ ವಿಮಾನ ನಿಲ್ದಾಣ ಸೇವಾ ಗುಣಮಟ್ಟ ಪ್ರಶಸ್ತಿ ವಿಜೇತ ಎಂದು ಹೆಸರಿಸಿದೆ. ಜಾಗತಿಕವಾಗಿ, ಪ್ರಯಾಣಿಕರ ಅನುಭವಕ್ಕಾಗಿ ವಿಶ್ವದಾದ್ಯಂತ ಪ್ರಮುಖ ವಿಮಾನ ನಿಲ್ದಾಣಗಳಲ್ಲಿ ಅದರ ಸ್ಥಾನವನ್ನು ಪುನರುಚ್ಚರಿಸುತ್ತದೆ.

ಎಎಸ್‌ಕ್ಯೂ ಪ್ರಶಸ್ತಿಗಳನ್ನು ವಾಯುಯಾನ ಉದ್ಯಮದ ಗ್ರಾಹಕ ತೃಪ್ತಿಯ ಅತ್ಯಂತ ವಿಶ್ವಾಸಾರ್ಹ ಅಳತೆ ಎಂದು ಪರಿಗಣಿಸಲಾಗಿದೆ, ಇದು ಎಸಿಐಯ ಸ್ವತಂತ್ರವಾಗಿ ನಿರ್ವಹಿಸಲ್ಪಟ್ಟ ಸಮೀಕ್ಷೆ ಕಾರ್ಯಕ್ರಮದ ಮೂಲಕ ಸಂಗ್ರಹಿಸಿದ ನೈಜ-ಸಮಯದ ಪ್ರಯಾಣಿಕರ ಪ್ರತಿಕ್ರಿಯೆಯನ್ನು ಸಂಪೂರ್ಣವಾಗಿ ಆಧರಿಸಿದೆ.



ಉದಯವಾಹಿನಿ ಚಿತ್ರ

ಆಗಮನ ವಿಭಾಗವು ವಲಸೆ ಪ್ರಕ್ರಿಯೆಗಳು, ಸಾಮಾನು ವಿತರಣೆ, ಟರ್ಮಿನಲ್ ವಾತಾವರಣ, ಸ್ವಚ್ಛತೆ, ಮಾರ್ಗಶೋಧನೆ ಮತ್ತು ಒಟ್ಟಾರೆ ಸೌಕರ್ಯ ಸೇರಿದಂತೆ ಸಂಪೂರ್ಣ ಒಳಬರುವ ಪ್ರಯಾಣವನ್ನು ಮೌಲ್ಯಮಾಪನ ಮಾಡುತ್ತದೆ.

# ಆಮೆನಡಿಗೆಯಲ್ಲಿ ಸೇಡಿಯಾಪು ಚತುಷ್ಪಥ ರಸ್ತೆ ಕಾಮಗಾರಿ

### ಮಳೆಗಾಲದ ನಂತರವೂ ಈ ಕಾಮಗಾರಿ ವೇಗ ಪಡೆದುಕೊಂಡಿಲ್ಲ, ಗುತ್ತಿಗೆದಾರರು ತಲೆಕೆಡಿಸಿಕೊಂಡಂತೆ ಕಾಣುತ್ತಿಲ್ಲ


• ಉದಯವಾಹಿನಿ ಪುತ್ತೂರು

ತಾಲ್ಲೂಕಿನ ಕೇಂದ್ರವನ್ನು ಉಪ್ಪಿನಂಗಡಿಗೆ ಸಂಪರ್ಕಿಸುವ ಪುತ್ತೂರು ಉಪ್ಪಿನಂಗಡಿ ಚತುಷ್ಪಥ ರಸ್ತೆ ಕಾಮಗಾರಿ ಬಹುತೇಕ ಕಡೆಗಳಲ್ಲಿ ಪೂರ್ಣಪ್ರಮಾಣದಲ್ಲಿ ನಿರ್ಮಿತಗೊಂಡು ವಾಹನ ಸವಾರರ ಪಾಲಿಗೆ ಸುಖ ಪ್ರಯಾಣದ ಅನುಭವ ನೀಡುತ್ತಿದ್ದರೆ, ಕೋಡಿಂಬಾಡಿ ಗ್ರಾಪಂ ಕಚೇರಿ ಬಳಿಯಿಂದ ಸೇಡಿಯಾಪು ತನಕದ ಚತುಷ್ಪಥ ರಸ್ತೆ ಕಾಮಗಾರಿ ಆಮೆನಡಿಗೆಯಲ್ಲಿ ಸಾಗುತ್ತಿದೆ.

ಕೋಡಿಂಬಾಡಿ ಗ್ರಾಪಂ ಕಚೇರಿ ಬಳಿಯಿಂದ ಸುಮಾರು ಅರ್ಧ ಕಿಮೀ ಮಾತ್ರ ಇರುವ ಈ ಕಾಮಗಾರಿ ಆರಂಭಿಸಿ ಬರೋಬ್ಬರಿ 1 ವರ್ಷವಾದರೂ ಇನ್ನೂ ಪೂರ್ಣಗೊಂಡಿಲ್ಲ. ಕಳೆದ ಮಳೆಗಾಲದ ಮೊದಲು ಆರಂಭಿಸಲಾದ ಈ ಚತುಷ್ಪಥ ರಸ್ತೆ ಕಾಮಗಾರಿ ಮಳೆಗಾಲದುದ್ದಕ್ಕೂ ನೆನೆಗುದಿಗೆ ಬಿದ್ದಿತ್ತು. ಮಳೆಗಾಲದ ನಂತರವೂ ಈ ಕಾಮಗಾರಿ ವೇಗ ಪಡೆದುಕೊಂಡಿಲ್ಲ. ಇದೀಗ ಮತ್ತೊಂದು ಮಳೆಗಾಲ ಬರುವಂತಾಗಿದ್ದರೂ ಕಾಮಗಾರಿ ಗುತ್ತಿಗೆದಾರರು ತಲೆಕೆಡಿಸಿಕೊಂಡಂತೆ ಕಾಣುತ್ತಿಲ್ಲ.

**ಕಾಮಗಾರಿ ಮಳೆಗಾಲದುದ್ದಕ್ಕೂ ನೆನೆಗುದಿಗೆ**

ಬೊಳುವಾರುನಿಂದ ಹಾರಾಡಿ ತನಕದ ಚತುಷ್ಪಥ ಕಾಮಗಾರಿ ಹಾಗೂ ಸೇಡಿಯಾಪು ಬಳಿಂಯಿಂದ ಕೋಡಿಂಬಾಡಿ ಗ್ರಾಪಂ ಕಚೇರಿ ತನಕದ 1.8 ಕಿಮೀ ವ್ಯಾಪ್ತಿಯ ಈ ಕಾಮಗಾರಿಗೆ ರೂ.20 ಕೋಟಿ ಮಂಜೂರುಗೊಂಡಿದೆ. ಕುಂದಾಪುರದ ಗುತ್ತಿಗೆದಾರರು ಈ ಟೆಂಡರ್ ಪಡೆದುಕೊಂಡು ಕಾಮಗಾರಿಯೂ ಆರಂಭಿಸಲಾಗಿದೆ. ಆದರೆ ಅರ್ಧ ಕಿ.ಮೀ ದೂರದ ಈ ಕೋಡಿಂಬಾಡಿ ಭಾಗದ ಚತುಷ್ಪಥ ಕಾಮಗಾರಿಯನ್ನು ಪೂರ್ಣಗೊಳಿಸಲು ಸಾಧ್ಯವಾಗಿಲ್ಲ.



ಉದಯವಾಹಿನಿ ಚಿತ್ರ

ಕೋಡಿಂಬಾಡಿ–ಸೇಡಿಯಾಪು ಭಾಗದ ಈ ಚತುಷ್ಪಥ ರಸ್ತೆ ಕಾಮಗಾರಿ ನಡೆದರೆ ಪುತ್ತೂರು–ಉಪ್ಪಿನಂಗಡಿ ನಡುವೆ ಓಡಾಟ ನಡೆಸುವ ನೂರಾರು ವಾಹನ ಸವಾರರು ನೆಮ್ಮದಿಯಿಂದ ಪಯಣ ಮಾಡುವಂತಾಗುತ್ತದೆ. ಇದರ ಜತೆಗೆ ಬೊಳುವಾರು ಭಾಗದಲ್ಲಿ ಕಾಮಗಾರಿ ಪೂರ್ಣಗೊಂಡರೆ ಈ ಉಪ್ಪಿನಂಗಡಿ–ಪುತ್ತೂರು ರಸ್ತೆ ಬಹುತೇಕ ಚತುಷ್ಪಥ ರಸ್ತೆಯಾಗಿ ಮಾರ್ಪಡುತ್ತದೆ.

ಉಳಿದಂತೆ ಕೋಡಿಂಬಾಡಿಯಿಂದ ಮಹಿಷ ಮರ್ದಿನಿ ದೇವಳ ದ್ವಾರದ ತನಕದ ರಸ್ತೆ ಹಾಗೂ ನೆಕ್ಕಿಲಾಡಿ ಪೆಟ್ರೋಲ್ ಪಂಪ್ ಬಳಿಯಿಂದ ಉಪ್ಪಿನಂಗಡಿ ಹೆದ್ದಾರಿಯನ್ನು ಸಂಪರ್ಕಿಸುವ ಸ್ವಲ್ಪಭಾಗ ಮಾತ್ರ ಚತುಷ್ಪಥ ರಸ್ತೆಯಾಗಿ ಪರಿವರ್ತಿತಗೊಳ್ಳಲು ಬಾಕಿಯಾಗಲಿದೆ. ನೆಕ್ಕಿಲಾಡಿ ಭಾಗದ ರಸ್ತೆಯನ್ನು ಚತುಷ್ಪಥಗೊಳಿಸಲು ಈಗಾಗಲೇ ಶಾಸಕ ಅಶೋಕ್ ರೈ ಪ್ರಸ್ತಾವನೆ ಸಲ್ಲಿಸಿದ್ದಾರೆ. ಇತ್ತ ಬೊಳುವಾರಿನ ರೈಲ್ವೇ ಬ್ರಿಡ್ಜ್‌ಗೂ ರೂ.8 ಕೋಟಿ ಅನುದಾನ ಮಂಜೂರುಗೊಂಡಿದ್ದು, ಲೋಕೋಪಯೋಗಿ ಇಲಾಖೆಯಡಿಯಲ್ಲಿ ಈ ಕಾಮಗಾರಿ ಆರಂಭವಾಗಲಿದೆ. ಸೇಡಿಯಾಪು– ಕೋಡಿಂಬಾಡಿಯಲ್ಲಿ ನಿಧಾನಗತಿಯ ಕಾಮಗಾರಿ ಬಗ್ಗೆ ಪತ್ರಿಕೆ ಪುತ್ತೂರು ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರಾಜೇಶ್ ರೈ ಅವರನ್ನು ಪ್ರಶ್ನಿಸಿದಾಗ ತಕ್ಷಣವೇ ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಲಾಗಿದೆ. ಅತೀ ಶೀಘ್ರದಲ್ಲಿ ಇಲ್ಲಿನ ಕಾಮಗಾರಿ ಪೂರ್ಣಗೊಳ್ಳಲಿದೆ. ಈಗಾಗಲೇ ಒಂದು ಭಾಗದಲ್ಲಿ ರಸ್ತೆ ನಿರ್ಮಿಸಿ ಅದಕ್ಕೆ ಡಾಮರೀಕರಣ ನಡೆಸುವ ಹಂತದಲ್ಲಿದೆ. ಇನ್ನೊಂದು ಭಾಗಕ್ಕೂ ತಕ್ಷಣ ವ್ಯವಸ್ಥೆ ಮಾಡುವಂತೆ ತಿಳಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

**ಕಾಮಗಾರಿ ತಕ್ಷಣ ಪೂರ್ಣಗೊಳಿಸಿ:** ಈಗಾಗಲೇ ಸಾಕಷ್ಟು ಸಮಯವನ್ನು ಗುತ್ತಿಗೆದಾರರಿಗೆ ನೀಡಲಾಗಿದೆ. ಮಳೆಗಾಲ ಆರಂಭಗೊಂಡರೆ ಮತ್ತೆ ಕಾಮಗಾರಿ ನಡೆಸಲು ಸಾಧ್ಯವಾಗುವುದಿಲ್ಲ. ಹಾಗಾಗಿ ಸಮರೋಪಾದಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಹಾಗೂ ಇಲಾಖೆಗೆ ಸೂಚನೆ ನೀಡಿದ್ದೇನೆ. ರಸ್ತೆ ಭಾಗಕ್ಕೆ ತಡೆಗೋಡೆ ಹಾಗೂ ಮೋರಿಗಳ ಅವಶ್ಯಕತೆ ಇದ್ದಲ್ಲಿ ತಕ್ಷಣ ಮಾಡಿ ಮುಗಿಸಬೇಕು. ಮಳೆ ಯಾವಾಗ ಬರುತ್ತದೆ ಎಂಬ ನಿರೀಕ್ಷೆ ಇಲ್ಲ. ಹಾಗಾಗಿ ಚತುಷ್ಪಥ ರಸ್ತೆಯ ಕಾಮಗಾರಿ ಮಳೆಗಾಲಕ್ಕೆ ಮುನ್ನ ಮುಗಿಸುವಂತೆ ಅಶೋಕ್ ರೈ ತಿಳಿಸಿದ್ದಾರೆ.

**ಗುತ್ತಿಗೆದಾರರ ನಿರ್ಲಕ್ಷ್ಯ...!**

**ಬೊಳುವಾರು–ಹಾರಾಡಿ ನಡುವಿನ ಕಾಮಗಾರಿಗೆ ಸಂಬಂಧಿಸಿ ಬೊಳುವಾರು ಭಾಗದಲ್ಲಿ ರಸ್ತೆ ಬದಿಯನ್ನು ಅಗಲೀಕರಿಸುವ ಕೆಲಸ ಬಿಟ್ಟರೆ ಬೇರೇನೂ ಮಾಡಿಲ್ಲ. ಇಲ್ಲಿ ರೈಲ್ವೇ ಹಳಿ ಹಾದುಹೋಗುವ ರಸ್ತೆಯನ್ನು ಹೊರತು ಪಡಿಸಿ ಕಾಮಗಾರಿ ನಡೆಸಬೇಕಿದೆ. ಇಲ್ಲಿ ಒಂದು ಕಡೆಯಲ್ಲಿ ಮಾತ್ರ ಜಾಗದ ವಿವಾದ ಇದ್ದರೂ ಉಳಿದ ಭಾಗದ ಕೆಲಸವನ್ನೂ ಮಾಡಲಾಗಿಲ್ಲ. ಕೋಡಿಂಬಾಡಿ ಸೇಡಿಯಾಪು ಪ್ರದೇಶದಲ್ಲಿ ರಸ್ತೆ ಕಾಮಗಾರಿಗೆ ಯಾವ ಅಡ್ಡಿಯೂ ಇಲ್ಲ. ಹಾಗಿದ್ದರೂ ಒಂದು ವರ್ಷದಲ್ಲಿ ಅರ್ಧ ಕಿಮೀ ದೂರದ ರಸ್ತೆ ಕಾಮಗಾರಿ ಮಾಡದೇ ಇರುವುದು ಗುತ್ತಿಗೆದಾರರ ನಿರ್ಲಕ್ಷ್ಯವನ್ನು ಎದ್ದು ತೋರಿಸುತ್ತಿದೆ. ಇಲ್ಲಿನ ಕೆಲಸ ಪೂರ್ಣಗೊಳಿಸುವಂತೆ ಲೋಕೋಪಯೋಗಿ ಇಲಾಖೆ ಪದೇ ಪದೇ ಗುತ್ತಿಗೆದಾರರಿಗೆ ಎಚ್ಚರಿಕೆ ಕೊಟ್ಟಿದ್ದರೂ ಯಾವ ಪ್ರಯೋಜನವೂ ಆಗಿಲ್ಲ.**

## ಅಯ್ಯಪ್ಪ ಮಾಲೆ ಧರಿಸಿ ಎಣ್ಣೆ ಪಾರ್ಟಿಯಲ್ಲಿ ಭಾಗಿ



ಅಲ್ಲು ಅರ್ಜುನ್, ಸಹೋದರ ಅಲ್ಲು ಸಿರೀಶ್‌ಗಾಗಿ ಆಯೋಜಿಸಿದ್ದ ಎಣ್ಣೆ ಪಾರ್ಟಿಯಲ್ಲಿ ರಾಮ್ ಚರಣ್ ಭಾಗಿ ಆಗಿದ್ದರು. ರಾಮ್ ಚರಣ್ ಪಾರ್ಟಿಯಲ್ಲಿ ಭಾಗಿ ಆಗಿರುವ ವಿಡಿಯೋವನ್ನು ಅಲ್ಲು ಸಿರೀಶ್ ಹಂಚಿಕೊಂಡಿದ್ದಾರೆ. ಆದರೆ ರಾಮ್ ಚರಣ್ ಅಯ್ಯಪ್ಪ ಮಾಲಧಾರಿಯಾಗಿ ಮದ್ಯದ ಪಾರ್ಟಿಯಲ್ಲಿ ಭಾಗಿ ಆಗಿದ್ದರ ಬಗ್ಗೆ ಹಲವರು ಟೀಕೆ ವ್ಯಕ್ತಪಡಿಸಿದ್ದಾರೆ. ಅಲ್ಲು ಅರ್ಜುನ್ ಅವರ ಸಹೋದರ ಅಲ್ಲು ಸಿರೀಶ್ ಮದುವೆ ಆಗುತ್ತಿದ್ದಾರೆ. ಆದರೆ ಮದುವೆಗೆ ಮುನ್ನ ಪಾರ್ಟಿಗಳ ಮೇಲೆ ಪಾರ್ಟಿಗಳನ್ನು ಆಯೋಜನೆ ಮಾಡುತ್ತಿದ್ದಾರೆ ಅಲ್ಲು ಸಿರೀಶ್.

ಇತ್ತೀಚೆಗಷ್ಟೆ ವಿದೇಶದಲ್ಲಿ ಕ್ರೂಸ್ ಒಂದರಲ್ಲಿ ಅದ್ಧೂರಿ ಪಾರ್ಟಿ ಮಾಡಿದರು. ಪಾರ್ಟಿಯಲ್ಲಿ ಅಲ್ಲು ಅರ್ಜುನ್ ಸಹ ಭಾಗವಹಿಸಿದ್ದರು. ಅದಾದ ಬಳಿಕ ಇತ್ತೀಚೆಗಷ್ಟೆ ಅಲ್ಲು ಅರ್ಜುನ್ ಅವರು ಸಹೋದರ ಅಲ್ಲು ಸಿರೀಶ್ ಅವರಿಗಾಗಿ ಪಾರ್ಟಿ ಆಯೋಜಿಸಿದ್ದರು. ಮದ್ಯ, ನೃತ್ಯ ಎಲ್ಲವೂ ಇದ್ದ ಪಾರ್ಟಿ ಇದಾಗಿತ್ತು. ಆದರೆ ಈ ಪಾರ್ಟಿಯಲ್ಲಿ ರಾಮ್ ಚರಣ್ ಭಾಗವಹಿಸಿದ್ದರು. ಅದೂ ಅಯ್ಯಪ್ಪ ಮಾಲಧಾರಿಯಾಗಿ! ಹೌದು, ಅಲ್ಲು ಅರ್ಜುನ್, ಸಹೋದರನಿಗಾಗಿ ಆಯೋಜಿಸಿದ್ದ ಕಾಕ್‌ಟೇಲ್ ಪಾರ್ಟಿಯಲ್ಲಿ ರಾಮ್ ಚರಣ್ ಭಾಗಿ ಆಗಿದ್ದರು. ರಾಮ್ ಚರಣ್ ಪಾರ್ಟಿಯಲ್ಲಿ ಭಾಗಿ ಆಗಿರುವ ವಿಡಿಯೋವನ್ನು ಸಹ ಅಲ್ಲು ಸಿರೀಶ್ ಹಂಚಿಕೊಂಡಿದ್ದಾರೆ. ಆದರೆ ರಾಮ್ ಚರಣ್, ಅಯ್ಯಪ್ಪ ಮಾಲಧಾರಿಯಾಗಿ ಮದ್ಯದ ಪಾರ್ಟಿಯಲ್ಲಿ ಭಾಗಿ ಆಗಿದ್ದರ ಬಗ್ಗೆ ಹಲವರು ಟೀಕೆ ವ್ಯಕ್ತಪಡಿಸಿದ್ದಾರೆ. ಆದರೆ ನಿಜವಾಗಿಯೂ ಅಲ್ಲಿ ನಡೆದಿದ್ದೇನು ಎಂಬುದನ್ನು ಅಲ್ಲು ಸಿರೀಶ್ ವಿವರಿಸಿದ್ದಾರೆ. ಮಾಲಧಾರಿಯಾಗಿ ರಾಮ್ ಚರಣ್ ಪಾರ್ಟಿಯಲ್ಲಿ ಭಾಗವಹಿಸಿದ ಬಗ್ಗೆ ಪ್ರಶ್ನೆಗಳು ಎದ್ದಂತೆ, ಕಮೆಂಟ್ ಒಂದಕ್ಕೆ ಪ್ರತಿಕ್ರಿಯೆ ನೀಡಿರುವ ಅಲ್ಲು ಸಿರೀಶ್, 'ಸ್ವಾಮಿಯವರು (ರಾಮ್ ಚರಣ್) ಯಾರೂ ಸಹ ಮದ್ಯವನ್ನು ಮುಟ್ಟುವ ಮೊದಲೇ ಅವರು ಬಂದು ಶುಭ ಹಾರೈಸಿ ಹೊರಟು ಬಿಟ್ಟರು' ಎಂದಿದ್ದಾರೆ. ಆ ಮೂಲಕ ಪಾರ್ಟಿಯ ಆರಂಭದಲ್ಲೇ ಬಂದ ರಾಮ್ ಚರಣ್ ಎಲ್ಲರಿಗೂ ಶುಭ ಹಾರೈಸಿ ಹೊರಟಿದ್ದಾರೆ ಆ ಮೂಲಕ ಅವರು ಮಾಲಧಾರಿಯಾಗಿ ಯಾವುದೇ ಕೆಟ್ಟ ಚಟುವಟಿಕೆಯ ಭಾಗ ಆಗಿಲ್ಲ ಎಂಬುದನ್ನು ಖಾತ್ರಿ ಪಡಿಸಿದ್ದಾರೆ.

## ಸಮರ್ಜಿತ್‌ಗೂ ಒಲಿದ ಪ್ರತಿಷ್ಠಿತ ಪ್ರಶಸ್ತಿ

'ಗೌರಿ' ಚಿತ್ರಕ್ಕಾಗಿ ಇಂದ್ರಜಿತ್ ಲಂಕೇಶ್ ಅವರ ಪುತ್ರ, ಸಮರ್ಜಿತ್ ಲಂಕೇಶ್ ಫಿಲ್ಮ್‌ಫೇರ್ ಪ್ರಶಸ್ತಿ ಪಡೆದಿದ್ದಾರೆ. ಇದು ಲಂಕೇಶ್ ಕುಟುಂಬಕ್ಕೆ ಮೂರನೇ ಬಾರಿ ಸಿಗುತ್ತಿರುವ ಫಿಲ್ಮ್‌ಫೇರ್ ಪ್ರಶಸ್ತಿ ಎಂಬುದು ವಿಶೇಷ. ಈ ಮೊದಲು ಲಂಕೇಶ್ ಮತ್ತು ಇಂದ್ರಜಿತ್ ಅವರಿಗೆ ಈ ಪ್ರಶಸ್ತಿ ಸಿಕ್ಕಿತ್ತು. ಇತ್ತೀಚೆಗೆ ಕೇರಳದ ಕೊಚ್ಚಿಯಲ್ಲಿ 70ನೇ ಫಿಲ್ಮ್‌ಫೇರ್ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತು. ಈ ಕಾರ್ಯಕ್ರಮದಲ್ಲಿ 2024ನೇ ಸಾಲಿನ ಸಿನಿಮಾಗಳಿಗೆ ಪ್ರಶಸ್ತಿ ನೀಡಲಾಯಿತು. 'ಗೌರಿ' ಸಿನಿಮಾದಲ್ಲಿನ ಅಭಿನಯಕ್ಕಾಗಿ ಸಮರ್ಜಿತ್ ಲಂಕೇಶ್ ಅವರು 'ಅತ್ಯುತ್ತಮ ನವನಟ' ಪ್ರಶಸ್ತಿ ಪಡೆದುಕೊಂಡರು. ವಿಶೇಷ ಏನೆಂದರೆ, ಲಂಕೇಶ್ ಕುಟುಂಬಕ್ಕೆ ಸಿಗುತ್ತಿರುವ ಮೂರನೆಯ ಫಿಲ್ಮ್‌ಫೇರ್ ಪ್ರಶಸ್ತಿ ಇದು. ಈ ಮೊದಲು ಲಂಕೇಶ್ ಮತ್ತು ಇಂದ್ರಜಿತ್ ಲಂಕೇಶ್ ಅವರು ಕೂಡ ಫಿಲ್ಮ್‌ಫೇರ್ ಪ್ರಶಸ್ತಿ ಪಡೆದಿದ್ದರು. ಕನ್ನಡದ ಜನಪ್ರಿಯ ಸಾಹಿತಿ ಹಾಗೂ 'ಲಂಕೇಶ್ ಪತ್ರಿಕೆ' ಸಂಪಾದಕರಾಗಿದ್ದ ಪಿ. ಲಂಕೇಶ್ ಅವರು 1980ರಲ್ಲಿ 'ಎಲ್ಲಿಂದಲೋ ಬಂದವರು' ಸಿನಿಮಾದ ನಿರ್ದೇಶನಕ್ಕಾಗಿ ಫಿಲ್ಮ್‌ಫೇರ್ (ದಕ್ಷಿಣ) ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದರು. ಸಾಹಿತ್ಯ ಕ್ಷೇತ್ರದಲ್ಲಿ ಖ್ಯಾತರಾಗಿದ್ದ ಲಂಕೇಶ್ ಅವರು ಚಿತ್ರರಂಗದಲ್ಲೂ ನಿರ್ದೇಶಕರಾಗಿ ಹೆಸರು ಮಾಡಿದ್ದರು. 'ಪಲ್ಲವಿ', 'ಅನುರೂಪ', 'ಖಂಡವಿದೆಕೋ ಮಾಂಸವಿದೆಕೋ', 'ಎಲ್ಲಿಂದಲೋ ಬಂದವರು' ಸಿನಿಮಾಗಳನ್ನು ನಿರ್ದೇಶಿಸಿದ್ದರು. ಲಂಕೇಶ್ ಪುತ್ರ ಇಂದ್ರಜಿತ್ ಲಂಕೇಶ್ ಅವರು 'ತುಂಟಾಟ' ಸಿನಿಮಾ ಮೂಲಕ ನಿರ್ದೇಶಕರಾದರು. ನಂತರ 'ಮೋನಾಲಿಸಾ', 'ಐಶ್ವರ್ಯ', 'ಹುಡುಗ ಹುಡುಗಿ', 'ಲವ್ ಯೂ ಆಲಿಯಾ', 'ಶಕೀಲಾ', 'ಗೌರಿ' ಮುಂತಾದ ಸಿನಿಮಾಗಳನ್ನು ನಿರ್ದೇಶಿಸಿದರು.





## ಶಿಲ್ಪಾ ಶೆಟ್ಟಿಯ ಕನ್ನಡ ಪ್ರೇಮಕ್ಕೆ ಇದೇ ಸಾಕ್ಷಿ

ಮಂಗಳೂರು ಮೂಲದ ಶಿಲ್ಪಾ ಶೆಟ್ಟಿ ಬೆಳೆದಿದ್ದೆಲ್ಲ ಮುಂಬೈನಲ್ಲಿ ಆದರೂ ಕರ್ನಾಟಕವನ್ನು ಅವರು ಮರೆತಿಲ್ಲ. ಇದೀಗ ನಟಿ ಶಿಲ್ಪಾ ಶೆಟ್ಟಿ, ಮುಂಬೈನಲ್ಲಿ ಹೊಸ ರೆಸ್ಟೊರೆಂಟ್ ಪ್ರಾರಂಭ ಮಾಡಿದ್ದು, ರೆಸ್ಟೊರೆಂಟ್ ಕರ್ನಾಟಕ ಥೀಮ್‌ನದ್ದಾಗಿದೆ. ರೆಸ್ಟೊರೆಂಟ್‌ನ ಮೆನು ಕಾರ್ಡ್‌ನಲ್ಲಿ ಕರ್ನಾಟಕ ಭೂಪಟವನ್ನು ಸಹ ಮುದ್ರಿಸಿದ್ದಾರೆ. ರೆಸ್ಟಾರೆಂಟ್‌ನ ವಿಶೇಷತೆಯೇನು ತಿಳಿಯಿರಿ..

ಶಿಲ್ಪಾ ಶೆಟ್ಟಿ ಬಾಲಿವುಡ್‌ನ ಸ್ಟಾರ್ ನಟಿ ಆಗಿರುವ ಜೊತೆಗೆ ಬಲು ಯಶಸ್ವಿ ಉದ್ಯಮಿಯೂ ಸಹ ಹೌದು. ಮಂಗಳೂರು ಮೂಲದವರಾದರೂ ಸಹ ಶಿಲ್ಪಾ ಶೆಟ್ಟಿ ಬೆಳೆದಿದ್ದೆಲ್ಲ ಮುಂಬೈನಲ್ಲಿಯೇ. ಬಾಲ್ಯದಿಂದಲೂ ಮುಂಬೈನಲ್ಲೇ ಬೆಳೆದಿದ್ದರೂ ಸಹ ತಮ್ಮ ಮೂಲವಾದ ಕರ್ನಾಟಕವನ್ನು ಶಿಲ್ಪಾ ಶೆಟ್ಟಿ ಮರೆತಿಲ್ಲ. ಇತ್ತೀಚೆಗಷ್ಟೆ ಮುಂಬೈನಲ್ಲಿ ಹೋಟೆಲ್ ಒಂದನ್ನು ಶಿಲ್ಪಾ ಶೆಟ್ಟಿ ಪ್ರಾರಂಭ ಮಾಡಿದ್ದು, ಕರ್ನಾಟಕ ಥೀಮ್‌ನ ಹೋಟೆಲ್ ಇದಾಗಿದೆ. ಮಾತ್ರವಲ್ಲದೆ ಇದಕ್ಕೆ ಇರಿಸಿರುವುದು ಸಹ ಕನ್ನಡದ ಹೆಸರನ್ನೇ. ಶಿಲ್ಪಾ ಶೆಟ್ಟಿ ಈಗಾಗಲೇ ಬಾಸ್ಟಿಯನ್ ಹೆಸರಿನಲ್ಲಿ ಮುಂಬೈನಲ್ಲಿ ಒಂದು ಹಾಗೂ ಗೋವಾನಲ್ಲಿ ಒಂದು ಐಶಾರಾಮಿ ಹೋಟೆಲ್ ಹೊಂದಿದ್ದಾರೆ. ಆ ರೆಸ್ಟೋರೆಂಟ್‌ಗಳು ಸಿರಿವಂತರ ಮತ್ತು ಅಲ್ಟ್ರಾ ಸಿರಿವಂತರ ಹೋಟೆಲ್‌ಗಳಾಗಿವೆ. ಇದೀಗ ಅದೇ ಬಾಸ್ಟಿಯನ್ ಹೆಸರಿನಲ್ಲಿ ಮೇಲ್ಮಧ್ಯಮ ವರ್ಗದವರಿಗಾಗಿ ರೆಸ್ಟೋರೆಂಟ್ ಆರಂಭಿಸಿದ್ದಾರೆ ಶಿಲ್ಪಾ ಶೆಟ್ಟಿ. ರೆಸ್ಟೋರೆಂಟ್‌ನ ಹೆಸರು 'ಬಾಸ್ಟಿಯನ್ ಅಮ್ಮ ಕೈ'. ಈ ರೆಸ್ಟಾರೆಂಟ್ ಕರ್ನಾಟಕ ಥೀಮ್‌ನ ರೆಸ್ಟೋರೆಂಟ್ ಆಗಿದ್ದು, ಇಲ್ಲಿ ಸಿಕ್ಕುವ ಖಾದ್ಯಗಳು ಕರ್ನಾಟಕದ ಜನಪ್ರಿಯ ಖಾದ್ಯಗಳೇ ಆಗಿವೆ. ಮುಂಬೈನ ಬಾಂದ್ರಾ, ವೆಸ್ಟ್‌ನ ನ್ಯೂ ಲಿಂಕ್ ರಸ್ತೆಯಲ್ಲಿ ಈ ಹೋಟೆಲ್ ಅನ್ನು ಶಿಲ್ಪಾ ಶೆಟ್ಟಿ ಪ್ರಾರಂಭಿಸಿದ್ದಾರೆ. ಹೋಟೆಲ್‌ನ ವಿಶೇಷತೆಯೆಂದರೆ ಅದರ ಮೆನು. ಅವರ ಮೆನುವಿನಲ್ಲಿ ಕರ್ನಾಟಕದ ಮ್ಯಾಪ್ ಅನ್ನೇ ಪ್ರಿಂಟ್ ಮಾಡಿದ್ದಾರೆ ನಟಿ. ಹೋಟೆಲ್ ಮುಂಬೈನಲ್ಲಿದ್ದರೂ ಸಹ ಖಾದ್ಯಗಳ ಹೆಸರು ಹಿಂದಿಯ ಬದಲಿಗೆ ಕನ್ನಡದಲ್ಲಿಯೇ ಇವೆ. ಮೆಣಸಿಕಾಯಿ ಬಜ್ಜಿ, ಸಬ್ಬಕ್ಕಿ ವಡೆ ಎಂದೇ ಮೆನುವಿನಲ್ಲಿ ಮುದ್ರಿಸಲಾಗಿದೆ. ಮುಂಬೈನಲ್ಲಿ ಈ ಖಾದ್ಯಗಳನ್ನು ಮಿರ್ಚಿ ಬಜ್ಜಿ, ಸಾಬೂದಾನ ವಡಾ ಎಂದು ಕರೆಯಲಾಗುತ್ತದೆ. ಆದರೆ ಹಿಂದಿ ಹೆಸರಿನ ಬದಲಾಗಿ ಮೆನುವಿನಲ್ಲಿ ಕನ್ನಡದ ಹೆಸರುಗಳನ್ನೇ ಇರಿಸಿದ್ದಾರೆ ಶಿಲ್ಪಾ ಶೆಟ್ಟಿ.

## ಅತ್ಯಾಚಾರ ಆರೋಪಿ ಜೊತೆ ನೋರಾ ಡೇಟಿಂಗ್



ಖಾಸಗಿ ಜೀವನ ರಹಸ್ಯ

ನೋರಾ ಫತೇಹಿ ಯಾವಾಗಲೂ ತನ್ನ ಖಾಸಗಿ ಜೀವನವನ್ನು ರಹಸ್ಯವಾಗಿಡುತ್ತಾರೆ. ಆದರೆ ಕಳೆದ ಕೆಲವು ದಿನಗಳಿಂದ, ನಟಿಯ ಹೆಸರು ಜನಪ್ರಿಯ ಫುಟ್ಬಾಲ್ ಆಟಗಾರ ಅಶ್ರಫ್ ಹಕಿಮಿಯೊಂದಿಗೆ ತಳುಕು ಹಾಕಿಕೊಂಡಿದೆ. ನಟಿ ಇತ್ತೀಚೆಗೆ ಫುಟ್ಬಾಲ್ ಪಂದ್ಯ ವೀಕ್ಷಿಸಲು ಬಂದು ಮೊರಾಕೊ ರಾಷ್ಟ್ರೀಯ ಫುಟ್ಬಾಲ್ ತಂಡ ಬೆಂಬಲಿಸಿದಾಗ ಅಶ್ರಫ್ ಮತ್ತು ನೋರಾ ಅವರ ಸಂಬಂಧದ ಬಗ್ಗೆ ಚರ್ಚೆ ನಡೆದವು. ಹಾಗಾದರೆ ಅಶ್ರಫ್ ನಿಜವಾಗಿಯೂ ಯಾರು ಅತ್ಯಂತ ಆಘಾತಕಾರಿ ವಿಷಯವೆಂದರೆ ಅಶ್ರಫ್ ವಿರುದ್ಧ ಅತ್ಯಾಚಾರದಂತಹ ಗಂಭೀರ ಆರೋಪಗಳಿವೆ. ಅವರ ಖಾಸಗಿ ಜೀವನವೂ ವಿವಾದಾತ್ಮಕವಾಗಿಯೇ ಉಳಿದಿದೆ. ಬಾಲಿವುಡ್ ನಟಿ ನೋರಾ ಫತೇಹಿ ಯಾವಾಗಲೂ ತನ್ನ ಖಾಸಗಿ ಜೀವನವನ್ನು ರಹಸ್ಯವಾಗಿಡುತ್ತಾರೆ. ಆದರೆ ಕಳೆದ ಕೆಲವು ದಿನಗಳಿಂದ, ನಟಿಯ ಹೆಸರು ಜನಪ್ರಿಯ ಫುಟ್ಬಾಲ್ ಆಟಗಾರ ಅಶ್ರಫ್ ಹಕಿಮಿಯೊಂದಿಗೆ ತಳುಕು ಹಾಕಿಕೊಂಡಿದೆ. ನಟಿ ಇತ್ತೀಚೆಗೆ ಫುಟ್ಬಾಲ್ ಪಂದ್ಯ ವೀಕ್ಷಿಸಲು ಬಂದು ಮೊರಾಕೊ ರಾಷ್ಟ್ರೀಯ ಫುಟ್ಬಾಲ್ ತಂಡ ಬೆಂಬಲಿಸಿದಾಗ ಅಶ್ರಫ್ ಮತ್ತು ನೋರಾ ಅವರ ಸಂಬಂಧದ ಬಗ್ಗೆ ಚರ್ಚೆ ನಡೆದವು. ಹಾಗಾದರೆ ಅಶ್ರಫ್ ನಿಜವಾಗಿಯೂ ಯಾರು ಅತ್ಯಂತ ಆಘಾತಕಾರಿ ವಿಷಯವೆಂದರೆ ಅಶ್ರಫ್ ವಿರುದ್ಧ ಅತ್ಯಾಚಾರದಂತಹ ಗಂಭೀರ ಆರೋಪಗಳಿವೆ. ಅವರ ಖಾಸಗಿ ಜೀವನವೂ ವಿವಾದಾತ್ಮಕವಾಗಿಯೇ ಉಳಿದಿದೆ. ಅಶ್ರಫ್ ಹಕಿಮಿ ಅವರ ಪೋಷಕರು ಮೊರೊಕನ್ ಅರಬ್ ಮೂಲದವರು. ಅದಕ್ಕಾಗಿಯೇ ಹಕಿಮಿ ಕೂಡ ಮೊರೊಕನ್ ತಂಡವನ್ನು ಆಯ್ಕೆ ಮಾಡಿಕೊಂಡರು. ಅವರಿಗೆ ಪ್ರಸ್ತುತ 27 ವರ್ಷ. ಅವರು ಫುಟ್ಬಾಲ್ ತಂಡದ ನಾಯಕ. ಅಶ್ರಫ್ 2020ರಲ್ಲಿ ಸ್ಪ್ಯಾನಿಷ್ ನಟಿ ಹಿಬಾ ಅಬೌಕ್ ಅವರನ್ನು ವಿವಾಹವಾದರು. ಇಬ್ಬರಿಗೂ ಇಬ್ಬರು ಮಕ್ಕಳಿದ್ದಾರೆ. ಆದರೆ ಅಶ್ರಫ್ ಮತ್ತು ಹಿಬಾ ಅವರ ಸಂಬಂಧ ಹೆಚ್ಚು ಕಾಲ ಉಳಿಯಲಿಲ್ಲ. ಅಂತಿಮವಾಗಿ, ಇಬ್ಬರೂ ವಿಚ್ಛೇದನ ಪಡೆಯಲು ನಿರ್ಧರಿಸಿದರು. 2023ರಲ್ಲಿ, ಅಶ್ರಫ್ ಮತ್ತು ಹಿಬಾ ಅಧಿಕೃತವಾಗಿ ತಮ್ಮ ವಿಚ್ಛೇದನವನ್ನು ಘೋಷಿಸಿದರು.

## ಎರಡು ಬಾರಿ ಮದುವೆ ಆಗಲಿದ್ದಾರೆ

ರಶ್ಮಿಕಾ ಮಂದಣ್ಣ ಮತ್ತು ವಿಜಯ್ ದೇವರಕೊಂಡ ಮದುವೆ ಕಾರ್ಯಕ್ರಮ ಚಾಲ್ತಿಯಲ್ಲಿದ್ದು ಮೆಹಂದಿ ಮತ್ತು ಸಂಗೀತ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಮದುವೆ ಕಾರ್ಯ ನಡೆಯಲಿದೆ.

ವಿಶೇಷವೆಂದರೆ ರಶ್ಮಿಕಾ ಮತ್ತು ವಿಜಯ್ ಅವರು ಒಂದಲ್ಲ ಎರಡು ಬಾರಿ ಮದುವೆ ಆಗಲಿದ್ದಾರೆ! ರಶ್ಮಿಕಾ ಮಂದಣ್ಣ ಮತ್ತು ವಿಜಯ್ ದೇವರಕೊಂಡ ವಿವಾಹ ಕಾರ್ಯಕ್ರಮಗಳು ಬಲು ಅದ್ಧೂರಿಯಾಗಿ ನಡೆಯುತ್ತಿವೆ. ರಾಜಸ್ಥಾನದ ಉದಯಪುರದ ಬಳಿಯ ಐಶಾರಾಮಿ ರೆಸಾರ್ಟ್‌ನಲ್ಲಿ ಈ ಜೋಡಿ ವಿವಾಹ ಆಗುತ್ತಿದ್ದು, ಈ ಮದುವೆಯು ಬಲು ಅದ್ಧೂರಿಯಾಗಿಯೂ ಜೊತೆಗೆ ಅತ್ಯಂತ ಖಾಸಗಿಯಾಗಿಯೂ ಇರಲಿದೆ. ಈಗಾಗಲೇ ಮದುವೆ ಕಾರ್ಯಗಳು ಪ್ರಾರಂಭವಾಗಿ ವಾರವಾಗುತ್ತಾ ಬಂದಿದೆ. ಹಿಂದೂ ಸಂಪ್ರದಾಯದಲ್ಲಿ ಒಂದು ಬಾರಿ ಮಾಂಗಲ್ಯಧಾರಣೆ ಮಾಡುವ ಪದ್ಧತಿ ಇದೆ. ಆದರೆ ರಶ್ಮಿಕಾ ಮಂದಣ್ಣ ಮತ್ತು ವಿಜಯ್ ದೇವರಕೊಂಡ ಅವರುಗಳು ಎರಡೆರಡು ಬಾರಿ ಮದುವೆ ಆಗಲಿದ್ದಾರೆ. ಸಾಮಾನ್ಯವಾಗಿ ಎರಡು ಬೇರೆ ಧರ್ಮದವರು ಮದುವೆ ಆದಾಗ ಹೀಗೆ ಎರಡೆರಡು ಬಾರಿ ಮದುವೆ ಮಾಡುವ ಸಂಪ್ರದಾಯ ಚಿತ್ರರಂಗದಲ್ಲಿದೆ. ಆದರೆ ವಿಜಯ್ ಮತ್ತು ರಶ್ಮಿಕಾ ಇಬ್ಬರೂ ಹಿಂದೂ ಧರ್ಮದವರೇ ಆಗಿದ್ದರೂ ಸಹ ಈ ಜೋಡಿ ಎರಡೆರಡು ಬಾರಿ ಮದುವೆ ಆಗುತ್ತಿದೆ. ಆದರೆ ಹೀಗೆ ಎರಡು ಬಾರಿ ಮದುವೆ ಆಗುತ್ತಿರುವುದು ಒಳ್ಳೆಯ ಕಾರಣಕ್ಕೆ. ಬೆಳಿಗ್ಗೆ ಮೊದಲಿಗೆ ವಿಜಯ್ ದೇವರಕೊಂಡ ಅವರ ಕುಟುಂಬ ಮತ್ತು ಸಮುದಾಯದ ಸಂಪ್ರದಾಯದಂತೆ ಮದುವೆ ನಡೆಯಲಿದೆ. ವಿಜಯ್ ದೇವರಕೊಂಡ ಅವರ ತೆಲುಗು ಸಂಪ್ರದಾಯದಂತೆ ಬೆಳಿಗ್ಗೆ ಮದುವೆ ಕಾರ್ಯ ನಡೆಯಲಿದೆ. ಅದಾದ ಬಳಿಕ ಸಂಜೆ ವೇಳೆಗೆ ರಶ್ಮಿಕಾ ಅವರ ಕೊಡವ ಸಂಪ್ರದಾಯದಂತೆ ಮದುವೆ ನಡೆಯಲಿದೆ. ಇಬ್ಬರೂ ಕುಟುಂಬಗಳ ಸಂಪ್ರದಾಯಗಳನ್ನು ಗೌರವಿಸಲೆಂದು ಈ ನಿರ್ಧಾರವನ್ನು ಮಾಡಲಾಗಿದೆ.



## ಇಂಗ್ಲೆಂಡ್‌ಗೆ ಜಯ ಭಾರತ v/s ಪಾಕಿಸ್ತಾನ್ ಮುಖಾಮುಖಿ ಇಲ್ಲ!

ಟಿ20 ವಿಶ್ವಕಪ್‌ನ ಸೂಪರ-8 ಸುತ್ತಿನಲ್ಲಿ ಭಾರತ, ಸೌತ್ ಆಫ್ರಿಕಾ, ಇಂಗ್ಲೆಂಡ್, ಝಿಂಬಾಬ್ವೆ, ಪಾಕಿಸ್ತಾನ್, ನ್ಯೂಝಿಲೆಂಡ್, ವೆಸ್ಟ್ ಇಂಡೀಸ್ ಸೇರಿದಂತೆ ಶ್ರೀಲಂಕಾ ತಂಡಗಳು ಕಣಕ್ಕಿಳಿದಿವೆ. ಈ ಎಂಟು ತಂಡಗಳಲ್ಲಿ ಇಂಗ್ಲೆಂಡ್ ಸೆಮಿಫೈನಲ್‌ಗೆ ಪ್ರವೇಶಿಸಿದ್ದು, ಇನ್ನುಳಿದ 3 ಸ್ಥಾನಗಳಿಗಾಗಿ ಪೈಪೋಟಿ ಮುಂದುವರೆದಿದೆ.

ಟಿ20 ವಿಶ್ವಕಪ್‌ನ ಸೆಮಿಫೈನಲ್‌ಗೇರುವ ನಾಲ್ಕು ತಂಡಗಳಾವುವು ಎಂಬ ಲೆಕ್ಕಾಚಾರ ಜೋರಾಗಿದೆ. ಈ ಲೆಕ್ಕಾಚಾರದ ಜೊತೆಗೆ ಇದೀಗ ಸೆಮಿಫೈನಲ್ ಪಂದ್ಯದಲ್ಲಿ ಭಾರತ ಮತ್ತು ಪಾಕಿಸ್ತಾನ್ ಮುಖಾಮುಖಿಯಾಗಲ್ಲ ಎಂಬುದು ಕೂಡ ಬಹುತೇಕ ಖಚಿತವಾಗಿದೆ. ಏಕೆಂದರೆ ಪಾಕಿಸ್ತಾನ್ ವಿರುದ್ಧದ ಪಂದ್ಯದಲ್ಲಿ ಭರ್ಜರಿ ಜಯ ಸಾಧಿಸಿ ಇಂಗ್ಲೆಂಡ್ ತಂಡವು ಸೆಮಿಫೈನಲ್‌ಗೇರಿದೆ.



ಮೊದಲ ಪಂದ್ಯದಲ್ಲಿ ಶ್ರೀಲಂಕಾಗೆ ಸೋಲುಣಿಸಿದ್ದ ಇಂಗ್ಲೆಂಡ್, ಇದೀಗ ಪಾಕ್ ವಿರುದ್ಧ ಗೆದ್ದು ಒಟ್ಟು 4 ಅಂಕಗಳನ್ನು ಪಡೆದುಕೊಂಡಿದೆ. ಇನ್ನು ನ್ಯೂಝಿಲೆಂಡ್ ವಿರುದ್ಧ ಗೆದ್ದರೆ ಒಟ್ಟು 6 ಅಂಕಗಳನ್ನು ಪಡೆಯಲಿದೆ. ಅತ್ತ ಪಾಕಿಸ್ತಾನ್ ತಂಡ ಕೊನೆಯ ಪಂದ್ಯದಲ್ಲಿ ಶ್ರೀಲಂಕಾ ವಿರುದ್ಧ ಗೆದ್ದರೆ ಪಡೆಯುವುದು ಕೇವಲ 3 ಅಂಕಗಳು ಮಾತ್ರ. ಏಕೆಂದರೆ ಪಾಕಿಸ್ತಾನ್-ನ್ಯೂಝಿಲೆಂಡ್ ನಡುವಣ ಪಂದ್ಯವು ರದ್ದಾಗಿರುವ ಕಾರಣ 1 ಅಂಕಗಳನ್ನು ಹಂಚಿಕೊಳ್ಳಲಾಗಿದೆ. ಅದರಂತೆ ಇನ್ನುಳಿದಿರುವ ಮ್ಯಾಚ್‌ನಲ್ಲಿ ಗೆದ್ದರೂ ಪಾಕಿಸ್ತಾನ್ ತಂಡಕ್ಕೆ ಅಂಕ ಪಟ್ಟಿಯಲ್ಲಿ ಮೊದಲ ಸ್ಥಾನಕ್ಕೇರಲು ಸಾಧ್ಯವಾಗುವುದಿಲ್ಲ.

ಇದರಿಂದ ಸೆಮಿಫೈನಲ್ ಸುತ್ತಿನಲ್ಲಿ ಭಾರತ ಮತ್ತು ಪಾಕಿಸ್ತಾನ್ ಮುಖಾಮುಖಿಯಾಗುವ ಸಾಧ್ಯತೆ ಕೂಡ ಸಂಪೂರ್ಣ ಕ್ಷೀಣಿಸಿದೆ. ಏಕೆಂದರೆ ಇತ್ತ ಗ್ರೂಪ್-1 ರಿಂದ ಸೆಮಿಫೈನಲ್‌ಗೇರಲು ಟೀಮ್ ಇಂಡಿಯಾ ಮುಂದಿನ ಎರಡು ಮ್ಯಾಚ್‌ಗಳಲ್ಲೂ ಜಯ ಸಾಧಿಸಬೇಕು. ಅತ್ತ ಸೌತ್ ಆಫ್ರಿಕಾ ಅಥವಾ ವೆಸ್ಟ್ ಇಂಡೀಸ್ ತಂಡಗಳು ಮುಂದಿನ ಎರಡು ಪಂದ್ಯಗಳಲ್ಲಿ ಒಂದು ಜಯ ಸಾಧಿಸಿದರೂ ಅತ್ಯುತ್ತಮ ನೆಟ್ ರನ್ ರೇಟ್ ಕಾರಣ ಅಗ್ರಸ್ಥಾನದಲ್ಲಿ ಕಾಣಿಸಿಕೊಳ್ಳಲಿದೆ. ಟಿ20 ವಿಶ್ವಕಪ್ ಟೂರ್ನಿಯ 'ಸೂಪರ್ 8' ಹಂತದ ನಿಯಮದಂತೆ, ಒಂದು ಗುಂಪಿನ ಅಗ್ರಸ್ಥಾನಿ ತಂಡವು ಮತ್ತೊಂದು ಗುಂಪಿನ ಎರಡನೇ ಸ್ಥಾನದ ತಂಡದೊಂದಿಗೆ ಸೆಮಿಫೈನಲ್‌ನಲ್ಲಿ ಆಡಬೇಕಾಗುತ್ತದೆ.

**ಸೆಮಿಫೈನಲ್ 1:** ಗ್ರೂಪ್ 1 ರ ವಿಜೇತ v/s ಗ್ರೂಪ್ 2 ರ ರನ್ನರ್ ಅಪ್.

**ಸೆಮಿಫೈನಲ್ 2:** ಗ್ರೂಪ್ 2 ರ ವಿಜೇತ v/s ಗ್ರೂಪ್ 1 ರ ರನ್ನರ್ ಅಪ್.

ಇಂಗ್ಲೆಂಡ್ ತಂಡವು ಗ್ರೂಪ್ 2ರಲ್ಲಿ ಮೊದಲ ಸ್ಥಾನವನ್ನು ಖಚಿತಪಡಿಸಿಕೊಂಡಿದೆ. ಇದರಿಂದಾಗಿ ಪಾಕಿಸ್ತಾನಕ್ಕೆ ಈಗ ಕೇವಲ ಎರಡನೇ ಸ್ಥಾನ ಪಡೆಯಲು ಮಾತ್ರ ಅವಕಾಶವಿದೆ. ಇತ್ತ ಗ್ರೂಪ್ 1 ರಲ್ಲಿ ಭಾರತ ತಂಡವು ಸೌತ್ ಆಫ್ರಿಕಾ ವಿರುದ್ಧ ಸೋತಿರುವುದರಿಂದ, ತನ್ನ ಗುಂಪಿನಲ್ಲಿ ಎರಡನೇ ಸ್ಥಾನ ಪಡೆಯುವ ನಿರೀಕ್ಷೆಯಿದೆ. ಇಬ್ಬರೂ ತಮ್ಮ ಗುಂಪುಗಳಲ್ಲಿ ಎರಡನೇ ಸ್ಥಾನ ಪಡೆದರೆ, ಅವರು ಪರಸ್ಪರ ಎದುರಾಗಲು ಸಾಧ್ಯವಿಲ್ಲ. ಇದಾಗ್ಯೂ ಮುಂದಿನ ಎರಡು ಮ್ಯಾಚ್‌ಗಳಲ್ಲಿ ಭರ್ಜರಿ ಗೆಲುವು ದಾಖಲಿಸಿ ನೆಟ್ ರನ್ ರೇಟ್‌ನಲ್ಲಿ ಉಳಿದ ತಂಡಗಳನ್ನು ಹಿಂದಿಕ್ಕಿದರೆ ಭಾರತ ತಂಡವು ಅಂಕ ಪಟ್ಟಿಯಲ್ಲಿ ಮೊದಲ ಸ್ಥಾನಕ್ಕೇರಬಹುದು.

## ಪಾಕಿಸ್ತಾನದ ಲೆಕ್ಕಾಚಾರವನ್ನೇ ಬುಡಮೇಲು ಮಾಡಿದ ಬಾಬರ್

ಇಂಗ್ಲೆಂಡ್ ವಿರುದ್ಧದ ಸೂಪರ್-8 ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಪಾಕಿಸ್ತಾನ್ ತಂಡವು 20 ಓವರ್‌ಗಳಲ್ಲಿ 164 ರನ್ ಕಲೆಹಾಕಿದ್ದರು. ಈ ಗುರಿಯನ್ನು ಬೆನ್ನತ್ತಿದ ಇಂಗ್ಲೆಂಡ್ ತಂಡವು 19.1 ಓವರ್‌ಗಳಲ್ಲಿ 166 ರನ್ ಬಾರಿಸಿ 2 ವಿಕೆಟ್‌ಗಳ ಜಯ ಸಾಧಿಸಿದೆ. ಈ ಗೆಲುವಿನೊಂದಿಗೆ ಆಂಗ್ಲ ಪಡೆ ಸೆಮಿಫೈನಲ್‌ಗೇರಿದೆ. ಪಲ್ಲೆಕೆಲೆ ಇಂಟರ್‌ನ್ಯಾಷನಲ್ ಸ್ಟೇಡಿಯಂನಲ್ಲಿ ಟಾಸ್ ಗೆದ್ದ ತಂಡ ಅರ್ಧ ಪಂದ್ಯವನ್ನೇ ಗೆದ್ದಂತೆ. ಹೀಗಾಗಿಯೇ ಈ ಮೈದಾನದಲ್ಲಿ ಟಾಸ್ ಗೆಲ್ಲುವ ತಂಡ ಬ್ಯಾಟಿಂಗ್ ಆಯ್ದುಕೊಳ್ಳುತ್ತೆ. ಅದರಂತೆ ಇಂಗ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಟಾಸ್ ಗೆದ್ದ ಪಾಕ್ ತಂಡದ ನಾಯಕ ಸಲ್ಮಾನ್ ಅಲಿ ಅಘಾ ಮರು ಯೋಚಿಸದೇ ಬ್ಯಾಟಿಂಗ್ ಎಂದಿದ್ದರು.

ಅದರಂತೆ ಇನಿಂಗ್ಸ್ ಆರಂಭಿಸಿದ ಪಾಕ್ ತಂಡಕ್ಕೆ ಸಾಹಿಬ್‌ಝಾದ ಫರ್ಹಾನ್ ಉತ್ತಮ ಆರಂಭ ಒದಗಿಸಿದ್ದರು. ಪರಿಣಾಮ ಪವರ್‌ಪ್ಲೇನಲ್ಲಿ ಪಾಕ್ ತಂಡವು 46 ರನ್‌ಗಳಿಸಲು ಸಾಧ್ಯವಾಯಿತು. ಇದರ ನಡುವೆ 6 ಎಸೆತಗಳಲ್ಲಿ ಬಾಬರ್ ಆಝಂ 10 ರನ್ ಬಾರಿಸಿದ್ದರು. ಆದರೆ ಪವರ್‌ಪ್ಲೇ ಮುಕ್ತಾಯದ ಬಳಿಕ ಬಾಬರ್ ಟೆಸ್ಟ್ ಆಟ ಶುರು ಮಾಡಿಕೊಂಡರು. ಅಂದರೆ ಮೊದಲ 6 ಎಸೆತಗಳಲ್ಲಿ 10 ರನ್‌ಗಳಿಸಿದ್ದ ಬಾಬರ್ ಉಳಿದ 18 ಎಸೆತಗಳಲ್ಲಿ ಕಲೆಹಾಕಿದ್ದು ಕೇವಲ 15 ರನ್‌ಗಳು ಮಾತ್ರ. ಈ ಹದಿನೈದು ರನ್‌ಗಳಲ್ಲಿ 2 ರನ್ ಓವರ್ ಥ್ರೋನಿಂದ ಸಿಕ್ಕಿದ್ದು ಎಂಬುದು ಇಲ್ಲಿ ಉಲ್ಲೇಖಾರ್ಹ. ಅಂದರೆ ಪವರ್‌ಪ್ಲೇ ಬಳಿಕ ಬಾಬರ್ ಆಝಂ ಎದುರಿಸಿದ 18 ಎಸೆತಗಳಲ್ಲಿ ಕೇವಲ 13 ರನ್ ಮಾತ್ರ ಕಲೆಹಾಕಿದ್ದರು. ಇದರಲ್ಲಿ ಒಂದೇ ಒಂದು ಫೋರ್ ಕೂಡ ಇರಲಿಲ್ಲ.

4ನೇ ಓವರ್ ವೇಳೆ ಕ್ರೀಸ್‌ಗೆ ಆಗಮಿಸಿ 11ನೇ ಓವರ್ ತನಕ ಬ್ಯಾಟ್ ಬೀಸಿದ ಬಾಬರ್ ಆಝಂ ಕಲೆಹಾಕಿದ್ದು 24 ಎಸೆತಗಳಲ್ಲಿ 25 ರನ್‌ಗಳು ಮಾತ್ರ. ಈ 24 ಎಸೆತಗಳು ಪಾಕ್ ಪಾಲಿಗೆ ದುಬಾರಿಯಾಯಿತು ಎಂದರೆ ತಪ್ಪಾಗಲಾರದು. ಏಕೆಂದರೆ ಬೃಹತ್ ಮೊತ್ತದ ಟಾರ್ಗೆಟ್‌ನೊಂದಿಗೆ ಕಣಕ್ಕಿಳಿದಿದ್ದ ಪಾಕ್ ತಂಡವು 11 ಓವರ್‌ಗಳ ಮುಕ್ತಾಯದ ವೇಳೆಗೆ ಗಳಿಸಿದ್ದು ಕೇವಲ 73 ರನ್‌ಗಳು ಮಾತ್ರ.

ಇತ್ತ ಬಾಬರ್ ಆಝಂ ಔಟಾಗುತ್ತಿದ್ದಂತೆ ಪಾಕಿಸ್ತಾನ್ ತಂಡವು ಬಿರುಸಿನ ಬ್ಯಾಟಿಂಗ್‌ಗೆ ಒತ್ತು ನೀಡುವ ಪ್ರಯತ್ನಕ್ಕೆ ಕೈ ಹಾಕಿತು. ಈ ಪ್ರಯತ್ನದ ಫಲವಾಗಿ 20 ಓವರ್‌ಗಳಲ್ಲಿ 164 ರನ್ ಕಲೆಹಾಕಿತು. ಸಾಮಾನ್ಯವಾಗಿ ಪಲ್ಲೆಕೆಲೆ ಪಿಚ್‌ನಲ್ಲಿ 170 ರಿಂದ 180 ರನ್ ಗಳಿಸಿದರೆ ಮೊದಲು ಬ್ಯಾಟ್ ಮಾಡುವ ತಂಡ ಗೆಲ್ಲುತ್ತದೆ. ಇದೇ ಲೆಕ್ಕಾಚಾರದೊಂದಿಗೆ ಪಾಕಿಸ್ತಾನ್ ತಂಡ ಕೂಡ ಮೊದಲು ಬ್ಯಾಟ್ ಮಾಡಿ 180 ರಿಂದ 190 ರನ್‌ಗಳಿಸುವ ಇರಾದೆಯಲ್ಲಿತ್ತು. ಆದರೆ ಪವರ್‌ಪ್ಲೇ ಬಳಿಕ ಬಾಬರ್ ಆಡಿ ಟುಕ್ ಟುಕ್ ಆಟದಿಂದಾಗಿ ಪಾಕಿಸ್ತಾನ್ ತಂಡದ ಲೆಕ್ಕಾಚಾರಗಳೇ ಬುಡಮೇಲಾಯಿತು.

ಇದೀಗ ಬಾಬರ್ ಆಝಂ ಅವರ ಕಳಪೆ ಬ್ಯಾಟಿಂಗ್ ಬಗ್ಗೆ ಭಾರೀ ಟೀಕೆಗಳು ವ್ಯಕ್ತವಾಗುತ್ತಿದೆ. ಅದರಲ್ಲೂ ಅನುಭವಿ ದಾಂಡಿಗನಾಗಿರುವ ಬಾಬರ್ ಆಝಂ ಈ ಬಾರಿಯ ವಿಶ್ವಕಪ್‌ನಲ್ಲಿ ಕಲೆಹಾಕಿರುವ ಒಟ್ಟು ರನ್ 91 ಮಾತ್ರ. ಈ 91 ರನ್‌ಗಳಿಸಲು ಬಾಬರ್ ಬರೋಬ್ಬರಿ 81 ಎಸೆತಗಳನ್ನು ಎದುರಿಸಿದ್ದಾರೆ ಎಂಬುದು ಇಲ್ಲಿ ಉಲ್ಲೇಖಾರ್ಹ.



## ವಿಶ್ವಕಪ್‌ನಲ್ಲಿ 'ಬ್ರೂಕ್ ಬ್ಲಸ್ಟರ್' ವಿಶ್ವ ದಾಖಲೆ



ಪಾಕಿಸ್ತಾನ್ ವಿರುದ್ಧದ ಸೂಪರ್-8 ಪಂದ್ಯದಲ್ಲಿ ಇಂಗ್ಲೆಂಡ್ ತಂಡ 2 ವಿಕೆಟ್‌ಗಳ ಜಯ ಸಾಧಿಸಿದೆ. ಈ ಗೆಲುವಿನೊಂದಿಗೆ ಇಂಗ್ಲೆಂಡ್ ತಂಡವು ಸೆಮಿಫೈನಲ್‌ಗೇರಿದೆ. ಇನ್ನು ಈ ಪಂದ್ಯದಲ್ಲಿ ಭರ್ಜರಿ ಶತಕ ಸಿಡಿಸುವ ಮೂಲಕ ಇಂಗ್ಲೆಂಡ್ ತಂಡದ ನಾಯಕ ಹ್ಯಾರಿ ಬ್ರೂಕ್ ಹೊಸ ವಿಶ್ವ ದಾಖಲೆ ನಿರ್ಮಿಸಿದ್ದಾರೆ. ಟಿ20 ವಿಶ್ವಕಪ್‌ನಲ್ಲಿ ಹೊಸ ವಿಶ್ವ ದಾಖಲೆ ನಿರ್ಮಾಣವಾಗಿದೆ. ಈ ದಾಖಲೆ ಬರೆದಿರುವುದು ಇಂಗ್ಲೆಂಡ್ ತಂಡದ ನಾಯಕ ಹ್ಯಾರಿ ಬ್ರೂಕ್ . ಅದು ಸಹ ಭರ್ಜರಿ ಶತಕ ಸಿಡಿಸುವ ಮೂಲಕ. ಈ ಶತಕದೊಂದಿಗೆ ಕ್ರಿಸ್ ಗೇಲ್ ಹೆಸರಿನಲ್ಲಿದ್ದ ದಾಖಲೆಯನ್ನು ಅಳಿಸಿ ಹಾಕಿದ್ದಾರೆ.ಪಲ್ಲೆಕೆಲೆ ಇಂಟರ್‌ನ್ಯಾಷನಲ್ ಸ್ಟೇಡಿಯಂನಲ್ಲಿ ನಡೆದ ಪಾಕಿಸ್ತಾನ್ ವಿರುದ್ಧದ ಪಂದ್ಯದಲ್ಲಿ ಮೂರನೇ ಕ್ರಮಾಂಕದಲ್ಲಿ ಕಣಕ್ಕಿಳಿದ ಹ್ಯಾರಿ ಬ್ರೂಕ್ ಭರ್ಜರಿ ಬ್ಯಾಟಿಂಗ್ ಪ್ರದರ್ಶಿಸಿದ್ದರು. ಈ ಭರ್ಜರಿ ಬ್ಯಾಟಿಂಗ್‌ನೊಂದಿಗೆ ಕೇವಲ 50 ಎಸೆತಗಳಲ್ಲಿ ಶತಕ ಪೂರೈಸಿದ್ದರು.

ಈ ಶತಕದೊಂದಿಗೆ ಟಿ20 ವಿಶ್ವಕಪ್ ಇತಿಹಾಸದಲ್ಲೇ ಸೆಂಚುರಿ ಸಿಡಿಸಿದ ಮೊದಲ ಕ್ಯಾಪ್ಟನ್ ಎಂಬ ವಿಶ್ವ ದಾಖಲೆಯನ್ನು ಹ್ಯಾರಿ ಬ್ರೂಕ್ ತಮ್ಮದಾಗಿಸಿಕೊಂಡಿದ್ದಾರೆ.

ಅಲ್ಲದೆ ವಿಶ್ವಕಪ್‌ನಲ್ಲಿ ಗರಿಷ್ಠ ವೈಯುಕ್ತಿಕ ಸ್ಕೋರ್ ಗಳಿಸಿದ ನಾಯಕನೆಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ. ಇದಕ್ಕೂ ಮುನ್ನ ಈ ದಾಖಲೆ ವೆಸ್ಟ್ ಇಂಡೀಸ್‌ನ ಕ್ರಿಸ್ ಗೇಲ್ ಹೆಸರಿನಲ್ಲಿತ್ತು. 2010ರ ಟಿ20 ವಿಶ್ವಕಪ್‌ನಲ್ಲಿ ವೆಸ್ಟ್ ಇಂಡೀಸ್ ತಂಡದ ನಾಯಕನಾಗಿ ಕಣಕ್ಕಿಳಿದಿದ್ದ ಗೇಲ್ ಭಾರತದ ವಿರುದ್ಧದ ಪಂದ್ಯದಲ್ಲಿ 98 ರನ್ ಬಾರಿಸಿದ್ದರು.

ಈ ಮೂಲಕ ಟಿ20 ವಿಶ್ವಕಪ್‌ನಲ್ಲಿ ಗರಿಷ್ಠ ಸ್ಕೋರ್ ಗಳಿಸಿದ ನಾಯಕ ಎನಿಸಿಕೊಂಡಿದ್ದರು. ಇದೀಗ ಪಾಕಿಸ್ತಾನ್ ವಿರುದ್ಧದ ಪಂದ್ಯದಲ್ಲಿ 51 ಎಸೆತಗಳಲ್ಲಿ 4 ಸಿಕ್ಸರ್ ಹಾಗೂ 10 ಫೋರ್‌ಗಳೊಂದಿಗೆ 100 ರನ್ ಬಾರಿಸುವ ಮೂಲಕ ಇಂಗ್ಲೆಂಡ್ ತಂಡದ ನಾಯಕ ಹ್ಯಾರಿ ಬ್ರೂಕ್ ಹೊಸ ಇತಿಹಾಸ ನಿರ್ಮಿಸಿದ್ದಾರೆ.



## ನಿರ್ಣಾಯಕ ಪಂದ್ಯಕ್ಕೆ ಟೀಮ್ ಇಂಡಿಯಾ ಸಜ್ಜು

ಭಾರತ ತಂಡವು ಸೆಮಿಫೈನಲ್ ರೇಸ್‌ನಲ್ಲಿ ಉಳಿಯಬೇಕಿದ್ದರೆ ಝಿಂಬಾಬ್ವೆ ವಿರುದ್ಧದ ಪಂದ್ಯದಲ್ಲಿ ಜಯಗಳಿಸುವುದು ಅನಿವಾರ್ಯ. ಸೂಪರ್-8 ಸುತ್ತಿನ ನಿರ್ಣಾಯಕ ಪಂದ್ಯಕ್ಕಾಗಿ ಟೀಮ್ ಇಂಡಿಯಾದ ಆಡುವ ಬಳಗದಲ್ಲಿ ಮಹತ್ವದ ಬದಲಾವಣೆ ಮಾಡುವ ಸಾಧ್ಯತೆಯಿದೆ. ಟಿ20 ವಿಶ್ವಕಪ್‌ನ 48ನೇ ಪಂದ್ಯದಲ್ಲಿ ಭಾರತ ಮತ್ತು ಝಿಂಬಾಬ್ವೆ ತಂಡಗಳು ಮುಖಾಮುಖಿಯಾಗಲಿದೆ. ಚೆನ್ನೈನ ಎಂಎ ಚಿದಂಬರಂ ಸ್ಟೇಡಿಯಂನಲ್ಲಿ ನಾಳೆ ನಡೆಯಲಿರುವ ಈ ಪಂದ್ಯಕ್ಕಾಗಿ ಟೀಮ್ ಇಂಡಿಯಾ ಪ್ಲೇಯಿಂಗ್ ಇಲೆವೆನ್‌ನಲ್ಲಿ ಮಹತ್ವದ ಬದಲಾವಣೆ ಕಂಡು ಬರುವ ಸಾಧ್ಯತೆಯಿದೆ. ಏಕೆಂದರೆ ಸೌತ್ ಆಫ್ರಿಕಾ ವಿರುದ್ಧದ ಪಂದ್ಯದಲ್ಲಿ ಟೀಮ್ ಇಂಡಿಯಾ ಬ್ಯಾಟರ್‌ಗಳು ಕಳಪೆ ಪ್ರದರ್ಶನ ನೀಡಿದ್ದರು. ಹೀಗಾಗಿ ಈ ನಿರ್ಣಾಯಕ ಪಂದ್ಯಕ್ಕಾಗಿ ಟೀಮ್ ಇಂಡಿಯಾ ತನ್ನ ಬ್ಯಾಟಿಂಗ್ ಲೈನಪ್‌ನಲ್ಲಿ ಬದಲಾವಣೆ ಮಾಡಿಕೊಳ್ಳಬಹುದು. ಅದರಂತೆ ಝಿಂಬಾಬ್ವೆ ವಿರುದ್ಧ ಆರಂಭಿಕರಾಗಿ ಅಭಿಷೇಕ್ ಶರ್ಮಾ ಹಾಗೂ ಸಂಜು ಸ್ಯಾಮ್ಸನ್ ಕಣಕ್ಕಿಳಿಯಬಹುದು.

ಇನ್ನು ತಿಲಕ್ ವರ್ಮಾ ಬದಲಿಗೆ ಇಶಾನ್ ಕಿಶನ್‌ನ ಮೂರನೇ ಕ್ರಮಾಂಕದಲ್ಲಿ ಆಡಿಸುವ ಸಾಧ್ಯತೆಯಿದೆ. ಇನ್ನು ನಾಲ್ಕನೇ ಕ್ರಮಾಂಕದಲ್ಲಿ ಸೂರ್ಯಕುಮಾರ್ ಯಾದವ್ ಕಣಕ್ಕಿಳಿಯಬಹುದು.

ಆಲ್‌ರೌಂಡರ್‌ಗಳಾಗಿ ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ವಾಷಿಂಗ್ಟನ್ ಸುಂದರ್ ಕಣಕ್ಕಿಳಿಯುವುದನ್ನು ಎದುರು ನೋಡಬಹುದು. ಇನ್ನು ವೈಯುಕ್ತಿಕ ಕಾರಣಗಳಿಂದಾಗಿ ಮನೆಗೆ ತೆರಳಿರುವ ರಿಂಕು ಸಿಂಗ್ ಈ ಪಂದ್ಯಕ್ಕೆ ಅಲಭ್ಯರಾಗಲಿದ್ದಾರೆ ಎಂದು ವರದಿಯಾಗಿದೆ.





## ಕಾಲ್ಕೆರೆದು ಜಗಳಕ್ಕಿಳಿದ ಜೆಕೆ ನಾಯಕ

ಹುಬ್ಬಳ್ಳಿಯ ಕೆಎಸ್‌ಸಿಎ ಕ್ರಿಕೆಟ್ ಮೈದಾನದಲ್ಲಿ ನಡೆಯುತ್ತಿರುವ 2025 – 26ರ ರಣಜಿ ಟ್ರೋಫಿ ಫೈನಲ್ ಪಂದ್ಯದಲ್ಲಿ ಕರ್ನಾಟಕ ಹಾಗೂ ಜಮ್ಮು ಮತ್ತು ಕಾಶ್ಮೀರ ತಂಡಗಳು ಮುಖಾಮುಖಿಯಾಗಿವೆ. ಈ ಪಂದ್ಯದ ಎರಡನೇ ದಿನದಾಟದಂದು ಜಮ್ಮು ಮತ್ತು ಕಾಶ್ಮೀರ ತಂಡದ ನಾಯಕ ಪರಾಸ್ ಡೋಗ್ರಾ ಮತ್ತು ಕರ್ನಾಟಕದ ಫೀಲ್ಡರ್ ಅನೀಶ್ ಕೆವಿ ಮೈದಾನದಲ್ಲಿಯೇ ಜಗಳ ಮಾಡಿಕೊಂಡಿದ್ದಾರೆ. ಜಗಳ ವಿಕೋಪಕ್ಕೆ ತೆರಳಿ, ಜೆಕೆ ನಾಯಕ ಪರಾಸ್ ಡೋಗ್ರಾ, ಅನೀಶ್ ತಲೆಗೆ ಡಿಚ್ಚಿ ಹೊಡೆದಿದ್ದಾರೆ. ಕೂಡಲೇ ಸ್ಥಳಕ್ಕಾಗಮಿಸಿದ ಕರ್ನಾಟಕದ ಮಾಜಿ ನಾಯಕ ಮಯಾಂಕ್ ಅಗರ್ವಾಲ್, ಪರಾಸ್ ಡೋಗ್ರಾ ಜೊತೆಗೆ ವಾಗ್ವಾದ ನಡೆಸಿದ್ದಾರೆ. ಇದನ್ನು ಗಮನಿಸಿದ ಅಂಪೈರ್‌ಗಳು ಮಧ್ಯಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದ್ದಾರೆ. ಜಮ್ಮು ಮತ್ತು ಕಾಶ್ಮೀರದ ಇನ್ನಿಂಗ್ಸ್‌ನ 100ನೇ ಓವರ್‌ನಲ್ಲಿ ಈ ಘಟನೆ ನಡೆದಿದ್ದು, ಪ್ರಸಿದ್ ಕೃಷ್ಣ ಎಸೆತವನ್ನು ಪರಾಸ್ ಡೋಗ್ರಾ ಗಲ್ಲಿ ದಿಕ್ಕಿನಲ್ಲಿ ಆಡಿದರು. ಅಲ್ಲಿದ್ದ ಫೀಲ್ಡರ್ ಡೈವ್ ಮಾಡಿ ಚೆಂಡನ್ನು ತಡೆಯಲು ಪ್ರಯತ್ನಿಸಿದರಾದರೂ ಸಾಧ್ಯವಾಗಲಿಲ್ಲ. ಹೀಗಾಗಿ ಚೆಂಡು ಬೌಂಡರಿ ಗೆರೆ ದಾಟಿತು. ಈ ನಡುವೆ ಸಿಲ್ಲಿ ಪಾಯಿಂಟ್‌ನಲ್ಲಿ ಫಿಲ್ಡಿಂಗ್ ಮಾಡುತ್ತಿದ್ದ ಕರ್ನಾಟಕದ ಕೆವಿ ಅನೀಶ್ ಹಾಗೂ ಪರಾಸ್ ಡೋಗ್ರಾ ನಡುವೆ ಮಾತಿನ ಚಕಮಕಿ ಪ್ರಾರಂಭವಾಗಿದೆ. ಇದೇ ವೇಳೆ ಪರಾಸ್ ಡೋಗ್ರಾ, ಅನೀಶ್ ತಲೆಗೆ ಡಿಕ್ಕಿ ಹೊಡೆದಿದ್ದಾರೆ. ಪರಿಸ್ಥಿತಿ ಕೈಮೀರಿ ಅಂತಕ್ಕೆ ಸಾಗಿದೆ. ಈ ಹಂತದಲ್ಲಿ, ಮಾಯಾಂಕ್ ಅಗರ್ವಾಲ್ ಮಧ್ಯಪ್ರವೇಶಿಸಿ ಪರಿಸ್ಥಿತಿಯನ್ನು ಶಾಂತಗೊಳಿಸಲು ಪ್ರಯತ್ನಿಸಿದರು. ಆದರೆ, ಸ್ವಲ್ಪ ಸಮಯ ವಾದ ಮುಂದುವರೆಯಿತು.

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news

**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**